# ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000

**27.01.2007ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 36ನೇ ಸಂಪುಟದ 1ನೇ ಸಂಚಿಕೆಯಲ್ಲಿ 87 ರಿಂದ 132ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.**

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

### ಅಧ್ಯಾಯ – I
### ಪ್ರಾರಂಭಿಕ


1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ
2. ಪರಿಭಾಷೆಗಳು


### ಅಧ್ಯಾಯ – II
### ಅಂಕಿಚಿಹ್ನೆ


3. ವಿದ್ಯುನ್ಮಾನ ದಾಖಲೆಗಳ ಅಧಿಪ್ರಮಾಣನ


### ಅಧ್ಯಾಯ – III
### ವಿದ್ಯುನ್ಮಾನ ಆಡಳಿತ ನಿರ್ವಹಣೆ


4. ವಿದ್ಯುನ್ಮಾನ ದಾಖಲೆಗಳಿಗೆ ಕಾನೂನು ಮಾನ್ಯತೆ
5. ಅಂಕಿ ಚಿಹ್ನೆಗಳಿಗೆ ಕಾನೂನು ಮಾನ್ಯತೆ
6. ಸರ್ಕಾರದಲ್ಲಿ ಮತ್ತು ಅದರ ಏಜೆನ್ಸಿಗಳಲ್ಲಿ ವಿದ್ಯುನ್ಮಾನ ದಾಖಲೆಗಳ ಮತ್ತು ಅಂಕಿಚಿಹ್ನೆಗಳ ಬಳಕೆ
7. ವಿದ್ಯುನ್ಮಾನ ದಾಖಲೆಗಳನ್ನು ಉಳಿಸಿಕೊಳ್ಳುವುದು
8. ವಿದ್ಯುನ್ಮಾನ ರಾಜಪತ್ರದಲ್ಲಿ ನಿಯಮ, ವಿನಿಯಮ, ಇತ್ಯಾದಿಗಳ ಪ್ರಕಟಣೆ
9. 6, 7 ಮತ್ತು 8ನೇ ಪ್ರಕರಣಗಳು ದಸ್ತಾವೇಜನ್ನು ವಿದ್ಯುನ್ಮಾನ ನಮೂನೆಯಲ್ಲಿ ಸ್ವೀಕರಿಸಬೇಕೆಂದು ಒತ್ತಾಯಿಸುವ ಹಕ್ಕನ್ನು ಪ್ರದಾನ ಮಾಡದಿರುವುದು
10. ಅಂಕಿ ಚಿಹ್ನೆಯ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ


### ಅಧ್ಯಾಯ – IV
### ವಿದ್ಯುನ್ಮಾನ ದಾಖಲೆಗಳ ಆರೋಪಣ, ಸ್ವೀಕೃತಿ ಮತ್ತು ರವಾನೆ


11. ವಿದ್ಯುನ್ಮಾನ ದಾಖಲೆಗಳ ಆರೋಪಣ
12. ಸ್ವೀಕೃತಿಯ ರಸೀದಿ
13. ವಿದ್ಯುನ್ಮಾನ ದಾಖಲೆಯನ್ನು ರವಾನಿಸಿದ ಮತ್ತು ಸ್ವೀಕರಿಸಿದ ಸಮಯ ಮತ್ತು ಸ್ಥಳ


### ಅಧ್ಯಾಯ – V
### ಸುರಕ್ಷಿತ ವಿದ್ಯುನ್ಮಾನ ದಾಖಲೆಗಳು ಮತ್ತು ಸುರಕ್ಷಿತ ಅಂಕಿ ಚಿಹ್ನೆಗಳು


14. ಸುರಕ್ಷಿತ ವಿದ್ಯುನ್ಮಾನ ದಾಖಲೆ
15. ಸುರಕ್ಷಿತ ಅಂಕಿ ಚಿಹ್ನೆ
16. ಸುರಕ್ಷಾ ಕಾರ್ಯವಿಧಾನ

## ಅಧ್ಯಾಯ – VI

### ಪ್ರಮಾಣೀಕರಿಸುವ ಪ್ರಾಧಿಕಾರಗಳ ವಿನಿಯಮನ


17. ನಿಯಂತ್ರಕ ಮತ್ತು ಇತರ ಅಧಿಕಾರಿಗಳ ನೇಮಕ
18. ನಿಯಂತ್ರಕನ ಪ್ರಕಾರ್ಯಗಳು
19. ವಿದೇಶೀ ಪ್ರಮಾಣೀಕರಿಸುವ ಪ್ರಾಧಿಕಾರಗಳಿಗೆ ಮಾನ್ಯತೆ
20. ನಿಯಂತ್ರಕನು ಭಂಡಾರಿಗನಾಗಿ ಕಾರ್ಯನಿರ್ವಹಿಸುವುದು
21. ಅಂಕಿ ಚಿಹ್ನೆಯ ಪ್ರಮಾಣಪತ್ರಗಳನ್ನು ನೀಡಲು ಲೈಸೆನ್ಸು
22. ಲೈಸೆನ್ಸಿಗಾಗಿ ಅರ್ಜಿ
23. ಲೈಸೆನ್ಸಿನ ನವೀಕರಣ
24. ಲೈಸೆನ್ಸನ್ನು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಕಾರ್ಯವಿಧಾನ
25. ಲೈಸೆನ್ಸಿನ ಅಮಾನತು
26. ಲೈಸೆನ್ಸಿನ ಅಮಾನತ್ತಿನ ಅಥವಾ ರದ್ದಿಯಾತಿಯ ನೋಟೀಸು
27. ಪ್ರತ್ಯಾಯೋಜಿಸುವ ಅಧಿಕಾರ
28. ಉಲ್ಲಂಘನೆಗಳ ಬಗ್ಗೆ ತನಿಖೆ ಮಾಡುವ ಅಧಿಕಾರ
29. ಗಣಕಯಂತ್ರಗಳು ಅಥವಾ ದತ್ತಾಂಶಗಳನ್ನು ಬಳಸುವ ಅವಕಾಶ
30. ಪ್ರಮಾಣೀಕರಿಸುವ ಪ್ರಾಧಿಕಾರವು ಕೆಲವು ಕಾರ್ಯವಿಧಾನಗಳನ್ನು ಅನುಸರಿಸುವುದು
31. ಪ್ರಮಾಣೀಕರಿಸುವ ಪ್ರಾಧಿಕಾರವು ಅಧಿನಿಯಮ, ಮುಂತಾದವುಗಳ ಪಾಲನೆಯನ್ನು ಖಾತ್ರಿಪಡಿಸುವುದು
32. ಲೈಸೆನ್ಸನ್ನು ಪ್ರದರ್ಶಿಸುವುದು
33. ಲೈಸೆನ್ಸನ್ನು ಹಿಂದಿರುಗಿಸುವುದು
34. ಬಹಿರಂಗಪಡಿಸುವಿಕೆ


## ಅಧ್ಯಾಯ – VII

### ಅಂಕಿಚಿಹ್ನೆ ಪ್ರಮಾಣ ಪತ್ರಗಳು


35. ಪ್ರಮಾಣೀಕರಿಸುವ ಪ್ರಾಧಿಕಾರವು ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡುವುದು
36. ಅಂಕಿ ಚಿಹ್ನೆ ಪ್ರಮಾಣ ಪತ್ರವನ್ನು ನೀಡಿದ ಮೇಲೆ ನಿರೂಪಣೆಗಳು
37. ಅಂಕಿ ಚಿಹ್ನೆ ಪ್ರಮಾಣ ಪತ್ರದ ಅಮಾನತು
38. ಅಂಕಿ ಚಿಹ್ನೆ ಪ್ರಮಾಣ ಪತ್ರದ ರದ್ದಿಯಾತಿ
39. ಅಮಾನತ್ತಿನ ಅಥವಾ ರದ್ದಿಯಾತಿಯ ನೋಟೀಸು


## ಅಧ್ಯಾಯ – VIII

### ವಂತಿಗೆದಾರರ ಕರ್ತವ್ಯಗಳು


40. ಜೋಡಿ ಕೀಲಿಗಳನ್ನು ಸೃಜಿಸುವುದು
41. ಅಂಕಿ ಚಿಹ್ನೆ ಪ್ರಮಾಣ ಪತ್ರದ ಅಂಗೀಕಾರ
42. ಖಾಸಗಿ ಕೀಲಿಯ ನಿಯಂತ್ರಣ

## ಅಧ್ಯಾಯ – IX

## ದಂಡನೆಗಳು ಮತ್ತು ನ್ಯಾಯನಿರ್ಣಯ

43. ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ, ಇತ್ಯಾದಿಗಳಿಗೆ ಹಾನಿಯುಂಟುಮಾಡಿದ್ದಕ್ಕಾಗಿ ದಂಡನೆ

44. ಮಾಹಿತಿ, ವಿವರಪಟ್ಟಿಕೆ, ಮುಂತಾದವುಗಳನ್ನು ಒದಗಿಸಲು ತಪ್ಪಿದ್ದಕ್ಕಾಗಿ ದಂಡನೆ

45. ಇನ್ನಿತರ ದಂಡನೆ

46. ನ್ಯಾಯ ನಿರ್ಣಯದ ಅಧಿಕಾರ

47. ನ್ಯಾಯ ನಿರ್ಣಯ ಅಧಿಕಾರಿಯು ಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳು

## ಅಧ್ಯಾಯ – X

## ಸೈಬರ್ ನಿಯಂತ್ರಣ ಅಪೀಲು ನ್ಯಾಯಾಧಿಕರಣ

48. ಸೈಬರ್ ಅಪೀಲು ನ್ಯಾಯಾಧಿಕರಣದ ಸ್ಥಾಪನೆ

49. ಸೈಬರ್ ಅಪೀಲು ನ್ಯಾಯಾಧಿಕರಣದ ರಚನೆ

50. ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯಾಗಿ ನೇಮಕಗೊಳ್ಳುವುದಕ್ಕೆ ಇರಬೇಕಾದ ಅರ್ಹತೆಗಳು

51. ಪದಾವಧಿ

52. ಅಧ್ಯಕ್ಷಾಧಿಕಾರಿಯ ಸಂಬಳ, ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು

53. ಖಾಲಿ ಸ್ಥಾನಗಳ ಭರ್ತಿ

54. ರಾಜೀನಾಮೆ ಮತ್ತು ತೆಗೆದುಹಾಕುವುದು

55. ಅಪೀಲು ನ್ಯಾಯಾಧಿಕರಣವನ್ನು ರಚಿಸುವ ಆದೇಶಗಳು ಅಂತಿಮವಾಗಿರುವುದು ಮತ್ತು ಅದರ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು

56. ಸೈಬರ್ ಅಪೀಲು ನ್ಯಾಯಾಧಿಕರಣದ ಸಿಬ್ಬಂದಿ

57. ಸೈಬರ್ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು

58. ಸೈಬರ್ ಅಪೀಲು ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳು

59. ಕಾನೂನುಸಮ್ಮತ ಪ್ರಾತಿನಿಧ್ಯದ ಹಕ್ಕು

60. ಕಾಲಪರಿಮಿತಿ

61. ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯು ಇಲ್ಲದಿರುವುದು

62. ಉಚ್ಚ ನ್ಯಾಯಾಲಯಕ್ಕೆ ಅಪೀಲು

63. ಉಲ್ಲಂಘನೆಗಳನ್ನು ರಾಜೀ ಮಾಡಿಕೊಳ್ಳುವುದು

64. ದಂಡದ ವಸೂಲಿ

## ಅಧ್ಯಾಯ – XI

## ಅಪರಾಧಗಳು

65. ಗಣಕಯಂತ್ರದ ಮೂಲ ದಸ್ತಾವೇಜುಗಳನ್ನು ಅಕ್ರಮವಾಗಿ ತಿದ್ದುವುದು

66. ಗಣಕಯಂತ್ರ ವ್ಯವಸ್ಥೆಯನ್ನು ಛಿನ್ನಭಿನ್ನಗೊಳಿಸುವುದು

67. ವಿದ್ಯುನ್ಮಾನ ನಮೂನೆಯಲ್ಲಿ ಅಶ್ಲೀಲವಾದ ಮಾಹಿತಿಯನ್ನು ಪ್ರಕಟಿಸುವುದು

68. ನಿರ್ದೇಶನಗಳನ್ನು ನೀಡಲು ನಿಯಂತ್ರಕನ ಅಧಿಕಾರ

69. ಮಾಹಿತಿಯನ್ನು ಕೊಡುವಂತೆ ಸಾಂಕೇತಿಕ ಭಾಷೆಯಿಂದ ಸಾಮಾನ್ಯ ಭಾಷೆಗೆ ಪರಿವರ್ತಿಸಲು ಬೇಕಾದ ಅನುಕೂಲಗಳನ್ನು ನೀಡಲು ವಂತಿಗೆದಾರನಿಗೆ ನಿಯಂತ್ರಕನ ನಿರ್ದೇಶನಗಳು

70. ಸಂರಕ್ಷಿತ ವ್ಯವಸ್ಥೆ
71. ತಪ್ಪು ನಿರೂಪಣೆಗಾಗಿ ದಂಡ
72. ಗೌಪ್ಯತೆ ಮತ್ತು ರಹಸ್ಯತೆಯ ಉಲ್ಲಂಘನೆಗೆ ದಂಡ
73. ಕೆಲವು ವಿವರಗಳಲ್ಲಿ ತಪ್ಪಾಗಿರುವ ಅಂಕಿಚಿಹ್ನೆ ಪ್ರಮಾಣಪತ್ರವನ್ನು ಪ್ರಕಟಿಸಿದ್ದಕ್ಕಾಗಿ ದಂಡ
74. ಮೋಸಮಾಡುವ ಉದ್ದೇಶಕ್ಕಾಗಿ ಪ್ರಕಟಣೆ
75. ಭಾರತದ ಹೊರಗೆ ಮಾಡಿದ ಅಪರಾಧ ಅಥವಾ ಉಲ್ಲಂಘನೆಗೆ ಅಧಿನಿಯಮವು ಅನ್ವಯವಾಗುವುದು
76. ಮುಟ್ಟುಗೋಲು
77. ದಂಡಗಳು ಅಥವಾ ಮುಟ್ಟುಗೋಲುಗಳು ಇತರ ದಂಡನೆಗಳಿಗೆ ಅಡ್ಡಿಯಾಗದಿರುವುದು
78. ಅಪರಾಧ ತನಿಖಾಧಿಕಾರ

## ಅಧ್ಯಾಯ – XII

### ಕಾರ್ಯಾಚರಣೆ ಜಾಲದ ಸೇವೆಯನ್ನು ಒದಗಿಸುವವರು ಕೆಲವು ಸಂದರ್ಭಗಳಲ್ಲಿ ಹೊಣೆಯಾಗದಿರುವುದು

79. ಕಾರ್ಯಾಚರಣೆ ಜಾಲದ ಸೇವೆಯನ್ನು ಒದಗಿಸುವವರು ಕೆಲವು ಸಂದರ್ಭಗಳಲ್ಲಿ ಹೊಣೆಯಾಗದಿರುವುದು

## ಅಧ್ಯಾಯ – XIII

### ಸಂಕೀರ್ಣ

80. ಪೊಲೀಸು ಅಧಿಕಾರಿ ಮತ್ತು ಇತರ ಅಧಿಕಾರಿಗಳಿಗೆ ಪ್ರವೇಶ, ಶೋಧನೆ, ಮುಂತಾದವುಗಳ ಬಗ್ಗೆ ಅಧಿಕಾರ
81. ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು
81ಎ. ವಿದ್ಯುನ್ಮಾನ ಚೆಕ್ಕಿಗೆ ಮತ್ತು ಟ್ರಂಕೇಟೆಡ್ ಚೆಕ್ಕುಗಳಿಗೆ ಅಧಿನಿಯಮದ ಅನ್ವಯ
82. ನಿಯಂತ್ರಕ, ಉಪನಿಯಂತ್ರಕ ಮತ್ತು ಸಹಾಯಕ ನಿಯಂತ್ರಕರು ಲೋಕನೌಕರರಾಗಿರುವುದು
83. ನಿರ್ದೇಶನಗಳನ್ನು ನೀಡುವ ಅಧಿಕಾರ
84. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ
85. ಕಂಪನಿಗಳಿಂದ ಅಪರಾಧಗಳು
86. ತೊಂದರೆಗಳ ನಿವಾರಣೆ
87. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ
88. ಸಲಹಾ ಸಮಿತಿಯ ರಚನೆ
89. ನಿಯಂತ್ರಕನ ವಿನಿಯಮ ರಚನಾಧಿಕಾರ
90. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ
91. 1860 ರ ಅಧಿನಿಯಮ 45 ರ ತಿದ್ದುಪಡಿ
92. 1872 ರ ಅಧಿನಿಯಮ 1 ರ ತಿದ್ದುಪಡಿ
93. 1891 ರ ಅಧಿನಿಯಮ 18 ರ ತಿದ್ದುಪಡಿ
94. 1934 ರ ಅಧಿನಿಯಮ 2 ರ ತಿದ್ದುಪಡಿ

**ಮೊದಲನೇ ಅನುಸೂಚಿ**

**ಎರಡನೇ ಅನುಸೂಚಿ**

**ಮೂರನೇ ಅನುಸೂಚಿ**

**ನಾಲ್ಕನೇ ಅನುಸೂಚಿ**

# ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000

## (2000ದ ಅಧಿನಿಯಮ ಸಂಖ್ಯೆ 21)

**[9ನೇ ಜೂನ್, 2000]**

ಸರ್ಕಾರಿ ಏಜೆನ್ಸಿಗಳಿಗೆ ದಸ್ತಾವೇಜುಗಳನ್ನು ವಿದ್ಯುನ್ಮಾನ ರೂಪದಲ್ಲಿ ಸಲ್ಲಿಸಲು ಅನುಕೂಲವಾಗುವಂತೆ ಮಾಹಿತಿಯ ಸಂವಹನ ಹಾಗೂ ಸಂಗ್ರಹಣೆಯ ಕಾಗದ ಆಧಾರಿತ ಪದ್ಧತಿಗಳಿಗೆ ಬದಲೀ ವ್ಯವಸ್ಥೆಗಳ ಬಳಕೆಯನ್ನು ಒಳಗೊಂಡ ಮತ್ತು ಸಾಮಾನ್ಯವಾಗಿ "ವಿದ್ಯುನ್ಮಾನ ವಾಣಿಜ್ಯ" ವೆಂದು ಉಲ್ಲೇಖಿಸಲಾಗುವ ವಿದ್ಯುನ್ಮಾನ ದತ್ತಾಂಶದ ಪರಸ್ಪರ ವಿನಿಮಯ ಮತ್ತು ಇತರ ವಿದ್ಯುನ್ಮಾನ ಸಂವಹನದ ಮೂಲಕ ನಿರ್ವಹಿಸುವ ವಹಿವಾಟುಗಳಿಗೆ ಕಾನೂನಿನ ಮಾನ್ಯತೆಯನ್ನು ನೀಡುವುದಕ್ಕಾಗಿ ಮತ್ತು ಭಾರತ ದಂಡ ಸಂಹಿತೆ, 1860, ಭಾರತ ಸಾಕ್ಷ್ಯ ಅಧಿನಿಯಮ, 1872, ಬ್ಯಾಂಕರುಗಳ ಪುಸ್ತಕ ಸಾಕ್ಷ್ಯ ಅಧಿನಿಯಮ, 1891 ಮತ್ತು ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 – ಇವುಗಳನ್ನು ಇನ್ನಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಅಂತರ ರಾಷ್ಟ್ರೀಯ ವ್ಯಾಪಾರ ಕಾನೂನಿನ ಸಂಯುಕ್ತ ರಾಷ್ಟ್ರಗಳ ಆಯೋಗವು ಅಂಗೀಕರಿಸಿದ ವಿದ್ಯುನ್ಮಾನ ವಾಣಿಜ್ಯ ಮಾದರಿ ಕಾನೂನನ್ನು ಸಂಯುಕ್ತ ರಾಷ್ಟ್ರಗಳ ಸಾಮಾನ್ಯ ಸಭೆಯು, ದಿನಾಂಕ 30, ಜನವರಿ 1997ರ ಎ/ ಆರ್‌ಇಎಸ್/ 51/ 162ರ ನಿರ್ಣಯದ ಮೂಲಕ ಅಂಗೀಕರಿಸಿರುವುದರಿಂದ;

ಮತ್ತು ಸದರಿ ನಿರ್ಣಯವು, ಇತರ ವಿಷಯಗಳ ಜತೆಗೆ, ಮಾಹಿತಿಯ ಸಂವಹನ ಹಾಗೂ ಸಂಗ್ರಹಣೆಯ ಕಾಗದ ಆಧಾರಿತ ಪದ್ಧತಿಗಳ ಬದಲಿ ವ್ಯವಸ್ಥೆಗಳಿಗೆ ಅನ್ವಯಿಸುವ ಕಾನೂನು ಏಕರೂಪವಾಗಿರಬೇಕೆಂಬ ದೃಷ್ಟಿಯಿಂದ ಎಲ್ಲ ರಾಷ್ಟ್ರಗಳು ತಮ್ಮ ಕಾನೂನುಗಳನ್ನು ಅಧಿನಿಯಮಿಸುವಾಗ ಅಥವಾ ಅವುಗಳನ್ನು ಪರಿಷ್ಕರಿಸುವಾಗ ಸದರಿ ಮಾದರಿ ಕಾನೂನಿಗೆ ಅನುಕೂಲಕರ ಪರಿಗಣನೆ ನೀಡಬೇಕೆಂದು ಶಿಫಾರಸು ಮಾಡಿರುವುದರಿಂದ;

ಮತ್ತು ಸದರಿ ನಿರ್ಣಯವನ್ನು ಕಾರ್ಯಗತಗೊಳಿಸುವುದು ಮತ್ತು ವಿಶ್ವಸನೀಯ ವಿದ್ಯುನ್ಮಾನ ದಾಖಲೆಗಳ ಮೂಲಕ ಸರ್ಕಾರಿ ಸೇವೆಯನ್ನು ಸಮರ್ಥವಾಗಿ ಒದಗಿಸುವುದು ಅಗತ್ಯವೆಂದು ಪರಿಗಣಿಸಿರುವುದರಿಂದ;

ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಸಂಸತ್ತಿನಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ – I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ, ಪ್ರಾರಂಭ ಮತ್ತು ಅನ್ವಯ.–** (1) ಈ ಅಧಿನಿಯಮವನ್ನು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು ಮತ್ತು ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಯಾರೇ ವ್ಯಕ್ತಿಯು ಭಾರತದ ಹೊರಗೆ ಮಾಡಿದ ಯಾವುದೇ ಅಪರಾಧ ಅಥವಾ ಅದರ ಅಡಿಯಲ್ಲಿನ ಉಲ್ಲಂಘನೆಗೆ ಸಹ ಇದು ಅನ್ವಯವಾಗತಕ್ಕದ್ದು.

(3) ಇದು ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು ಮತ್ತು ಅಂಥ ಯಾವುದೇ ಉಪಬಂಧದಲ್ಲಿ ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿದಂತೆ ಮಾಡಲಾಗಿರುವ ಯಾವುದೇ ಉಲ್ಲೇಖವನ್ನು ಆ ಉಪಬಂಧದ ಪ್ರಾರಂಭಕ್ಕೆ ಸಂಬಂಧಿಸಿದಂತೆ ಮಾಡಲಾದ ಉಲ್ಲೇಖವೆಂದು ಅರ್ಥೈಸತಕ್ಕದ್ದು.

(4) ಈ ಅಧಿನಿಯಮದಲ್ಲಿ ಇರುವುದು ಯಾವುದೂ, ಈ ಮುಂದಿನವುಗಳಿಗೆ ಅನ್ವಯಿಸತಕ್ಕದ್ದಲ್ಲ,–

(ಎ) ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ (1881ರ 26) 13ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ (ಒಂದು ಚೆಕ್ಕನ್ನು ಹೊರತುಪಡಿಸಿ) ಒಂದು ವರ್ಗಾವಣೀಯ ಲಿಖಿತ;

(ಬಿ) ಪವರ್ಸ್ ಆಫ್ ಅಟಾರ್ನಿ ಅಧಿನಿಯಮ, 1882 (1882ರ 7)ರ 1ಎ ಪ್ರಕರಣದಲ್ಲಿ ಪರಿಭಾಷಿಸಲಾದ ಒಂದು ಪವರ್ ಆಫ್ ಅಟಾರ್ನಿ;

(ಸಿ) ಭಾರತ ಟ್ರಸ್ಟ್ ಅಧಿನಿಯಮ, 1882 (1882ರ 2)ರ 3ನೇ ಪ್ರಕರಣದಲ್ಲಿ ಪರಿಭಾಷಿಸಲಾದಂತೆ ಒಂದು ಟ್ರಸ್ಟ್;

(ಡಿ) ಯಾವುದೇ ಹೆಸರಿನಿಂದ ಕರೆಯಲಾಗುವ ಇತರ ಯಾವುದೇ ಮರಣ ಶಾಸನಿಕ ವಿಲೇವಾರಿಯು ಒಳಗೊಂಡಂತೆ ಭಾರತದ ಉತ್ತರಾಧಿಕಾರ ಅಧಿನಿಯಮ, 1925 (1925ರ 39)ರ 2ನೇ ಪ್ರಕರಣದ (ಹೆಚ್) ಖಂಡದಲ್ಲಿ ಪರಿಭಾಷಿಸಲಾದಂಥ ಮರಣ ಶಾಸನ;

(ಇ) ಸ್ಥಿರಸ್ವತ್ತಿನ ಅಥವಾ ಅಂಥ ಸ್ಥಿರಸ್ವತ್ತಿನಲ್ಲಿನ ಯಾವುದೇ ಹಿತಾಸಕ್ತಿಯ ಮಾರಾಟದ ಅಥವಾ ಹಸ್ತಾಂತರಣದ ಯಾವುದೇ ಕರಾರು;

(ಎಫ್) ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚಿಸಬಹುದಾದಂಥ ಯಾವುದೇ ವರ್ಗದ ದಸ್ತಾವೇಜುಗಳು ಅಥವಾ ವ್ಯವಹಾರಗಳು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) ವ್ಯಾಕರಣ ವ್ಯತ್ಯಾಸಗಳು ಹಾಗೂ ಸಜಾತೀಯ ಪದಾವಳಿಗಳೊಂದಿಗೆ "ಪ್ರವೇಶಾವಕಾಶ" ಎಂದರೆ ಒಂದು ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲದ ತರ್ಕ ಸಂಬಂಧೀ, ಅಂಕಗಣಿತ ಸಂಬಂಧೀ ಅಥವಾ ಜ್ಞಾಪಕ ಕಾರ್ಯಸಂಬಂಧೀ ಮೂಲಗಳನ್ನು ನೋಡುವುದು, ಸೂಚನೆ ನೀಡುವುದು ಅಥವಾ ಸಂವಹನ ಹೊಂದುವುದು;

(ಬಿ) "ವಿಳಾಸದಾರ" ಎಂದರೆ ವಿದ್ಯುನ್ಮಾನ ದಾಖಲೆಯನ್ನು ಸ್ವೀಕರಿಸಲು ಮೂಲಕರ್ತನಿಂದ ಉದ್ದೇಶಿತನಾದ ವ್ಯಕ್ತಿ; ಆದರೆ ಅದರಲ್ಲಿ ಯಾರೇ ಮಧ್ಯವರ್ತಿಯು ಒಳಗೊಳ್ಳುವುದಿಲ್ಲ;

(ಸಿ) "ನ್ಯಾಯ ನಿರ್ಣಯ ಅಧಿಕಾರಿ" ಎಂದರೆ 46ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಒಬ್ಬ ನ್ಯಾಯ ನಿರ್ಣಯ ಅಧಿಕಾರಿ;

(ಡಿ) ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ "ಅಂಕಿಚಿಹ್ನೆ ಹಾಕುವುದು" ಎಂದರೆ ಅಂಕಿಚಿಹ್ನೆಯ ಮೂಲಕ ವಿದ್ಯುನ್ಮಾನ ದಾಖಲೆಯನ್ನು ಅಧಿಪ್ರಮಾಣಿಸುವ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯು ಅಳವಡಿಸಿಕೊಂಡಿರುವ ಯಾವುದೇ ವಿಧಾನ ಅಥವಾ ಪ್ರಕ್ರಿಯೆ;

(ಇ) "ಸಮುಚಿತ ಸರ್ಕಾರ" ಎಂದರೆ, –

**(i)** ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ – II ರಲ್ಲಿ ನಮೂದಿಸಲಾದ;

**(ii)** ಸಂವಿಧಾನದ ಏಳನೇ ಅನುಸೂಚಿಯ ಪಟ್ಟಿ – IIIರ ಅಡಿಯಲ್ಲಿ ಅಧಿನಿಯಮಿಸಲಾದ ಯಾವುದೇ ರಾಜ್ಯ ಕಾನೂನಿಗೆ ಸಂಬಂಧಪಟ್ಟ

– ಯಾವುದೇ ವಿಷಯದ ಸಂಬಂಧದಲ್ಲಿ ರಾಜ್ಯ ಸರ್ಕಾರ ಮತ್ತು ಯಾವುದೇ ಇತರ ಸಂದರ್ಭದಲ್ಲಿ ಕೇಂದ್ರ ಸರ್ಕಾರ;

(ಎಫ್) "ಅಸಮ ಗೂಢಲಿಪೀಕರಣ ವ್ಯವಸ್ಥೆ" ಎಂದರೆ ಅಂಕಿಚಿಹ್ನೆಯನ್ನು ಸೃಜಿಸುವ ಸಲುವಾಗಿ ಒಂದು ಖಾಸಗಿ ಕೀಲಿಯನ್ನು ಮತ್ತು ಅಂಕಿಚಿಹ್ನೆಯನ್ನು ಪರಿಶೀಲಿಸುವ ಸಲುವಾಗಿ ಒಂದು ಸಾರ್ವಜನಿಕ ಕೀಲಿಯನ್ನು ಒಳಗೊಂಡಿರುವ ರಕ್ಷಿತ ಕೀಲಿ ಜೋಡಿಯ ಒಂದು ವ್ಯವಸ್ಥೆ;

(ಜಿ) "ಪ್ರಮಾಣೀಕರಿಸುವ ಪ್ರಾಧಿಕಾರಿ" ಎಂದರೆ 24ನೇ ಪ್ರಕರಣದ ಅಡಿಯಲ್ಲಿ ಅಂಕಿಚಿಹ್ನೆಯ ಪ್ರಮಾಣಪತ್ರವನ್ನು ನೀಡುವ ಸಲುವಾಗಿ ಲೈಸೆನ್ಸು ಪಡೆದಿರುವ ಒಬ್ಬ ವ್ಯಕ್ತಿ;

(ಹೆಚ್) "ಪ್ರಮಾಣೀಕರಣ ಪದ್ಧತಿ ವಿವರಣಪತ್ರ" ಎಂದರೆ ಅಂಕಿಚಿಹ್ನೆಯ ಪ್ರಮಾಣ ಪತ್ರಗಳನ್ನು ನೀಡುವಲ್ಲಿ ಪ್ರಮಾಣೀಕರಿಸುವ ಪ್ರಾಧಿಕಾರಿಯು ಬಳಸುವ ಪದ್ಧತಿಗಳನ್ನು ನಿರ್ದಿಷ್ಟಪಡಿಸಲು ಪ್ರಮಾಣೀಕರಿಸುವ ಪ್ರಾಧಿಕಾರಿಯು ನೀಡಿದ ಒಂದು ವಿವರಣಪತ್ರ;

(ಐ) "ಗಣಕಯಂತ್ರ" ಎಂದರೆ ಯಾವುದೇ ವಿದ್ಯುನ್ಮಾನ, ಅಯಸ್ಕಾಂತೀಯ, ದೃಷ್ಟಿ ಸಂಬಂಧಿ ಅಥವಾ ಇತರ ಅತಿ ವೇಗದ ದತ್ತಾಂಶ ಸಂಸ್ಕರಣ ಸಾಧನ ಅಥವಾ ವ್ಯವಸ್ಥೆ. ಈ ವ್ಯವಸ್ಥೆಯು ವಿದ್ಯುನ್ಮಾನ, ಅಯಸ್ಕಾಂತೀಯ ಅಥವಾ ದೃಷ್ಟಿ ಸಂಬಂಧಿ ಆವೇಗಗಳನ್ನು ಕುಶಲತೆಯಿಂದ ಅಳವಡಿಸಿಕೊಳ್ಳುವ ಮೂಲಕ ತಾರ್ಕಿಕ, ಅಂಕಗಣಿತದ ಮತ್ತು ಜ್ಞಾಪಕ ಪ್ರಕಾರ್ಯಗಳನ್ನು ನೆರವೇರಿಸುತ್ತದೆ ಮತ್ತು ಇದು ಗಣಕಯಂತ್ರ ವ್ಯವಸ್ಥೆಯಲ್ಲಿ ಅಥವಾ ಗಣಕಯಂತ್ರ ಜಾಲದಲ್ಲಿ ಗಣಕಯಂತ್ರಕ್ಕೆ ಜೋಡಿಸಲಾದ ಅಥವಾ ಸಂಬಂಧಪಟ್ಟ ಎಲ್ಲಾ ಒಳ ಸಂಜ್ಞೆ, ಹೊರ ಉತ್ಪಾದ, ಸಂಸ್ಕರಣೆ, ಸಂಗ್ರಹಣೆ, ಗಣಕಯಂತ್ರ ಸೂಕ್ಷ್ಮಾಂಗ ಅಥವಾ ಸಂವಹನ ಸೌಲಭ್ಯಗಳನ್ನು ಒಳಗೊಳ್ಳುತ್ತದೆ;

(ಜೆ) "ಗಣಕಯಂತ್ರ ಜಾಲ" ಎಂದರೆ,–

(i) ಉಪಗ್ರಹ, ಸೂಕ್ಷ್ಮ ತರಂಗ, ಭೂ ಸಂಬಂಧೀ ರೇಖೆ ಅಥವಾ ಇತರ ಸಂವಹನ ಮಾಧ್ಯಮಗಳನ್ನು ಬಳಸುವ ಮೂಲಕ; ಮತ್ತು

(ii) ಪರಸ್ಪರ ಜೋಡಣೆಯನ್ನು ನಿರಂತರವಾಗಿ ನಿರ್ವಹಿಸಿಕೊಂಡು ಬಂದಿರಲಿ ಅಥವಾ ಇಲ್ಲದಿರಲಿ, ಎರಡು ಅಥವಾ ಹೆಚ್ಚಿನ ಪರಸ್ಪರ ಜೋಡಿಸಿದ ಗಣಕಯಂತ್ರಗಳನ್ನು ಒಳಗೊಂಡಿರುವ ಅಂತ್ಯ ಬಿಂದುಗಳು ಅಥವಾ ಸಂಕೀರ್ಣದ ಮೂಲಕ

– ಒಂದು ಅಥವಾ ಹೆಚ್ಚಿನ ಗಣಕಯಂತ್ರಗಳ ಅಂತರ್‌ಜೋಡಣೆ.

(ಕೆ) "ಗಣಕಯಂತ್ರ ಸಂಪನ್ಮೂಲ" ಎಂದರೆ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ, ಗಣಕಯಂತ್ರ ಜಾಲ, ದತ್ತಾಂಶ, ಗಣಕಯಂತ್ರ ದತ್ತಾಂಶ ಸಂಗ್ರಹ ಅಥವಾ ಸೂಕ್ಷ್ಮಾಂಗ;

(ಎಲ್) "ಗಣಕಯಂತ್ರ ವ್ಯವಸ್ಥೆ" ಎಂದರೆ ಒಳಸಂಜ್ಞೆ ಹಾಗೂ ಹೊರ ಉತ್ಪಾದ ಆಧಾರ ಸಾಧನಗಳನ್ನು ಒಳಗೊಂಡ ಮತ್ತು ವಿಷಯ ಕ್ರಮಗಳನ್ನು ರೂಪಿಸಲಾಗದ ಎಣಿಕೆ ಯಂತ್ರಗಳನ್ನು ಹೊರತುಪಡಿಸಿದ ಮತ್ತು ಹೊರ ಫೈಲುಗಳೊಂದಿಗೆ ಸಂಯೋಜಿಸಿ ಬಳಸಲು ಸಮರ್ಥವಿರುವ ಸಾಧನ ಅಥವಾ ಸಾಧನಗಳ ಸಂಗ್ರಹಣೆ. ಇದು ತಾರ್ಕಿಕ, ಅಂಕಗಣಿತದ, ದತ್ತಾಂಶದ ಸಂಗ್ರಹಣೆ ಮತ್ತು ಮರಳಿ ಪಡೆಯುವಿಕೆ, ಸಂವಹನ ನಿಯಂತ್ರಣ ಹಾಗೂ ಇತರ ಕಾರ್ಯಗಳನ್ನು ನಿರ್ವಹಿಸುವ ಗಣಕಯಂತ್ರ ವಿಷಯಕ್ರಮಗಳನ್ನು, ವಿದ್ಯುನ್ಮಾನ ಸೂಚನೆಗಳನ್ನು ಒಳಸಂಜ್ಞೆಯ ದತ್ತಾಂಶ ಮತ್ತು ಹೊರ ಉತ್ಪಾದ ದತ್ತಾಂಶಗಳನ್ನು ಒಳಗೊಂಡಿರುತ್ತದೆ;

(ಎಂ) "ನಿಯಂತ್ರಕ" ಎಂದರೆ 17ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ನೇಮಕಗೊಂಡ ಪ್ರಮಾಣೀಕರಿಸುವ ಪ್ರಾಧಿಕಾರಗಳ ನಿಯಂತ್ರಕ;

(ಎನ್) "ಸೈಬರ್ ಅಪೀಲು ನ್ಯಾಯಾಧಿಕರಣ" ಎಂದರೆ 48ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಸೈಬರ್ ವಿನಿಯಮಗಳ ಅಪೀಲು ನ್ಯಾಯಾಧಿಕರಣ;

(ಓ) "ದತ್ತಾಂಶ" ಎಂದರೆ ವಿಧ್ಯುಕ್ತ ರೀತಿಯಲ್ಲಿ ತಯಾರಿಸಲಾಗುತ್ತಿರುವ ಅಥವಾ ತಯಾರಿಸಲಾಗಿರುವ ಮತ್ತು ಗಣಕಯಂತ್ರ ವ್ಯವಸ್ಥೆಯಲ್ಲಿ ಅಥವಾ ಗಣಕಯಂತ್ರ ಜಾಲದಲ್ಲಿ ಸಂಸ್ಕರಿಸುವ ಉದ್ದೇಶಹೊಂದಿರುವ ಅಥವಾ ಸಂಸ್ಕರಿಸಲಾಗುತ್ತಿರುವ ಅಥವಾ ಸಂಸ್ಕರಿಸಲಾಗಿರುವ ಮತ್ತು ಯಾವುದೇ ನಮೂನೆಯಲ್ಲಿ ಇರಬಹುದಾದ (ಗಣಕಯಂತ್ರ ಮುದ್ರಿತ ಪ್ರತಿ ಅಯಸ್ಕಾಂತೀಯ ಅಥವಾ ದೃಷ್ಟಿ ಸಂಬಂಧಿ ಸಂಗ್ರಹಣಾ ಮಾಧ್ಯಮ, ರಂಧ್ರ ಕೊರೆದ ಕಾರ್ಡುಗಳು, ರಂಧ್ರ ಕೊರೆದ ಟೇಪುಗಳನ್ನು ಒಳಗೊಂಡಂತೆ) ಅಥವಾ ಗಣಕಯಂತ್ರದ ಸ್ಮೃತಿಕೋಶದಲ್ಲಿ ಆಂತರಿಕವಾಗಿ ಸಂಗ್ರಹಿಸಲಾದ ಮಾಹಿತಿಯ, ಜ್ಞಾನದ, ಸಂಗತಿಗಳ, ಪರಿಕಲ್ಪನೆಗಳ ಅಥವಾ ಸೂಚನೆಗಳ ನಿರೂಪಣೆ;

(ಪಿ) "ಅಂಕಿಚಿಹ್ನೆ" ಎಂದರೆ 3ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ವಿದ್ಯುನ್ಮಾನ ವಿಧಾನ ಅಥವಾ ಕಾರ್ಯವಿಧಾನದ ಮೂಲಕ ಚಂದಾದಾರನು ಪ್ರಮಾಣೀಕರಿಸಿದ ಯಾವುದೇ ವಿದ್ಯುನ್ಮಾನ ದಾಖಲೆ;

(ಕ್ಯೂ) "ಅಂಕಿಚಿಹ್ನೆ ಪ್ರಮಾಣಪತ್ರ" ಎಂದರೆ 35ನೇ ಪ್ರಕರಣದ (4)ನೇ ಉಪ ಪ್ರಕರಣದ ಅಡಿಯಲ್ಲಿ ನೀಡಲಾದ ಒಂದು ಅಂಕಿಚಿಹ್ನೆ ಪ್ರಮಾಣಪತ್ರ;

(ಆರ್) ಮಾಹಿತಿಗೆ ಸಂಬಂಧಿಸಿದಂತೆ "ವಿದ್ಯುನ್ಮಾನ ನಮೂನೆ" ಎಂದರೆ ಅಯಸ್ಕಾಂತೀಯ, ದೃಷ್ಟಿ ಸಂಬಂಧೀ ಮಾಧ್ಯಮ, ಗಣಕಯಂತ್ರ ಸ್ಮೃತಿಕೋಶ, ಸೂಕ್ಷ್ಮಫಿಲ್ಮ್, ಗಣಕಯಂತ್ರ ಉತ್ಪಾದಿತ ಸೂಕ್ಷ್ಮ ಚಿತ್ರಬಿಲ್ಲೆ ಅಥವಾ ಅಂತಹುದೇ ಸಾಧನ – ಇವುಗಳ ಮೂಲಕ ಸೃಜಿಸುವ, ಕಳುಹಿಸುವ, ಸ್ವೀಕರಿಸುವ ಅಥವಾ ಸಂಗ್ರಹಿಸುವ ಯಾವುದೇ ಮಾಹಿತಿ;

(ಎಸ್) "ವಿದ್ಯುನ್ಮಾನ ರಾಜಪತ್ರ" ಎಂದರೆ ವಿದ್ಯುನ್ಮಾನ ರೂಪದಲ್ಲಿ ಪ್ರಕಟಿಸಲಾದ ಅಧಿಕೃತ ರಾಜಪತ್ರ;

(ಟಿ) "ವಿದ್ಯುನ್ಮಾನ ದಾಖಲೆ" ಎಂದರೆ ವಿದ್ಯುನ್ಮಾನ ರೂಪದಲ್ಲಿ ಅಥವಾ ಸೂಕ್ಷ್ಮ ಫಿಲ್ಮಿನಲ್ಲಿ ಅಥವಾ ಗಣಕಯಂತ್ರ ಉತ್ಪಾದಿತ ಸೂಕ್ಷ್ಮ ಚಿತ್ರಬಿಲ್ಲೆಯಲ್ಲಿ ಸಂಗ್ರಹಿಸುವ, ಸ್ವೀಕರಿಸುವ ಅಥವಾ ಕಳಿಸುವ ದತ್ತಾಂಶ, ದಾಖಲೆ ಅಥವಾ ಉತ್ಪಾದಿತ ದತ್ತಾಂಶ, ಪ್ರತಿಬಿಂಬ ಅಥವಾ ಶಬ್ದ;

(ಯು) ಗಣಕಯಂತ್ರದ ಸಂಬಂಧದಲ್ಲಿ, "ಪ್ರಕಾರ್ಯ" ಎಂದರೆ ತರ್ಕ, ನಿಯಂತ್ರಣ, ಅಂಕಗಣಿತ ಪ್ರಕ್ರಿಯೆ, ತೆಗೆದುಹಾಕುವುದು, ಸಂಗ್ರಹಿಸುವುದು ಮತ್ತು ಪುನಃ ಪಡೆಯುವುದು ಮತ್ತು ಗಣಕಯಂತ್ರದಿಂದ ಅಥವಾ ಗಣಕಯಂತ್ರದ ಒಳಗಿನ ಸಂವಹನ ಅಥವಾ ದೂರ ಸಂವಹನ – ಇವುಗಳನ್ನು ಒಳಗೊಳ್ಳುತ್ತದೆ;

(ವಿ) "ಮಾಹಿತಿ" ಎಂಬುದು ದತ್ತಾಂಶ, ಮೂಲಪಾಠ, ಬಿಂಬಗಳು, ಶಬ್ದ, ಧ್ವನಿ, ಸಂಕೇತಗಳು, ಗಣಕಯಂತ್ರ ಕ್ರಮವಿಧಿಗಳು, ಸೂಕ್ಷ್ಮಾಂಗ ಮತ್ತು ದತ್ತಾಂಶ ಸಂಗ್ರಹಗಳು ಅಥವಾ ಸೂಕ್ಷ್ಮಫಿಲ್ಮ್ ಅಥವಾ ಗಣಕಯಂತ್ರ ಜನಿತ ಸೂಕ್ಷ್ಮ ಚಿತ್ರಬಿಲ್ಲೆ ಇವುಗಳನ್ನು ಒಳಗೊಳ್ಳುತ್ತವೆ;

(ಡಬ್ಲ್ಯು) ಯಾವುದೇ ನಿರ್ದಿಷ್ಟ ವಿದ್ಯುನ್ಮಾನ ಸಂದೇಶಕ್ಕೆ ಸಂಬಂಧಿಸಿದಂತೆ "ಮಧ್ಯವರ್ತಿ" ಎಂದರೆ ಮತ್ತೊಬ್ಬ ವ್ಯಕ್ತಿಯ ಪರವಾಗಿ ಆ ಸಂದೇಶವನ್ನು ಸ್ವೀಕರಿಸುವ, ಸಂಗ್ರಹಿಸುವ ಅಥವಾ ರವಾನಿಸುವ ಅಥವಾ ಆ ಸಂದೇಶದ ಸಂಬಂಧದಲ್ಲಿ ಯಾವುದೇ ಸೇವೆಯನ್ನು ಒದಗಿಸುವ ಯಾರೇ ವ್ಯಕ್ತಿ;

(ಎಕ್ಸ್) ಅಸಮ ಗೂಢಲಿಪೀಕರಣ ವ್ಯವಸ್ಥೆಯಲ್ಲಿ "ಕೀಲಿ ಜೋಡಿ" ಎಂದರೆ ಒಂದು ಖಾಸಗಿ ಕೀಲಿ ಮತ್ತು ಅದರ ಗಣಿತ ಸಂಬಂಧದ ಸಾರ್ವಜನಿಕ ಕೀಲಿ, ಖಾಸಗಿ ಕೀಲಿಯಿಂದ ಸೃಜಿಸಲಾದ ಒಂದು ಅಂಕಿಚಿಹ್ನೆಯ ಸತ್ಯಾಪನೆ ಮಾಡುವುದು ಸಾಧ್ಯವಾಗುವಂತೆ ಇವೆರಡರ ನಡುವೆ ಸಂಬಂಧ ಕಲ್ಪಿಸಲಾಗಿರುತ್ತದೆ;

(ವೈ) "ಕಾನೂನು" ಎಂಬುದು ಸಂಸತ್ತಿನ ಅಥವಾ ರಾಜ್ಯ ವಿಧಾನ ಮಂಡಲದ ಯಾವುದೇ ಅಧಿನಿಯಮವನ್ನು, ರಾಷ್ಟ್ರಪತಿಯು ಅಥವಾ ಸಂದರ್ಭಾನುಸಾರ ರಾಜ್ಯಪಾಲನು ಉದ್ಘೋಷಿಸಿದ ಅಧ್ಯಾದೇಶಗಳನ್ನು, ಸಂವಿಧಾನದ 240ನೇ ಅನುಚ್ಛೇದದ ಅಡಿಯಲ್ಲಿ ರಾಷ್ಟ್ರಪತಿಯು ಮಾಡಿದ ವಿನಿಯಮಗಳನ್ನು, 357ನೇ ಅನುಚ್ಛೇದದ (1)ನೇ ಖಂಡದ (ಎ) ಉಪಖಂಡದ ಅಡಿಯಲ್ಲಿ ರಾಷ್ಟ್ರಪತಿಯ ಅಧಿನಿಯಮವಾಗಿ ಅಧಿನಿಯಮಿಸಲಾದ ವಿಧೇಯಕಗಳನ್ನು ಒಳಗೊಳ್ಳುತ್ತದೆ ಮತ್ತು ಅದರ ಅಡಿಯಲ್ಲಿ ಹೊರಡಿಸಲಾದ ಅಥವಾ ರಚಿಸಲಾದ ನಿಯಮಗಳನ್ನು, ವಿನಿಯಮಗಳನ್ನು, ಉಪವಿಧಿಗಳನ್ನು ಮತ್ತು ಆದೇಶಗಳನ್ನು ಸಹ ಅದು ಒಳಗೊಳ್ಳುತ್ತದೆ;

(ಜಡ್) "ಲೈಸೆನ್ಸ್" ಎಂದರೆ 24ನೇ ಪ್ರಕರಣದ ಅಡಿಯಲ್ಲಿ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ನೀಡಲಾದ ಲೈಸೆನ್ಸು;

(ಜಡ್‌ಎ) "ಮೂಲಕರ್ತ" ಎಂದರೆ ಯಾವುದೇ ವಿದ್ಯುನ್ಮಾನ ಸಂದೇಶವನ್ನು ಕಳುಹಿಸುವ, ಸೃಜಿಸುವ, ಸಂಗ್ರಹಿಸಿಡುವ ಅಥವಾ ರವಾನಿಸುವ ಅಥವಾ ಯಾರೇ ಇತರ ವ್ಯಕ್ತಿಗೆ ಯಾವುದೇ ವಿದ್ಯುನ್ಮಾನ ಸಂದೇಶವನ್ನು ಕಳುಹಿಸುವುದಕ್ಕೆ, ಸೃಜಿಸುವುದಕ್ಕೆ, ಸಂಗ್ರಹಿಸುವುದಕ್ಕೆ ಅಥವಾ ರವಾನಿಸುವುದಕ್ಕೆ ಕಾರಣನಾಗುವ ವ್ಯಕ್ತಿ, ಆದರೆ ಇದು ಮಧ್ಯವರ್ತಿಯನ್ನು ಒಳಗೊಳ್ಳುವುದಿಲ್ಲ;

(ಜಡ್‌ಬಿ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ಮಾಡಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಡ್‌ಸಿ) "ಖಾಸಗಿ ಕೀಲಿ" ಎಂದರೆ ಅಂಕಿಚಿಹ್ನೆಯನ್ನು ಸೃಜಿಸಲು ಬಳಸುವ ಕೀಲಿ ಜೋಡಿಯ ಒಂದು ಕೀಲಿ;

(ಜಡ್‌ಡಿ) "ಸಾರ್ವಜನಿಕ ಕೀಲಿ" ಎಂದರೆ ಅಂಕಿಚಿಹ್ನೆಯನ್ನು ಸತ್ಯಾಪನೆ ಮಾಡಲು ಬಳಸುವ ಮತ್ತು ಅಂಕಿಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿ ಮಾಡಲಾದ ಕೀಲಿ ಜೋಡಿಯ ಒಂದು ಕೀಲಿ;

(ಜಡ್‌ಇ) "ಸುರಕ್ಷಾ ವ್ಯವಸ್ಥೆ" ಎಂದರೆ ಈ ಮುಂದಿನವುಗಳನ್ನೊಳಗೊಂಡ ಗಣಕಯಂತ್ರದ ಯಂತ್ರಾಂಗ ಮತ್ತು ಸೂಕ್ಷ್ಮಾಂಗ ಹಾಗೂ ಕಾರ್ಯವಿಧಾನ,–

(ಎ) ಅನಧಿಕೃತ ಪ್ರವೇಶಾವಕಾಶದಿಂದ ಮತ್ತು ದುರ್ಬಳಕೆಯಿಂದ ಯುಕ್ತ ಸುರಕ್ಷೆ ಒದಗಿಸುವುದು;

(ಬಿ) ಯುಕ್ತ ವಿಶ್ವಸನೀಯತೆ ಮತ್ತು ಸರಿಯಾದ ಕಾರ್ಯಾಚರಣೆಯ ವ್ಯವಸ್ಥೆ;

(ಸಿ) ಉದ್ದೇಶಿತ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕೆ ಯುಕ್ತ ಹೊಂದಾಣಿಕೆ ವ್ಯವಸ್ಥೆ; ಮತ್ತು

(ಡಿ) ಸಾಮಾನ್ಯವಾಗಿ ಅಂಗೀಕೃತವಾದ ಭದ್ರತಾ ಕಾರ್ಯವಿಧಾನವನ್ನು ಅನುಸರಿಸುವುದು;

(ಜಡ್‌ಎಫ್) "ಸುರಕ್ಷಾ ಕಾರ್ಯವಿಧಾನ" ಎಂದರೆ 16ನೇ ಪ್ರಕರಣದ ಅಡಿಯಲ್ಲಿ ಕೇಂದ್ರ ಸರ್ಕಾರವು ನಿಯಮಿಸಿದ ಸುರಕ್ಷಾ ಕಾರ್ಯವಿಧಾನ;

(ಜಡ್‌ಜಿ) "ವಂತಿಕೆದಾರ" ಎಂದರೆ ಅಂಕಿಚಿಹ್ನೆಯ ಪ್ರಮಾಣಪತ್ರವನ್ನು ಯಾರ ಹೆಸರಿನಲ್ಲಿ ನೀಡಲಾಗಿದೆಯೋ ಅಂಥ ವ್ಯಕ್ತಿ;

(ಜಡ್‌ಹೆಚ್) ಅಂಕಿಚಿಹ್ನೆ, ವಿದ್ಯುನ್ಮಾನ ದಾಖಲೆ ಅಥವಾ ಸಾರ್ವಜನಿಕ ಕೀಲಿ–ಇವುಗಳಿಗೆ ಸಂಬಂಧಿಸಿದಂತೆ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ, "ಸತ್ಯಾಪನೆ ಮಾಡುವುದು" ಎಂದರೆ,–

(ಎ) ವಂತಿಗೆದಾರನ ಸಾರ್ವಜನಿಕ ಕೀಲಿಗೆ ಸಂವಾದಿಯಾದ ಖಾಸಗಿ ಕೀಲಿಯನ್ನು ಬಳಸುವ ಮೂಲಕ ಆರಂಭಿಕ ವಿದ್ಯುನ್ಮಾನ ದಾಖಲೆಯನ್ನು ಅಂಕಿಚಿಹ್ನೆಗೆ ಜೋಡಿಸಲಾಗಿತ್ತೇ;

(ಬಿ) ಆರಂಭಿಕ ವಿದ್ಯುನ್ಮಾನ ದಾಖಲೆಯನ್ನು ಅಂಕಿಚಿಹ್ನೆಯೊಂದಿಗೆ ಹಾಗೆ ಜೋಡಿಸಿದ ತರುವಾಯ ಅಂಥ ವಿದ್ಯುನ್ಮಾನ ದಾಖಲೆಯನ್ನು ಶಿಥಿಲವಾಗದಂತೆ ಹಾಗೆಯೇ ಇಡಲಾಗಿದೆಯೇ ಅಥವಾ ಬದಲಾಯಿಸಲಾಗಿದೆಯೇ

– ಎಂಬುದನ್ನು ನಿರ್ಧರಿಸುವುದು.

(2) ಈ ಅಧಿನಿಯಮದಲ್ಲಿ ಯಾವುದೇ ಅಧಿನಿಯಮಿತಿಗೆ ಅಥವಾ ಅದರ ಯಾವುದೇ ಉಪಬಂಧಕ್ಕೆ ಮಾಡಲಾದ ಯಾವುದೇ ಉಲ್ಲೇಖವನ್ನು, ಅಂಥ ಅಧಿನಿಯಮಿತಿ ಅಥವಾ ಆಂಥ ಉಪಬಂಧವು ಜಾರಿಯಲ್ಲಿಲ್ಲದ ಯಾವುದೇ ಅಂಥ ಪ್ರದೇಶದ ಸಂಬಂಧದಲ್ಲಿ ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನಿಗೆ ಅಥವಾ ಸಂವಾದಿ ಕಾನೂನಿನ ಸಂಬಂಧಪಟ್ಟ ಉಪಬಂಧಕ್ಕೆ ಮಾಡಿದ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

## ಅಧ್ಯಾಯ – II

## ಅಂಕಿಚಿಹ್ನೆ

**3. ವಿದ್ಯುನ್ಮಾನ ದಾಖಲೆಗಳ ಅಧಿಪ್ರಮಾಣನ.**– (1) ಈ ಪ್ರಕರಣದ ಉಪಬಂಧಗಳಿಗೊಳಪಟ್ಟು, ಯಾರೇ ವಂತಿಗೆದಾರನು, ತನ್ನ ಅಂಕಿಚಿಹ್ನೆಯನ್ನು ಹಾಕುವ ಮೂಲಕ ವಿದ್ಯುನ್ಮಾನ ದಾಖಲೆಯನ್ನು ಅಧಿಪ್ರಮಾಣನಗೊಳಿಸಬಹುದು.

(2) ಆರಂಭಿಕ ವಿದ್ಯುನ್ಮಾನ ದಾಖಲೆಯನ್ನು ಆವರಿಸಿ ಅದನ್ನು ಇನ್ನೊಂದು ವಿದ್ಯುನ್ಮಾನ ದಾಖಲೆಯನ್ನಾಗಿ ಪರಿವರ್ತಿಸುವಂಥ ಅಸಮ ಗೂಢಲಿಪೀಕರಣ ವ್ಯವಸ್ಥೆ ಮತ್ತು ಕ್ಷಿಪ್ರ ಪ್ರಕಾರ್ಯ ಬಳಕೆಯ ಮೂಲಕ ವಿದ್ಯುನ್ಮಾನ ದಾಖಲೆಯ ಅಧಿಪ್ರಮಾಣವನ್ನು ಮಾಡತಕ್ಕದ್ದು.

**ವಿವರಣೆ.–** ಈ ಉಪಪ್ರಕರಣದ ಉದ್ದೇಶಗಳಿಗಾಗಿ, "ಕ್ಷಿಪ್ರ ಪ್ರಕಾರ್ಯ" ಎಂದರೆ ಬಿಟ್‌ಗಳ ಒಂದು ಸರಣಿಯನ್ನು, ಸಾಮಾನ್ಯವಾಗಿ ಚಿಕ್ಕದಾಗಿರುವ ಮತ್ತು "ಕ್ಷಿಪ್ರ ಫಲಿತಾಂಶ" ಎಂದು ಕರೆಯಲಾಗುವ ಇನ್ನೊಂದು ಸರಣಿಗೆ ಗಣನ ಪದ್ಧತಿಯ ನಕ್ಷೆ ನಿರೂಪಿಸುವುದು ಅಥವಾ ಪರಿವರ್ತಿಸುವುದು. ಇದರಿಂದಾಗಿ, ಒಂದು ವಿದ್ಯುನ್ಮಾನ ದಾಖಲೆಯು ಅದೇ ಬಗೆಯ ವಿದ್ಯುನ್ಮಾನ ದಾಖಲೆಯನ್ನು ಒಂದು ಗಣನ ಪದ್ಧತಿಯ ಒಳಸಂಜ್ಞೆಯಾಗಿ ಅದರೊಂದಿಗೆ ನಿರ್ವಹಿಸಿದಾಗ ಪ್ರತಿಸಲವೂ ಅದೇ ಮಿಶ್ರ ಫಲಿತಾಂಶವನ್ನು ನೀಡುತ್ತದೆ. ಹಾಗೆ ಮಾಡುವಾಗ, –

(ಎ) ಗಣನ ಪದ್ಧತಿಯಿಂದ ಉತ್ಪನ್ನವಾದ ಕ್ಷಿಪ್ರ ಫಲಿತಾಂಶದ ಮೂಲ ವಿದ್ಯುನ್ಮಾನ ದಾಖಲೆಯನ್ನು ಪಡೆಯುವುದು ಅಥವಾ ಪುನರ್ ರಚಿಸುವುದು;

(ಬಿ) ಎರಡು ವಿದ್ಯುನ್ಮಾನ ದಾಖಲೆಗಳು ಗಣನ ಪದ್ಧತಿಯನ್ನು ಬಳಸಿ ಒಂದೇ ಬಗೆಯ ಕ್ಷಿಪ್ರ ಫಲಿತಾಂಶವನ್ನು ನೀಡುವುದು

– ಗಣಕೀಯವಾಗಿ ಕಾರ್ಯಸಾಧ್ಯವಾಗುವುದಿಲ್ಲ.

(3) ವಂತಿಗೆದಾರರನ ಸಾರ್ವಜನಿಕ ಕೀಲಿಯ ಬಳಕೆಯಿಂದ ಯಾರೇ ವ್ಯಕ್ತಿಯು ವಿದ್ಯುನ್ಮಾನ ದಾಖಲೆಯನ್ನು ಸತ್ಯಾಪನೆ ಮಾಡಬಹುದು.

(4) ವಂತಿಗೆದಾರನಿಗೆ ಖಾಸಗಿ ಕೀಲಿ ಮತ್ತು ಸಾರ್ವಜನಿಕ ಕೀಲಿ ಅನನ್ಯವಾದವುಗಳಾಗಿರುತ್ತವೆ ಮತ್ತು ಇವು ಕಾರ್ಯನಿರ್ವಹಿಸುವ ಜೋಡಿ ಕೀಲಿಯಾಗಿರುತ್ತವೆ.

## ಅಧ್ಯಾಯ – III

## ವಿದ್ಯುನ್ಮಾನ ಆಡಳಿತ ನಿರ್ವಹಣೆ

**4. ವಿದ್ಯುನ್ಮಾನ ದಾಖಲೆಗಳಿಗೆ ಕಾನೂನು ಮಾನ್ಯತೆ.–** ಮಾಹಿತಿಯು ಅಥವಾ ಯಾವುದೇ ಇತರ ವಿಷಯವು ಲಿಖಿತದ ಅಥವಾ ಬೆರಳಚ್ಚಿನ ಅಥವಾ ಮುದ್ರಣದ ರೂಪದಲ್ಲಿರತಕ್ಕದ್ದೆಂದು ಯಾವುದೇ ಕಾನೂನಿನಲ್ಲಿ ಉಪಬಂಧಿಸಿರುವಲ್ಲಿ, ಅಂಥ ಕಾನೂನಿನಲ್ಲಿ ಏನೇ ಇದ್ದರೂ, ಅಂಥ ಮಾಹಿತಿ ಅಥವಾ ವಿಷಯ,–

(ಎ) ಅದನ್ನು ವಿದ್ಯುನ್ಮಾನ ರೂಪದಲ್ಲಿ ಸಲ್ಲಿಸಲಾಗಿದ್ದರೆ ಅಥವಾ ಒದಗಿಸಲಾಗಿದ್ದರೆ; ಮತ್ತು

(ಬಿ) ಆ ತರುವಾಯದ ಉಲ್ಲೇಖಕ್ಕಾಗಿ ಅದು ಬಳಸಲು ಸಿಗುವಂತಿದ್ದರೆ

– ಅಂಥ ಅಗತ್ಯತೆಯನ್ನು ತೃಪ್ತಿಕರವಾಗಿ ಪೂರೈಸಲಾಗಿದೆಯೆಂದು ಭಾವಿಸತಕ್ಕದ್ದು.

**5. ಅಂಕಿ ಚಿಹ್ನೆಗಳಿಗೆ ಕಾನೂನು ಮಾನ್ಯತೆ.–** ಮಾಹಿತಿ ಅಥವಾ ಯಾವುದೇ ಇತರ ವಿಷಯವನ್ನು ಯಾರೇ ವ್ಯಕ್ತಿಯು ಸಹಿ ಮಾಡುವ ಮೂಲಕ ಅಧಿಪ್ರಮಾಣಿಸತಕ್ಕದ್ದೆಂದು ಅಥವಾ ಯಾವುದೇ ದಸ್ತಾವೇಜಿಗೆ ಯಾರೇ ವ್ಯಕ್ತಿಯು ಸಹಿ ಹಾಕತಕ್ಕದ್ದೆಂದು ಅಥವಾ ಅವನ ಸಹಿ ಇರತಕ್ಕದ್ದೆಂದು ಯಾವುದೇ ಕಾನೂನಿನಲ್ಲಿ ಉಪಬಂಧಿಸಿರುವಲ್ಲಿ, ಆಗ ಅಂಥ ಕಾನೂನಿನಲ್ಲಿ ಏನೇ ಇದ್ದರೂ, ಅಂಥ ಮಾಹಿತಿ ಅಥವಾ ವಿಷಯವು ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಅಂಕಿ ಚಿಹ್ನೆ ಹಾಕುವ ಮೂಲಕ ಅಧಿಪ್ರಮಾಣಿತವಾದರೆ, ಅಂಥ ಅಗತ್ಯತೆಯನ್ನು ತೃಪ್ತಿಕರವಾಗಿ ಪೂರೈಸಲಾಗಿದೆಯೆಂದು ಭಾವಿಸತಕ್ಕದ್ದು .

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ ಒಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ 'ಸಹಿ ಮಾಡಲಾಗಿದೆ' ಎಂಬ ಪದಕ್ಕೆ ಅದರ ವ್ಯಾಕರಣದ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ, ಯಾವುದೇ ದಸ್ತಾವೇಜಿನ ಮೇಲೆ ಅವನ ಕೈಬರಹದ ಸಹಿಯನ್ನು  ಹಾಕುವುದು ಅಥವಾ ಯಾವುದೇ ಗುರುತನ್ನು ಹಾಕುವುದು ಎಂದು ಅರ್ಥವಿರತಕ್ಕದ್ದು ಮತ್ತು "ಚಿಹ್ನೆ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು.

**6. ಸರ್ಕಾರದಲ್ಲಿ ಮತ್ತು ಅದರ ಏಜೆನ್ಸಿಗಳಲ್ಲಿ ವಿದ್ಯುನ್ಮಾನ ದಾಖಲೆಗಳ ಮತ್ತು ಅಂಕಿ ಚಿಹ್ನೆಗಳ ಬಳಕೆ.–** (1) ಯಾವುದೇ ಕಾನೂನಿನಲ್ಲಿ,–

(ಎ) ಸಮುಚಿತ ಸರ್ಕಾರದ ಒಡೆತನ ಅಥವಾ ನಿಯಂತ್ರಣಕ್ಕೆ ಒಳಪಟ್ಟಿರುವ ಯಾವುದೇ ಕಚೇರಿ, ಪ್ರಾಧಿಕಾರ, ನಿಕಾಯ ಅಥವಾ ಏಜೆನ್ಸಿಗೆ ಒಂದು ನಿರ್ದಿಷ್ಟ ರೀತಿಯಲ್ಲಿ ಯಾವುದೇ ನಮೂನೆ, ಅರ್ಜಿ ಅಥವಾ ಯಾವುದೇ ಇತರ ದಸ್ತಾವೇಜನ್ನು ಸಲ್ಲಿಸುವುದಕ್ಕಾಗಿ;

(ಬಿ) ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಲೈಸನ್ಸು, ಪರ್ಮಿಟ್ಟು, ಮಂಜೂರಾತಿ ಅಥವಾ ಅನುಮೋದನೆಯನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ನೀಡುವುದಕ್ಕಾಗಿ ಅಥವಾ ಮಂಜೂರು ಮಾಡುವುದಕ್ಕಾಗಿ;

(ಸಿ) ಒಂದು ನಿರ್ದಿಷ್ಟ ರೀತಿಯಲ್ಲಿ ಹಣ ಸ್ವೀಕರಿಸುವುದಕ್ಕಾಗಿ ಅಥವಾ ಸಂದಾಯ ಮಾಡುವುದಕ್ಕಾಗಿ

– ಉಪಬಂಧವನ್ನು ಕಲ್ಪಿಸುವಾಗ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಸಂದರ್ಭಾನುಸಾರ ಅಂಥ ಸಲ್ಲಿಕೆ, ನೀಡಿಕೆ, ಮಂಜೂರಾತಿ, ಸ್ವೀಕಾರ ಅಥವಾ ಸಂದಾಯ–ಇವುಗಳನ್ನು ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ವಿದ್ಯುನ್ಮಾನ ನಮೂನೆಯ ಮೂಲಕ ಮಾಡಲಾಗಿದ್ದರೆ, ಅಂಥ ಅಗತ್ಯತೆಯನ್ನು ತೃಪ್ತಿಕರವಾಗಿ ಪೂರೈಸಲಾಗಿದೆಯೆಂದು ಭಾವಿಸತಕ್ಕದ್ದು.

(2) ಸಮುಚಿತ ಸರ್ಕಾರವು, (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ನಿಯಮಗಳ ಮೂಲಕ, ಈ ಮುಂದಿನವುಗಳನ್ನು ನಿಯಮಿಸಬಹುದು,–

(ಎ) ಅಂಥ ವಿದ್ಯುನ್ಮಾನ ದಾಖಲೆಗಳನ್ನು ಸಲ್ಲಿಸತಕ್ಕ, ಸೃಜಿಸತಕ್ಕ ಅಥವಾ ನೀಡತಕ್ಕ ವಿಧಾನ ಮತ್ತು ಕ್ರಮವ್ಯವಸ್ಥೆ;

(ಬಿ) (ಎ) ಖಂಡದ ಅಡಿಯಲ್ಲಿ ಯಾವುದೇ ವಿದ್ಯುನ್ಮಾನ ದಾಖಲೆಯನ್ನು ಸಲ್ಲಿಸುವುದಕ್ಕೆ, ಸೃಜಿಸುವುದಕ್ಕೆ ಅಥವಾ ನೀಡುವುದಕ್ಕೆ ಯಾವುದೇ ಫೀಜನ್ನು ಆಥವಾ ಚಾರ್ಜನ್ನು ಸಂದಾಯ ಮಾಡುವ ರೀತಿ ಅಥವಾ ವಿಧಾನ.

**7. ವಿದ್ಯುನ್ಮಾನ ದಾಖಲೆಗಳನ್ನು ಉಳಿಸಿಕೊಳ್ಳುವುದು.–** (1) ದಸ್ತಾವೇಜುಗಳನ್ನು, ದಾಖಲೆಗಳನ್ನು ಅಥವಾ ಮಾಹಿತಿಯನ್ನು ಯಾವುದೇ ನಿರ್ದಿಷ್ಟ ಅವಧಿಗಾಗಿ ಉಳಿಸಿಕೊಳ್ಳತಕ್ಕದ್ದೆಂದು ಯಾವುದೇ ಕಾನೂನು ಉಪಬಂಧಿಸಿರುವಾಗ,–

(ಎ) ಅದರಲ್ಲಿರುವ ಮಾಹಿತಿಯು ತರುವಾಯದ ಉಲ್ಲೇಖಕ್ಕೆ ಉಪಯೋಗಿಸಲು ಸಿಗುವಂತಿದ್ದರೆ;

(ಬಿ) ವಿದ್ಯುನ್ಮಾನ ದಾಖಲೆಯನ್ನು ಮೂಲತಃ ಸೃಜಿಸಿದ, ಕಳಿಸಿದ ಅಥವಾ ಸ್ವೀಕರಿಸಿದ ಕ್ರಮವ್ಯವಸ್ಥೆಯಲ್ಲಿ ಅಥವಾ ಮೂಲತಃ ಸೃಜಿಸಿದ, ಕಳಿಸಿದ ಅಥವಾ ಸ್ವೀಕರಿಸಿದ ಮಾಹಿತಿಯನ್ನು ನಿಷ್ಕೃಷ್ಟವಾಗಿ ಪ್ರತಿನಿಧಿಸುವಂತೆ ತೋರಿಸಲು ಸಾಧ್ಯವಿರುವ ಕ್ರಮವ್ಯವಸ್ಥೆಯಲ್ಲಿ ಅದನ್ನು ಉಳಿಸಿಕೊಂಡಿದ್ದರೆ;

(ಸಿ) ಅಂಥ ವಿದ್ಯುನ್ಮಾನ ದಾಖಲೆಯ ಉಗಮ, ಗಮ್ಯಸ್ಥಾನ, ರವಾನೆಯ ಅಥವಾ ಸ್ವೀಕೃತಿಯ ದಿನಾಂಕ ಮತ್ತು ಸಮಯವನ್ನು ಗುರುತಿಸಲು ಅನುಕೂಲವಾಗುವಂಥ ವಿವರಗಳು ವಿದ್ಯುನ್ಮಾನ ದಾಖಲೆಯಲ್ಲಿ ಲಭ್ಯವಾಗುವಂತಿದ್ದರೆ ಅಂಥ ದಸ್ತಾವೇಜುಗಳನ್ನು, ದಾಖಲೆಗಳನ್ನು ಅಥವಾ ಮಾಹಿತಿಯನ್ನು ವಿದ್ಯುನ್ಮಾನ ನಮೂನೆಯಲ್ಲಿ ಉಳಿಸಿಕೊಂಡಿದ್ದರೆ

– ಆ ಅಗತ್ಯತೆಯನ್ನು ತೃಪ್ತಿಕರವಾಗಿ ಪೂರೈಸಲಾಗಿದೆಯೆಂದು ಭಾವಿಸತಕ್ಕದ್ದು:

ಪರಂತು, ವಿದ್ಯುನ್ಮಾನ ದಾಖಲೆಯನ್ನು ರವಾನಿಸಲು ಅಥವಾ ಸ್ವೀಕರಿಸಲು ಸಾಧ್ಯಗೊಳಿಸುವ ಉದ್ದೇಶ ಮಾತ್ರಕ್ಕಾಗಿಯೇ ಸ್ವಯಂ ಸೃಜಿತವಾದ ಯಾವುದೇ ಮಾಹಿತಿಗೆ ಈ ಖಂಡವು ಅನ್ವಯವಾಗತಕ್ಕದ್ದಲ್ಲ.

(2) ವಿದ್ಯುನ್ಮಾನ ದಾಖಲೆಗಳ ರೂಪದಲ್ಲಿ ದಸ್ತಾವೇಜುಗಳನ್ನು, ದಾಖಲೆಗಳನ್ನು ಅಥವಾ ಮಾಹಿತಿಯನ್ನು ಉಳಿಸಿಕೊಳ್ಳುವ ಸಲುವಾಗಿ ವ್ಯಕ್ತವಾಗಿ ಉಪಬಂಧ ಕಲ್ಪಿಸುವ ಯಾವುದೇ ಕಾನೂನಿಗೆ ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯಿಸತಕ್ಕದ್ದಲ್ಲ .

**8. ವಿದ್ಯುನ್ಮಾನ ರಾಜಪತ್ರದಲ್ಲಿ ನಿಯಮ, ವಿನಿಯಮ, ಇತ್ಯಾದಿಗಳ ಪ್ರಕಟಣೆ.–** ಯಾವುದೇ ನಿಯಮ, ವಿನಿಯಮ, ಆದೇಶ, ಉಪವಿಧಿ, ಅಧಿಸೂಚನೆ ಅಥವಾ ಯಾವುದೇ ಇತರ ವಿಷಯವನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದೆಂದು ಯಾವುದೇ ಕಾನೂನು ಉಪಬಂಧಿಸಿರುವಾಗ ಅಂಥ ನಿಯಮ, ವಿನಿಯಮ, ಆದೇಶ, ಉಪವಿಧಿ, ಅಧಿಸೂಚನೆ ಅಥವಾ ಯಾವುದೇ ಇತರ

ವಿಷಯವನ್ನು ರಾಜಪತ್ರದಲ್ಲಿ ಅಥವಾ ವಿದ್ಯುನ್ಮಾನ ರಾಜಪತ್ರದಲ್ಲಿ ಪ್ರಕಟಿಸಿದರೆ ಅಂಥ ಅಗತ್ಯತೆಯನ್ನು ತೃಪ್ತಿಕರವಾಗಿ ಪೂರೈಸಲಾಗಿದೆಯೆಂದು ಭಾವಿಸತಕ್ಕದ್ದು:

ಪರಂತು, ಯಾವುದೇ ನಿಯಮವನ್ನು, ವಿನಿಯಮವನ್ನು, ಆದೇಶವನ್ನು, ಉಪವಿಧಿಯನ್ನು, ಅಧಿಸೂಚನೆಯನ್ನು ಅಥವಾ ಯಾವುದೇ ಇತರ ವಿಷಯವನ್ನು ರಾಜಪತ್ರದಲ್ಲಿ ಅಥವಾ ವಿದ್ಯುನ್ಮಾನ ರಾಜಪತ್ರದಲ್ಲಿ ಪ್ರಕಟಿಸಿರುವಾಗ ರಾಜಪತ್ರವು ಯಾವುದೇ ರೂಪದಲ್ಲಿ ಮೊದಲು ಪ್ರಕಟವಾದ ದಿನಾಂಕವನ್ನು ಪ್ರಕಟಣೆಯ ದಿನಾಂಕವೆಂದು ಭಾವಿಸತಕ್ಕದ್ದು.

**9. 6, 7 ಮತ್ತು 8ನೇ ಪ್ರಕರಣಗಳು ದಸ್ತಾವೇಜನ್ನು ವಿದ್ಯುನ್ಮಾನ ನಮೂನೆಯಲ್ಲಿ ಸ್ವೀಕರಿಸಬೇಕೆಂದು ಒತ್ತಾಯಿಸುವ ಹಕ್ಕನ್ನು ಪ್ರದಾನ ಮಾಡದಿರುವುದು.**– 6, 7 ಮತ್ತು 8ನೇ ಪ್ರಕರಣಗಳಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾವುದೇ ಸಚಿವಾಲಯವು ಅಥವಾ ಇಲಾಖೆಯು ಅಥವಾ ಕೇಂದ್ರ ಸರ್ಕಾರದಿಂದ ಅಥವಾ ರಾಜ್ಯ ಸರ್ಕಾರದಿಂದ ಯಾವುದೇ ಕಾನೂನಿನ ಮೂಲಕ ಅಥವಾ ಮೇರೆಗೆ ಸ್ಥಾಪಿತವಾದ ಅಥವಾ ಅದರ ನಿಯಂತ್ರಣಕ್ಕೊಳಪಡುವ ಅಥವಾ ಅದರಿಂದ ಹಣಕಾಸು ನೆರವು ಪಡೆಯುವ ಯಾವುದೇ ಪ್ರಾಧಿಕಾರ ಅಥವಾ ಸಂಸ್ಥೆಯು ವಿದ್ಯುನ್ಮಾನ ದಾಖಲೆಗಳ ನಮೂನೆಯಲ್ಲಿ ಯಾವುದೇ ದಸ್ತಾವೇಜನ್ನು ಸ್ವೀಕರಿಸತಕ್ಕದ್ದೆಂದು, ನೀಡತಕ್ಕದ್ದೆಂದು, ಸೃಜಿಸತಕ್ಕದ್ದೆಂದು, ಇಟ್ಟುಕೊಳ್ಳತಕ್ಕದ್ದೆಂದು ಮತ್ತು ಪರಿರಕ್ಷಿಸತಕ್ಕದ್ದೆಂದು ಅಥವಾ ವಿದ್ಯುನ್ಮಾನ ನಮೂನೆಯಲ್ಲಿ ಯಾವುದೇ ಹಣಕಾಸು ವ್ಯವಹಾರ ಮಾಡತಕ್ಕದ್ದೆಂದು ಒತ್ತಾಯಿಸುವ ಹಕ್ಕನ್ನು ಯಾರೇ ವ್ಯಕ್ತಿಗೆ ಪ್ರದಾನ ಮಾಡತಕ್ಕದ್ದಲ್ಲ.

**10. ಅಂಕಿ ಚಿಹ್ನೆಯ ಸಂಬಂಧದಲ್ಲಿ ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.**– ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ,–

(ಎ) ಅಂಕಿ ಚಿಹ್ನೆಯ ವಿಧವನ್ನು;

(ಬಿ) ಅಂಕಿ ಚಿಹ್ನೆಯನ್ನು ಹಾಕತಕ್ಕ ರೀತಿ ಮತ್ತು ಕ್ರಮವ್ಯವಸ್ಥೆಯನ್ನು;

(ಸಿ) ಅಂಕಿ ಚಿಹ್ನೆಯನ್ನು ಹಾಕುವ ವ್ಯಕ್ತಿಯ ಗುರುತನ್ನು ಕಂಡು ಹಿಡಿಯಲು ಅನುಕೂಲವಾಗುವಂಥ ವಿಧಾನ ಅಥವಾ ಕಾರ್ಯವಿಧಾನವನ್ನು ಅಥವಾ ಪ್ರಕ್ರಿಯೆಯನ್ನು;

(ಡಿ) ವಿದ್ಯುನ್ಮಾನ ದಾಖಲೆಗಳ ಅಥವಾ ಸಂದಾಯಗಳ ಸಮಗ್ರತೆ, ಸುರಕ್ಷೆ ಮತ್ತು ಗೌಪ್ಯತೆಯನ್ನು ಸಾಕಷ್ಟು ಖಾತ್ರಿ ಪಡಿಸುವ ನಿಯಂತ್ರಕ ಪ್ರಕ್ರಿಯೆಗಳು ಮತ್ತು ಕಾರ್ಯವಿಧಾನಗಳನ್ನು; ಮತ್ತು

(ಇ) ಅಂಕಿ ಚಿಹ್ನೆಗಳಿಗೆ ಕಾನೂನು ಪರಿಣಾಮವನ್ನು ಒದಗಿಸಲು ಅಗತ್ಯವಾದ ಯಾವುದೇ ಇತರ ವಿಷಯವನ್ನು

– ನಿಯಮಗಳ ಮೂಲಕ ನಿಯಮಿಸಬಹುದು.

## ಅಧ್ಯಾಯ – IV

## ವಿದ್ಯುನ್ಮಾನ ದಾಖಲೆಗಳ ಆರೋಪಣ, ಸ್ವೀಕೃತಿ ಮತ್ತು ರವಾನೆ

**11. ವಿದ್ಯುನ್ಮಾನ ದಾಖಲೆಗಳ ಆರೋಪಣ.**– ವಿದ್ಯುನ್ಮಾನ ದಾಖಲೆಯನ್ನು,–

(ಎ) ಮೂಲಕರ್ತನು ಸ್ವತಃ ಅದನ್ನು ಕಳುಹಿಸಿದ್ದಲ್ಲಿ;

(ಬಿ) ವಿದ್ಯುನ್ಮಾನ ದಾಖಲೆಯ ಸಂಬಂಧದಲ್ಲಿ ಮೂಲಕರ್ತನ ಪರವಾಗಿ ಕಾರ್ಯನಿರ್ವಹಿಸಲು ಅವನಿಂದ ಅಧಿಕಾರ ಪಡೆದ ವ್ಯಕ್ತಿಯು ಕಳುಹಿಸಿದ್ದಲ್ಲಿ; ಅಥವಾ

(ಸಿ) ಸ್ವಯಂಚಾಲಿತವಾಗಿ ಕಾರ್ಯಾಚರಣೆ ಮಾಡಲು ಮೂಲಕರ್ತನಿಂದ ಅಥವಾ ಅವನ ಪರವಾಗಿ ವಿಷಯ ಕ್ರಮದ ಮಾಹಿತಿ ವ್ಯವಸ್ಥೆಯ ಮೂಲಕ ಕಳುಹಿಸಿದ್ದಲ್ಲಿ

– ಮೂಲಕರ್ತನು ಸ್ವತಃ ಕಳುಹಿಸಿದ್ದೆಂದು ಆರೋಪಿಸತಕ್ಕದ್ದು.

**12. ಸ್ವೀಕೃತಿಯ ರಸೀದಿ.–** (1) ವಿದ್ಯುನ್ಮಾನ ದಾಖಲೆಯನ್ನು ಸ್ವೀಕರಿಸಿದ್ದಕ್ಕೆ ರಸೀದಿಯನ್ನು ಒಂದು ನಿರ್ದಿಷ್ಟ ನಮೂನೆ ಅಥವಾ ಒಂದು ನಿರ್ದಿಷ್ಟ ವಿಧಾನದಲ್ಲಿ ರಸೀದಿ ನೀಡಬೇಕೆಂಬ ಬಗ್ಗೆ ಮೂಲಕರ್ತನು ವಿಳಾಸದಾರನೊಂದಿಗೆ ಒಪ್ಪಿಕೊಂಡಿಲ್ಲದಿರುವಲ್ಲಿ,–

(ಎ) ವಿಳಾಸದಾರನು ಸ್ವಯಂಚಾಲಿತ ಅಥವಾ ಇತರ ಯಾವುದೇ ಸಂಪರ್ಕ ಸಾಧನದ ಮೂಲಕ; ಅಥವಾ

(ಬಿ) ವಿದ್ಯುನ್ಮಾನ ದಾಖಲೆಯನ್ನು ಸ್ವೀಕರಿಸಿರುವ ಬಗ್ಗೆ ಮೂಲಕರ್ತನಿಗೆ ಸಾಕಷ್ಟು ಸೂಚನೆ ದೊರಕುವಂತೆ ವಿಳಾಸದಾರನ ಯಾವುದೇ ವರ್ತನೆಯ ಮೂಲಕ

– ರಸೀದಿಯನ್ನು ನೀಡಬಹುದು.

(2) ಮೂಲಕರ್ತನು, ವಿದ್ಯುನ್ಮಾನ ದಾಖಲೆಯ ಸ್ವೀಕೃತಿಗೆ ರಸೀದಿ ಸ್ವೀಕರಿಸಿದಾಗ ಮಾತ್ರವೇ ಅಂಥ ವಿದ್ಯುನ್ಮಾನ ದಾಖಲೆಯು, ಬಂಧನಕಾರಿಯಾಗತಕ್ಕದ್ದೆಂದು ನಿಯಮಿಸಿರುವಲ್ಲಿ, ಸ್ವೀಕೃತಿಯ ರಸೀದಿಯನ್ನು ಹಾಗೆ ಸ್ವೀಕರಿಸಿದ ಹೊರತು, ಆ ವಿದ್ಯುನ್ಮಾನ ದಾಖಲೆಯನ್ನು ಮೂಲಕರ್ತನು ಎಂದೂ ಕಳುಹಿಸಿರಲಿಲ್ಲವೆಂದು ಭಾವಿಸತಕ್ಕದ್ದು.

(3) ಮೂಲಕರ್ತನು, ಅಂಥ ರಸೀದಿಯನ್ನು ಸ್ವೀಕರಿಸಿದಾಗ ಮಾತ್ರವೇ ಆ ವಿದ್ಯುನ್ಮಾನ ದಾಖಲೆಯು ಬಂಧನಕಾರಿಯಾಗತಕ್ಕದ್ದೆಂದು ನಿಯಮಿಸಿಲ್ಲದಿರುವಲ್ಲಿ ಮತ್ತು ಮೂಲಕರ್ತನು ನಿರ್ದಿಷ್ಟಪಡಿಸಿದ ಅಥವಾ ಒಪ್ಪಿಕೊಂಡ ಅವಧಿಯೊಳಗೆ ಅಥವಾ ಯಾವುದೇ ಸಮಯವನ್ನು ನಿರ್ದಿಷ್ಟಪಡಿಸಿರದಿದ್ದರೆ ಅಥವಾ ಒಪ್ಪಿಕೊಂಡಿರದಿದ್ದರೆ ಯುಕ್ತ ಸಮಯದೊಳಗೆ ಯಾವುದೇ ರಸೀದಿಯನ್ನು ಸ್ವೀಕರಿಸದಿರುವಲ್ಲಿ ಆಗ ಮೂಲಕರ್ತನು ತಾನು ಯಾವುದೇ ರಸೀದಿಯನ್ನು ಸ್ವೀಕರಿಸಿಲ್ಲವೆಂದು ತಿಳಿಸುವ ಮತ್ತು ರಸೀದಿಯನ್ನು ತಾನು ಸ್ವೀಕರಿಸತಕ್ಕ ಯುಕ್ತ ಸಮಯವನ್ನು ನಿರ್ದಿಷ್ಟಪಡಿಸುವ ಒಂದು ನೋಟೀಸನ್ನು ವಿಳಾಸದಾರನಿಗೆ ನೀಡಬಹುದು ಮತ್ತು ಈ ರೀತಿ ಮೇಲೆ ತಿಳಿಸಿದ ಸಮಯದೊಳಗೆ ಯಾವುದೇ ರಸೀದಿಯನ್ನು ಸ್ವೀಕರಿಸಿಲ್ಲದಿರುವಲ್ಲಿ ಅವನು ವಿಳಾಸದಾರನಿಗೆ ಆ ಕುರಿತು ಒಂದು ನೋಟೀಸನ್ನು ನೀಡಿದ ತರುವಾಯ, ವಿದ್ಯುನ್ಮಾನ ದಾಖಲೆಯನ್ನು ಕಳಿಸಿಯೇ ಇಲ್ಲವೆಂಬುದಾಗಿ ಪರಿಗಣಿಸಬಹುದು.

**13. ವಿದ್ಯುನ್ಮಾನ ದಾಖಲೆಯನ್ನು ರವಾನಿಸಿದ ಮತ್ತು ಸ್ವೀಕರಿಸಿದ ಸಮಯ ಮತ್ತು ಸ್ಥಳ.–** (1) ಮೂಲಕರ್ತ ಮತ್ತು ವಿಳಾಸದಾರನ ನಡುವೆ ಅನ್ಯಥಾ ಒಪ್ಪಿಕೊಂಡಿರುವುದನ್ನು ಹೊರತುಪಡಿಸಿ, ವಿದ್ಯುನ್ಮಾನ ದಾಖಲೆಯು, ಮೂಲಕರ್ತನ ನಿಯಂತ್ರಣದಾಚೆಗಿನ ಒಂದು ಗಣಕಯಂತ್ರ ಮೂಲ ಸಂಪತ್ತನ್ನು ಪ್ರವೇಶಿಸಿದಾಗ, ಅದರ ರವಾನೆಯು ಸಂಭವಿಸುತ್ತದೆ.

(2) ಮೂಲಕರ್ತ ಮತ್ತು ವಿಳಾಸದಾರನ ನಡುವೆ ಅನ್ಯಥಾ ಒಪ್ಪಿಕೊಂಡಿರುವುದನ್ನು ಹೊರತುಪಡಿಸಿ, ವಿದ್ಯುನ್ಮಾನ ದಾಖಲೆಯ ಸ್ವೀಕೃತಿಯ ಸಮಯವು ಈ ಮುಂದಿನಂತೆ ನಿರ್ಧಾರವಾಗತಕ್ಕದ್ದು, ಎಂದರೆ:–

(ಎ) ವಿಳಾಸದಾರನು ವಿದ್ಯುನ್ಮಾನ ದಾಖಲೆಗಳನ್ನು ಸ್ವೀಕರಿಸುವ ಉದ್ದೇಶಕ್ಕಾಗಿ ಗಣಕಯಂತ್ರ ಮೂಲ ಸಂಪತ್ತನ್ನು ಸೂಚಿಸಿದ್ದರೆ,–

(i) ವಿದ್ಯುನ್ಮಾನ ದಾಖಲೆಯು ಸೂಚಿಸಿದ ಗಣಕಯಂತ್ರ ಮೂಲ ಸಂಪತ್ತನ್ನು ಪ್ರವೇಶಿಸಿದ ಸಮಯಕ್ಕೆ ಸ್ವೀಕೃತಿಯು ಸಂಭವಿಸುತ್ತದೆ; ಅಥವಾ

(ii) ವಿದ್ಯುನ್ಮಾನ ದಾಖಲೆಯನ್ನು ಸೂಚಿಸಿದ ಗಣಕಯಂತ್ರ ಮೂಲ ಸಂಪತ್ತಿಗೆ ಕಳುಹಿಸದೆ ವಿಳಾಸದಾರನ ಗಣಕಯಂತ್ರ ಮೂಲಸಂಪತ್ತಿಗೆ ಕಳುಹಿಸಿದ್ದರೆ ವಿಳಾಸದಾರನು ವಿದ್ಯುನ್ಮಾನ ದಾಖಲೆಯನ್ನು ಮರಳಿ ಪಡೆದ ಸಮಯಕ್ಕೆ ಸ್ವೀಕೃತಿಯು ಸಂಭವಿಸುತ್ತದೆ;

(ಬಿ) ವಿಳಾಸದಾರನು ನಿರ್ದಿಷ್ಟಪಡಿಸಿದ ಸಮಯಗಳೇನಾದರೂ ಇದ್ದರೆ ಅವುಗಳನ್ನು ಗಣಕಯಂತ್ರ ಮೂಲ ಸಂಪತ್ತನ್ನು ಗೊತ್ತುಮಾಡಿರದಿದ್ದರೆ, ವಿದ್ಯುನ್ಮಾನ ದಾಖಲೆಯು ವಿಳಾಸದಾರನ ಗಣಕಯಂತ್ರ ಮೂಲ ಸಂಪತ್ತನ್ನು ಪ್ರವೇಶಿಸಿದಾಗ ಸ್ವೀಕೃತಿಯು ಸಂಭವಿಸುತ್ತದೆ.

(3) ಮೂಲಕರ್ತ ಮತ್ತು ವಿಳಾಸದಾರನ ನಡುವೆ ಅನ್ಯಥಾ ಒಪ್ಪಿಕೊಂಡಿರುವುದನ್ನು ಹೊರತುಪಡಿಸಿ, ಮೂಲಕರ್ತನು ತನ್ನ ವ್ಯವಹಾರದ ನೆಲೆಯನ್ನು ಹೊಂದಿರುವ ಸ್ಥಳಕ್ಕೆ ವಿದ್ಯುನ್ಮಾನ ದಾಖಲೆಯನ್ನು ರವಾನಿಸಲಾಗಿದೆಯೆಂದು ಭಾವಿಸತಕ್ಕದ್ದು

ಮತ್ತು ವಿಳಾಸದಾರನು ತನ್ನ ವ್ಯವಹಾರದ ನೆಲೆಯನ್ನು ಹೊಂದಿರುವ ಸ್ಥಳದಲ್ಲಿ ಅದನ್ನು ಸ್ವೀಕರಿಸಲಾಗಿದೆಯೆಂದು ಭಾವಿಸತಕ್ಕದ್ದು.

(4) ಗಣಕಯಂತ್ರ ಮೂಲಸಂಪತ್ತು ನೆಲೆಸಿರುವ ಸ್ಥಳ ಮತ್ತು (3)ನೇ ಉಪಪ್ರಕರಣದ ಅಡಿಯಲ್ಲಿ ವಿದ್ಯುನ್ಮಾನ ದಾಖಲೆಯನ್ನು ಸ್ವೀಕರಿಸಲಾಗಿದೆಯೆಂದು ಭಾವಿಸಲಾಗುವ ಸ್ಥಳ ಇವು ಬೇರೆ ಬೇರೆಯಾಗಿದ್ದರೂ (2)ನೇ ಉಪಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕದ್ದು.

(5) ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) ಮೂಲಕರ್ತನು ಅಥವಾ ವಿಳಾಸದಾರನು ಒಂದಕ್ಕಿಂತ ಹೆಚ್ಚಿನ ವ್ಯವಹಾರದ ಸ್ಥಳಗಳನ್ನು ಹೊಂದಿದ್ದರೆ, ವ್ಯವಹಾರದ ಪ್ರಧಾನ ಸ್ಥಳವು ವ್ಯವಹಾರದ ಸ್ಥಳವಾಗಿರತಕ್ಕದ್ದು;

(ಬಿ) ಮೂಲಕರ್ತನು ಅಥವಾ ವಿಳಾಸದಾರನು ವ್ಯವಹಾರ ಸ್ಥಳವನ್ನು ಹೊಂದಿರದಿದ್ದರೆ, ಅವನ ವಾಡಿಕೆಯ ವಾಸಸ್ಥಳವನ್ನು ವ್ಯವಹಾರದ ಸ್ಥಳವೆಂಬುದಾಗಿ ಭಾವಿಸತಕ್ಕದ್ದು;

(ಸಿ) ಒಂದು ನಿಗಮಿತ ನಿಕಾಯಕ್ಕೆ ಸಂಬಂಧಿಸಿದಂತೆ "ವಾಡಿಕೆಯ ವಾಸಸ್ಥಳ" ಎಂದರೆ ಅದನ್ನು ನೋಂದಾಯಿಸಿರುವಂಥ ಸ್ಥಳ.

## ಅಧ್ಯಾಯ – V

## ಸುರಕ್ಷಿತ ವಿದ್ಯುನ್ಮಾನ ದಾಖಲೆಗಳು ಮತ್ತು ಸುರಕ್ಷಿತ ಅಂಕಿ ಚಿಹ್ನೆಗಳು

**14. ಸುರಕ್ಷಿತ ವಿದ್ಯುನ್ಮಾನ ದಾಖಲೆ.–** ಒಂದು ವಿದ್ಯುನ್ಮಾನ ದಾಖಲೆಗೆ ಒಂದು ನಿರ್ದಿಷ್ಟ ಕಾಲದಲ್ಲಿ ಯಾವುದೇ ಸುರಕ್ಷಾ ಕಾರ್ಯವಿಧಾನವನ್ನು ಅನ್ವಯಿಸಿರುವಲ್ಲಿ, ಅಂಥ ದಾಖಲೆಯನ್ನು, ಅಂಥ ಕಾಲದಿಂದ ಸತ್ಯಾಪನೆಯ ಸಮಯದವರೆಗೆ ಸುರಕ್ಷಿತ ವಿದ್ಯುನ್ಮಾನ ದಾಖಲೆಯೆಂದು ಭಾವಿಸತಕ್ಕದ್ದು.

**15. ಸುರಕ್ಷಿತ ಅಂಕಿ ಚಿಹ್ನೆ.–** ಸಂಬಂಧಪಟ್ಟ ಪಕ್ಷಕಾರರು ಒಪ್ಪಿಕೊಂಡ ಸುರಕ್ಷಾ ಕಾರ್ಯವಿಧಾನವನ್ನು ಅನ್ವಯಿಸುವ ಮೂಲಕ ಅಂಕಿ ಚಿಹ್ನೆಯನ್ನು ಹಾಕಿದ ಸಮಯದಲ್ಲಿ, ಅದು,–

(ಎ) ಅದನ್ನು ಹಾಕುವ ವಂತಿಗೆದಾರನಿಗೆ ಅನನ್ಯವಾಗಿತ್ತು;

(ಬಿ) ಅಂಥ ವಂತಿಗೆದಾರನನ್ನು ಗುರುತಿಸಲು ಸಮರ್ಥವಾಗಿತ್ತು;

(ಸಿ) ವಂತಿಗೆದಾರನ ಸಂಪೂರ್ಣ ನಿಯಂತ್ರಣದಲ್ಲಿರುವ ಒಂದು ವಿಧಾನದಲ್ಲಿ ಅಥವಾ ಒಂದು ಸಾಧನವನ್ನು ಬಳಸಿ ಸೃಜಿಸಲಾಗಿತ್ತೆಂದು ಮತ್ತು ಅಂಥ ವಿದ್ಯುನ್ಮಾನ ದಾಖಲೆಯನ್ನು ಬದಲಾಯಿಸಿದರೆ ಅಂಕಿ ಚಿಹ್ನೆಯನ್ನು ಅಮಾನ್ಯಗೊಳಿಸುವ ರೀತಿಯಲ್ಲಿ ಅದಕ್ಕೆ ಸಂಬಂಧಿಸಿದ ವಿದ್ಯುನ್ಮಾನ ದಾಖಲೆಯೊಂದಿಗೆ ಸಂಪರ್ಕ ಕಲ್ಪಿಸಲಾಗಿತ್ತು

– ಎಂದು ಸತ್ಯಾಪನೆ ಮಾಡುವುದು ಸಾಧ್ಯವಿದ್ದರೆ ಆಗ ಅಂಥ ಅಂಕಿ ಚಿಹ್ನೆಯನ್ನು ಸುರಕ್ಷಿತ ಅಂಕಿ ಚಿಹ್ನೆಯೆಂದು ಭಾವಿಸತಕ್ಕದ್ದು.

**16. ಸುರಕ್ಷಾ ಕಾರ್ಯವಿಧಾನ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಮುಂದಿನವುಗಳು ಒಳಗೊಂಡಂತೆ ಆ ಕಾರ್ಯವಿಧಾನವನ್ನು ಬಳಸಿದ ಸಮಯದಲ್ಲಿ ಇದ್ದ ವಾಣಿಜ್ಯ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಸುರಕ್ಷಾ ಕಾರ್ಯವಿಧಾನವನ್ನು ಗೊತ್ತುಪಡಿಸತಕ್ಕದ್ದು,–

(ಎ) ವ್ಯವಹಾರದ ಸ್ವರೂಪ;

(ಬಿ) ಪಕ್ಷಕಾರರ ತಾಂತ್ರಿಕ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಅವರ ನೈಪುಣ್ಯತೆಯ ಮಟ್ಟ;

(ಸಿ) ಇತರ ಪಕ್ಷಕಾರರು ನಿರತರಾಗಿರುವಂಥ ಅಂಥವೇ ವ್ಯವಹಾರಗಳ ಪರಿಮಾಣ;

(ಡಿ) ಯಾರೇ ಪಕ್ಷಕಾರನಿಗೆ ಕೊಡಮಾಡಿದ ಆದರೆ ಅವನಿಂದ ತಿರಸ್ಕೃತವಾದ ಪರ್ಯಾಯಗಳ ಲಭ್ಯತೆ;

(ಇ) ಪರ್ಯಾಯ ಕಾರ್ಯವಿಧಾನಗಳ ವೆಚ್ಚ; ಮತ್ತು

(ಎಫ್) ಅದೇ ತರಹದ ವ್ಯವಹಾರಗಳಿಗಾಗಿ ಅಥವಾ ಸಂಪರ್ಕಗಳಿಗಾಗಿ ಸಾಮಾನ್ಯ ಬಳಕೆಯಲ್ಲಿರುವ ಕಾರ್ಯವಿಧಾನಗಳು.

## ಅಧ್ಯಾಯ – VI

## ಪ್ರಮಾಣೀಕರಿಸುವ ಪ್ರಾಧಿಕಾರಗಳ ವಿನಿಯಮನ

**17. ನಿಯಂತ್ರಕ ಮತ್ತು ಇತರ ಅಧಿಕಾರಿಗಳ ನೇಮಕ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರಮಾಣೀಕರಿಸುವ ಪ್ರಾಧಿಕಾರಗಳ ನಿಯಂತ್ರಕರನ್ನು ನೇಮಕ ಮಾಡಬಹುದು ಮತ್ತು ಅದೇ ಅಥವಾ ತರುವಾಯದ ಅಧಿಸೂಚನೆಯ ಮೂಲಕ ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಉಪ ನಿಯಂತ್ರಕರನ್ನು ಮತ್ತು ಸಹಾಯಕ ನಿಯಂತ್ರಕರನ್ನು ಸಹ ನೇಮಕ ಮಾಡಬಹುದು.

(2) ನಿಯಂತ್ರಕನು, ಕೇಂದ್ರ ಸರ್ಕಾರದ ಸಾಮಾನ್ಯ ನಿಯಂತ್ರಣ ಮತ್ತು ನಿರ್ದೇಶನಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಉಪ–ನಿಯಂತ್ರಕನು ಮತ್ತು ಸಹಾಯಕ ನಿಯಂತ್ರಕನು, ನಿಯಂತ್ರಕನ ಸಾಮಾನ್ಯ ಅಧೀಕ್ಷಣೆ ಮತ್ತು ನಿಯಂತ್ರಣದಲ್ಲಿ ನಿಯಂತ್ರಕನು ತಮಗೆ ವಹಿಸಿಕೊಡುವ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ನಿಯಂತ್ರಕನ, ಉಪ–ನಿಯಂತ್ರಕರ ಮತ್ತು ಸಹಾಯಕ ನಿಯಂತ್ರಕರ ವಿದ್ಯಾರ್ಹತೆಗಳು, ಅನುಭವ ಮತ್ತು ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ಕೇಂದ್ರ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

(5) ನಿಯಂತ್ರಕನ ಮುಖ್ಯ ಕಚೇರಿ ಮತ್ತು ಶಾಖಾ ಕಚೇರಿಯು, ಕೇಂದ್ರ ಸರ್ಕಾರವು, ನಿರ್ದಿಷ್ಟಪಡಿಸಬಹುದಾದಂಥ ಸ್ಥಳಗಳಲ್ಲಿರತಕ್ಕದ್ದು ಮತ್ತು ಇವುಗಳನ್ನು ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸಬಹುದಾದಂಥ ಸ್ಥಳಗಳಲ್ಲಿ ಸ್ಥಾಪಿಸಬಹುದು.

(6) ನಿಯಂತ್ರಕನ ಅಧಿಕಾರ ಪದದ ಒಂದು ಮೊಹರು ಇರತಕ್ಕದ್ದು.

**18. ನಿಯಂತ್ರಕನ ಪ್ರಕಾರ್ಯಗಳು.–** ನಿಯಂತ್ರಕನು ಈ ಕೆಳಕಂಡ ಎಲ್ಲಾ ಪ್ರಕಾರ್ಯಗಳನ್ನು ಅಥವಾ ಆ ಪೈಕಿ ಯಾವುದೇ ಪ್ರಕಾರ್ಯವನ್ನು ನೆರವೇರಿಸಬಹುದು, ಎಂದರೆ:–

(ಎ) ಪ್ರಮಾಣೀಕರಿಸುವ ಪ್ರಾಧಿಕಾರಗಳ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸುವುದು;

(ಬಿ) ಪ್ರಮಾಣೀಕರಿಸುವ ಪ್ರಾಧಿಕಾರಗಳ ಸಾರ್ವಜನಿಕ ಕೀಲಿಗಳನ್ನು ಪ್ರಮಾಣೀಕರಿಸುವುದು;

(ಸಿ) ಪ್ರಮಾಣೀಕರಿಸುವ ಪ್ರಾಧಿಕಾರಗಳು ನಿರ್ವಹಿಸತಕ್ಕ ಗುಣಮಟ್ಟಗಳನ್ನು ಗೊತ್ತುಪಡಿಸುವುದು;

(ಡಿ) ಪ್ರಮಾಣೀಕರಿಸುವ ಪ್ರಾಧಿಕಾರಗಳ ನೌಕರರು ಹೊಂದಿರತಕ್ಕ ವಿದ್ಯಾರ್ಹತೆಗಳು ಮತ್ತು ಅನುಭವವನ್ನು ನಿರ್ದಿಷ್ಟಪಡಿಸುವುದು;

(ಇ) ಪ್ರಮಾಣೀಕರಿಸುವ ಪ್ರಾಧಿಕಾರಗಳು ಯಾವ ಷರತ್ತುಗಳಿಗೆ ಒಳಪಟ್ಟು ತಮ್ಮ ವ್ಯವಹಾರವನ್ನು ನಡೆಸತಕ್ಕದ್ದೋ ಆ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು;

(ಎಫ್) ಅಂಕಿ ಚಿಹ್ನೆ ಪ್ರಮಾಣ ಪತ್ರದ ಮತ್ತು ಸಾರ್ವಜನಿಕ ಕೀಲಿ ಸಂಬಂಧದಲ್ಲಿ ವಿತರಿಸಬಹುದಾದ ಅಥವಾ ಉಪಯೋಗಿಸಬಹುದಾದ ಬರಹದ, ಮುದ್ರಿತ ವಿಷಯಗಳ ಅಥವಾ ದೃಶ್ಯ ಸಾಮಗ್ರಿಗಳ ಮತ್ತು ಜಾಹೀರಾತುಗಳ ಒಳಾಂಶಗಳನ್ನು ನಿರ್ದಿಷ್ಟಪಡಿಸುವುದು;

(ಜಿ) ಅಂಕಿ ಚಿಹ್ನೆ ಪ್ರಮಾಣಪತ್ರ ಮತ್ತು ಸಾರ್ವಜನಿಕ ಕೀಲಿ ಇವುಗಳ ನಮೂನೆ ಮತ್ತು ಒಳಾಂಶವನ್ನು ನಿರ್ದಿಷ್ಟಪಡಿಸುವುದು;

(ಹೆಚ್) ಪ್ರಮಾಣೀಕರಿಸುವ ಪ್ರಾಧಿಕಾರಗಳು ನಿರ್ವಹಿಸತಕ್ಕ ಲೆಕ್ಕಪತ್ರಗಳ ನಮೂನೆ ಮತ್ತು ರೀತಿಯನ್ನು ನಿರ್ದಿಷ್ಟಪಡಿಸುವುದು;

(ಐ) ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಲೆಕ್ಕಪರಿಶೋಧಕರನ್ನು ನೇಮಕ ಮಾಡಬಹುದೋ ಅವುಗಳು ಮತ್ತು ಅವರಿಗೆ ಸಂದಾಯ ಮಾಡಬೇಕಾದ ಸಂಭಾವನೆಯನ್ನು ನಿರ್ದಿಷ್ಟಪಡಿಸುವುದು;

(ಜೆ) ಪ್ರಮಾಣೀಕರಿಸುವ ಪ್ರಾಧಿಕಾರವು ಒಂಟಿಯಾಗಿ ಅಥವಾ ಪ್ರಮಾಣೀಕರಿಸುವ ಇತರ ಪ್ರಾಧಿಕಾರದೊಂದಿಗೆ ಜಂಟಿಯಾಗಿ ಯಾವುದೇ ವಿದ್ಯುನ್ಮಾನ ವ್ಯವಸ್ಥೆಯನ್ನು ಸ್ಥಾಪಿಸಲು ಅನುಕೂಲ ಕಲ್ಪಿಸುವುದು ಮತ್ತು ಅಂಥ ವ್ಯವಸ್ಥೆಗಳನ್ನು ನಿಯಮಿಸುವುದು;

(ಕೆ) ಪ್ರಮಾಣೀಕರಿಸುವ ಪ್ರಾಧಿಕಾರಗಳು ವಂತಿಗೆದಾರರೊಂದಿಗೆ ತಮ್ಮ ವ್ಯವಹಾರಗಳನ್ನು ನಡೆಸತಕ್ಕ ರೀತಿಯನ್ನು ನಿರ್ದಿಷ್ಟಪಡಿಸುವುದು;

(ಎಲ್) ಪ್ರಮಾಣೀಕರಿಸುವ ಪ್ರಾಧಿಕಾರಗಳ ಮತ್ತು ವಂತಿಗೆದಾರರ ನಡುವೆ ಹಿತಾಸಕ್ತಿಯ ಯಾವುದೇ ಘರ್ಷಣೆಯನ್ನು ಪರಿಹರಿಸುವುದು;

(ಎಂ) ಪ್ರಮಾಣೀಕರಿಸುವ ಪ್ರಾಧಿಕಾರಗಳ ಕರ್ತವ್ಯಗಳನ್ನು ಗೊತ್ತುಪಡಿಸುವುದು;

(ಎನ್) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ಒಳಗೊಂಡ ಪ್ರತಿಯೊಂದು ಪ್ರಮಾಣೀಕರಿಸುವ ಪ್ರಾಧಿಕಾರದ ಪ್ರಕಟಣೆಯ ದಾಖಲೆಯನ್ನು ಒಳಗೊಂಡ ಮತ್ತು ಸಾರ್ವಜನಿಕರಿಗೆ ಲಭ್ಯವಾಗತಕ್ಕ ದತ್ತಾಂಶ ಸಂಗ್ರಹವನ್ನು ನಿರ್ವಹಿಸುವುದು.

**19. ವಿದೇಶೀ ಪ್ರಮಾಣೀಕರಿಸುವ ಪ್ರಾಧಿಕಾರಗಳಿಗೆ ಮಾನ್ಯತೆ.–** (1) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು, ನಿಯಂತ್ರಕನು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಮತ್ತು ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ, ಯಾವುದೇ ವಿದೇಶೀ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಈ ಅಧಿನಿಯಮದ ಉದ್ದೇಶಗಳಿಗಾಗಿ ಪ್ರಮಾಣೀಕರಿಸುವ ಪ್ರಾಧಿಕಾರವೆಂದು ಮಾನ್ಯತೆ ನೀಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಮಾನ್ಯತೆ ನೀಡಿರುವಲ್ಲಿ ಅಂಥ ಪ್ರಮಾಣೀಕರಿಸುವ ಪ್ರಾಧಿಕಾರವು ನೀಡಿದ ಅಂಕಿ ಚಿಹ್ನೆಯ ಪ್ರಮಾಣಪತ್ರವು ಈ ಅಧಿನಿಯಮದ ಉದ್ದೇಶಗಳಿಗಾಗಿ ಸಿಂಧುವಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಯಾವ ಷರತ್ತುಗಳಿಗೆ ಮತ್ತು ನಿರ್ಬಂಧಗಳಿಗೆ ಒಳಪಟ್ಟು ಮಾನ್ಯತೆಯನ್ನು ನೀಡಲಾಗಿತ್ತೋ ಅಂಥ ಯಾವುದೇ ಷರತ್ತುಗಳಲ್ಲಿ ಅಥವಾ ನಿರ್ಬಂಧಗಳಲ್ಲಿ ಯಾವುದನ್ನೇ ಆಗಲಿ ಯಾವುದೇ ಪ್ರಮಾಣೀಕರಿಸುವ ಪ್ರಾಧಿಕಾರವು ಉಲ್ಲಂಘಿಸಿದೆ ಎಂಬುದಾಗಿ ನಿಯಂತ್ರಕನಿಗೆ ಮನದಟ್ಟಾದರೆ ಅವನು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಅಂಥ ಮಾನ್ಯತೆಯನ್ನು ರದ್ದುಪಡಿಸಬಹುದು.

**20. ನಿಯಂತ್ರಕನು ಭಂಡಾರಿಗನಾಗಿ ಕಾರ್ಯ ನಿರ್ವಹಿಸುವುದು.–** (1) ನಿಯಂತ್ರಕನು, ಈ ಅಧಿನಿಯಮದ ಮೇರೆಗೆ ನೀಡಲಾದ ಎಲ್ಲಾ ಅಂಕಿ ಚಿಹ್ನೆಗಳ ಪ್ರಮಾಣಪತ್ರಗಳ ಭಂಡಾರಿಗನಾಗಿರತಕ್ಕದ್ದು.

(2) ನಿಯಂತ್ರಕನು, ಅಂಕಿಚಿಹ್ನೆಯ ಗೌಪ್ಯತೆ ಮತ್ತು ಭದ್ರತೆಗೆ ರಕ್ಷಣೆ ಒದಗಿಸಲಾಗಿದೆಯೆಂದು ಖಾತ್ರಿಪಡಿಸಿಕೊಳ್ಳಲು,–

(ಎ) ಅತಿಕ್ರಮಣದಿಂದ ಮತ್ತು ದುರ್ಬಳಕೆಯಿಂದ ಸುರಕ್ಷಿತವಾಗಿರುವ ಯಂತ್ರಭಾಗ, ಸೂಕ್ಷ್ಮಾಂಗಗಳನ್ನು ಬಳಸತಕ್ಕದ್ದು ಮತ್ತು ಪ್ರಕ್ರಿಯೆಗಳನ್ನು ಅನುಸರಿಸತಕ್ಕದ್ದು;

(ಬಿ) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಇತರ ಮಾನಕಗಳನ್ನು ಪಾಲಿಸತಕ್ಕದ್ದು.

(3) ನಿಯಂತ್ರಕನು, ಸಾರ್ವಜನಿಕರಲ್ಲಿ ಯಾರಿಗೇ ಆಗಲಿ ದತ್ತಾಂಶ ಸಂಗ್ರಹ ಮತ್ತು ಸಾರ್ವಜನಿಕ ಕೀಲಿಗಳು ಲಭ್ಯವಾಗುವಂಥ ರೀತಿಯಲ್ಲಿ ಸಾರ್ವಜನಿಕ ಕೀಲಿ ಮತ್ತು ಗಣಕೀಕೃತ ದತ್ತಾಂಶ ಸಂಗ್ರಹವನ್ನು ಇಟ್ಟುಕೊಂಡಿರತಕ್ಕದ್ದು.

**21. ಅಂಕಿ ಚಿಹ್ನೆಯ ಪ್ರಮಾಣಪತ್ರಗಳನ್ನು ನೀಡಲು ಲೈಸೆನ್ಸು.–** (1) (2)ನೇ ಉಪ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಯಾರೇ ವ್ಯಕ್ತಿಯು, ಅಂಕಿ ಚಿಹ್ನೆ ಪ್ರಮಾಣಪತ್ರಗಳನ್ನು ನೀಡುವ ಲೈಸೆನ್ಸು ಕೋರಿ ನಿಯಂತ್ರಕನಿಗೆ ಒಂದು ಅರ್ಜಿಯನ್ನು ಸಲ್ಲಿಸಬಹುದು.

(2) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡಲು ಅಗತ್ಯವಾಗಿರುವಂಥ ವಿದ್ಯಾರ್ಹತೆ, ತಜ್ಞತೆ, ಮಾನವ ಶಕ್ತಿ, ಹಣಕಾಸು ಸಂಪನ್ಮೂಲಗಳು ಮತ್ತು ಇತರ ಮೂಲಭೂತ ಸೌಕರ್ಯಗಳಿಗೆ ಸಂಬಂಧಿಸಿದಂಥ ಎಲ್ಲ ಅಗತ್ಯತೆಗಳನ್ನು ಅರ್ಜಿದಾರನು ಪೂರೈಸಿದ ಹೊರತು (1)ನೇ ಉಪ ಪ್ರಕರಣದ ಮೇರೆಗೆ ಯಾವುದೇ ಲೈಸೆನ್ಸನ್ನು ನೀಡತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ನೀಡಲಾದ ಲೈಸೆನ್ಸು,–

(ಎ) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಅವಧಿಯವರೆಗೆ ಸಿಂಧುವಾಗಿರತಕ್ಕದ್ದು;

(ಬಿ) ವರ್ಗಾವಣೀಯವಾಗಿರತಕ್ಕದ್ದಲ್ಲ ಅಥವಾ ಆನುವಂಶೀಯವಾಗಿರತಕ್ಕದ್ದಲ್ಲ;

(ಸಿ) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು.

**22. ಲೈಸೆನ್ಸಿಗಾಗಿ ಅರ್ಜಿ.–** (1) ಲೈಸೆನ್ಸ್ ಕೋರಿ ಸಲ್ಲಿಸುವ ಪ್ರತಿಯೊಂದು ಅರ್ಜಿಯು ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು.

(2) ಲೈಸೆನ್ಸ್‌ಗಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಗೆ ಈ ಕೆಳಕಂಡವುಗಳನ್ನು ಲಗತ್ತಿಸತಕ್ಕದ್ದು,–

(ಎ) ಪ್ರಮಾಣೀಕರಣ ವೃತ್ತೀಯ ವಿವರಪತ್ರ;

(ಬಿ) ಅರ್ಜಿದಾರನನ್ನು ಗುರುತಿಸುವುದಕ್ಕೆ ಸಂಬಂಧಪಟ್ಟ ಪ್ರಕ್ರಿಯೆಗಳೂ ಸೇರಿದಂತೆ ಒಂದು ವಿವರಪತ್ರ;

(ಸಿ) ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದಂತೆ ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಫೀಜಿನ ಸಂದಾಯದ ರಸೀದಿ;

(ಡಿ) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಇತರ ದಸ್ತಾವೇಜುಗಳು.

**23. ಲೈಸೆನ್ಸಿನ ನವೀಕರಣ.–** ಲೈಸೆನ್ಸಿನ ನವೀಕರಣಕ್ಕಾಗಿ ಸಲ್ಲಿಸುವ ಪ್ರತಿಯೊಂದು ಅರ್ಜಿಯು,–

(ಎ) ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು;

(ಬಿ) ಐದುಸಾವಿರ ರೂಪಾಯಿಗಳನ್ನು ಮೀರದಂಥ ಫೀಜಿನ ಸಂದಾಯದ ರಸೀದಿಯನ್ನು ಒಳಗೊಂಡಿರತಕ್ಕದ್ದು

– ಮತ್ತು ಲೈಸೆನ್ಸಿನ ಸಿಂಧುತ್ವದ ಅವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ನಲವತ್ತೈದು ದಿನಗಳಿಗಿಂತ ಕಡಿಮೆಯಿಲ್ಲದ ದಿನಾಂಕದಂದು ಅದನ್ನು ಸಲ್ಲಿಸತಕ್ಕದ್ದು.

**24. ಲೈಸೆನ್ಸನ್ನು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಕಾರ್ಯವಿಧಾನ.–** ನಿಯಂತ್ರಕನು, 21ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಅರ್ಜಿಯ ಜೊತೆಗೆ ಲಗತ್ತಿಸಿದ ದಸ್ತಾವೇಜುಗಳನ್ನು ಮತ್ತು ತಾನು ಸೂಕ್ತವೆಂದು ಭಾವಿಸುವ ಇತರ ಅಂಶಗಳನ್ನು ಪರಿಗಣಿಸಿದ ತರುವಾಯ ಲೈಸೆನ್ಸನ್ನು ಮಂಜೂರು ಮಾಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ಅರ್ಜಿದಾರನಿಗೆ ತನ್ನ ಪ್ರಕರಣವನ್ನು ನಿರೂಪಿಸಲು ಯುಕ್ತ ಅವಕಾಶವನ್ನು ನೀಡಿದ ಹೊರತು ಯಾವುದೇ ಅರ್ಜಿಯನ್ನು ಈ ಪ್ರಕರಣದ ಮೇರೆಗೆ ತಿರಸ್ಕರಿಸತಕ್ಕದ್ದಲ್ಲ.

**25. ಲೈಸೆನ್ಸಿನ ಅಮಾನತು.–** (1) ನಿಯಂತ್ರಕನು ತಾನು ಸೂಕ್ತವೆಂದು ಭಾವಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಒಂದು ಪ್ರಮಾಣೀಕರಿಸುವ ಪ್ರಾಧಿಕಾರವು,–

(ಎ) ಲೈಸೆನ್ಸ್ ನೀಡಿಕೆಗಾಗಿ ಅಥವಾ ನವೀಕರಣಕ್ಕಾಗಿ ಸಲ್ಲಿಸಿದ ಅರ್ಜಿಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದ ಮುಖ್ಯ ವಿವರಗಳಲ್ಲಿ ಸರಿಯಲ್ಲದ ಅಥವಾ ಸುಳ್ಳಾಗಿರುವ ಹೇಳಿಕೆಯನ್ನು ನೀಡಿದೆ ಎಂದು;

(ಬಿ) ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನು ಮಂಜೂರು ಮಾಡಲಾಗಿದೆಯೋ ಅವುಗಳನ್ನು ಪಾಲಿಸಲು ತಪ್ಪಿದೆಯೆಂದು;

(ಸಿ) 20ನೇ ಪ್ರಕರಣದ (2)ನೇ ಉಪ ಪ್ರಕರಣದ (ಬಿ) ಖಂಡದ ಮೇರೆಗೆ ನಿರ್ದಿಷ್ಟಪಡಿಸಿದ ಮಾನಕಗಳನ್ನು ನಿರ್ವಹಿಸಲು ತಪ್ಪಿದೆಯೆಂದು;

(ಡಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮ, ವಿನಿಯಮ, ಅಥವಾ ಆದೇಶದ ಯಾವುದೇ ಉಪಬಂಧವನ್ನು ಉಲ್ಲಂಘಿಸಿದೆಯೆಂದು

– ತನಗೆ ಮನದಟ್ಟಾದರೆ ಅವನು ಲೈಸೆನ್ಸನ್ನು ರದ್ದುಗೊಳಿಸಬಹುದು:

ಪರಂತು, ಪ್ರಸ್ತಾವಿತ ರದ್ದಿಯಾತಿಯ ವಿರುದ್ಧ ಕಾರಣ ತೋರಿಸಲು ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಒಂದು ಯುಕ್ತ ಅವಕಾಶವನ್ನು ನೀಡಿದ್ದ ಹೊರತು ಯಾವುದೇ ಲೈಸೆನ್ಸನ್ನು ರದ್ದುಗೊಳಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸಿನ ರದ್ದಿಯಾತಿಗಾಗಿ ಯಾವುದೇ ಆಧಾರವಿದೆಯೆಂದು ನಂಬಲು ನಿಯಂತ್ರಕನಿಗೆ ಯುಕ್ತ ಕಾರಣವಿದ್ದರೆ, ತಾನು ಆದೇಶಿಸಿದ ಯಾವುದೇ ವಿಚಾರಣೆಯು ಮುಕ್ತಾಯವಾಗುವ ತನಕ ಅಂಥ ಲೈಸೆನ್ಸನ್ನು ಆದೇಶದ ಮೂಲಕ ಅಮಾನತ್ತಿನಲ್ಲಿಡಬಹುದು:

ಪರಂತು, ಪ್ರಸ್ತಾವಿತ ಅಮಾನತಿನ ವಿರುದ್ಧ ಕಾರಣವನ್ನು ತೋರಿಸಲು ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಒಂದು ಯುಕ್ತ ಅವಕಾಶ ನೀಡಿದ್ದ ಹೊರತು ಹತ್ತು ದಿನಗಳನ್ನು ಮೀರುವ ಅವಧಿಗೆ ಯಾವುದೇ ಲೈಸೆನ್ಸನ್ನು ಅಮಾನತ್ತಿನಲ್ಲಿಡತಕ್ಕದ್ದಲ್ಲ.

(3) ಯಾವ ಪ್ರಮಾಣೀಕರಿಸುವ ಪ್ರಾಧಿಕಾರದ ಲೈಸೆನ್ಸನ್ನು ಅಮಾನತ್ತಿನಲ್ಲಿಡಲಾಗಿದೆಯೋ ಆ ಪ್ರಾಧಿಕಾರವು ಅಂಥ ಅಮಾನತ್ತಿನ ಅವಧಿಯಲ್ಲಿ ಯಾವುದೇ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡತಕ್ಕದ್ದಲ್ಲ.

**26. ಲೈಸೆನ್ಸಿನ ಅಮಾನತ್ತಿನ ಅಥವಾ ರದ್ದಿಯಾತಿಯ ನೋಟೀಸು.–** (1) ಪ್ರಮಾಣೀಕರಿಸುವ ಪ್ರಾಧಿಕಾರದ ಲೈಸೆನ್ಸನ್ನು ಅಮಾನತ್ತಿನಲ್ಲಿಟ್ಟಿರುವಲ್ಲಿ ಅಥವಾ ರದ್ದುಗೊಳಿಸಿರುವಲ್ಲಿ, ನಿಯಂತ್ರಕನು, ತಾನು ನಿರ್ವಹಿಸುವ ದತ್ತಾಂಶ ಸಂಗ್ರಹದಲ್ಲಿ ಅಂಥ ಅಮಾನತು ಅಥವಾ ಸಂದರ್ಭಾನುಸಾರ ರದ್ದಿಯಾತಿಯ ನೋಟೀಸನ್ನು ಪ್ರಕಟಿಸತಕ್ಕದ್ದು.

(2) ಒಂದು ಅಥವಾ ಹೆಚ್ಚು ಭಂಡಾರಿಗರನ್ನು ನಿರ್ದಿಷ್ಟಪಡಿಸಿರುವಲ್ಲಿ, ನಿಯಂತ್ರಕನು ಎಲ್ಲಾ ಅಂಥ ಭಂಡಾರಿಗರಲ್ಲಿ ಅಂಥ ಅಮಾನತು ಅಥವಾ ಸಂದರ್ಭಾನುಸಾರ ರದ್ದಿಯಾತಿಯ ನೋಟೀಸುಗಳನ್ನು ಪ್ರಕಟಿಸತಕ್ಕದ್ದು:

ಪರಂತು, ಅಂಥ ಅಮಾನತ್ತಿನ ಅಥವಾ ಸಂದರ್ಭಾನುಸಾರ ರದ್ದಿಯಾತಿಯ ನೋಟೀಸನ್ನು ಒಳಗೊಂಡ ದತ್ತಾಂಶ ಸಂಗ್ರಹವು ವೆಬ್‌ಸೈಟ್ ಮೂಲಕ ದೊರೆಯುವಂತಿರತಕ್ಕದ್ದು, ಅದು ಸದಾ ಕಾಲವೂ ಸಿಗುವಂತಿರತಕ್ಕದ್ದು:

ಮತ್ತೂ ಪರಂತು, ನಿಯಂತ್ರಕನು, ಅಗತ್ಯವೆಂದು ಪರಿಗಣಿಸಿದರೆ ತಾನು ಸಮುಚಿತವೆಂದು ಪರಿಗಣಿಸ ಬಹುದಾದಂಥ ವಿದ್ಯುನ್ಮಾನ ಅಥವಾ ಇತರ ಮಾಧ್ಯಮದಲ್ಲಿ ದತ್ತಾಂಶ ಸಂಗ್ರಹದ ಒಳಾಂಶಗಳನ್ನು ಪ್ರಕಟಿಸಬಹುದು.

**27. ಪ್ರತ್ಯಾಯೋಜಿಸುವ ಅಧಿಕಾರ.–** ನಿಯಂತ್ರಕನು, ಈ ಅಧ್ಯಾಯದ ಮೇರೆಗಿನ ನಿಯಂತ್ರಕನ ಅಧಿಕಾರಗಳ ಪೈಕಿ ಯಾವುದೇ ಅಧಿಕಾರಗಳನ್ನು ಚಲಾಯಿಸಲು ಉಪ ನಿಯಂತ್ರಕನಿಗೆ, ಸಹಾಯಕ ನಿಯಂತ್ರಕನಿಗೆ ಅಥವಾ ಯಾರೇ ಅಧಿಕಾರಿಗೆ ಲಿಖಿತದಲ್ಲಿ ಅಧಿಕಾರ ನೀಡಬಹುದು.

**28. ಉಲ್ಲಂಘನೆಗಳ ಬಗ್ಗೆ ತನಿಖೆ ಮಾಡುವ ಅಧಿಕಾರ.–** (1) ನಿಯಂತ್ರಕನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ಈ ಅಧಿನಿಯಮದ, ಅದರ ಮೇರೆಗೆ ಮಾಡಿದ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳ ಯಾವುದೇ ಉಲ್ಲಂಘನೆಯ ಬಗ್ಗೆ ತನಿಖೆಯನ್ನು ಕೈಗೆತ್ತಿಕೊಳ್ಳತಕ್ಕದ್ದು.

(2) ನಿಯಂತ್ರಕನು ಅಥವಾ ಅವನಿಂದ ಈ ಬಗ್ಗೆ ಅಧಿಕೃತನಾದ ಯಾರೇ ಅಧಿಕಾರಿಯು, ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ XIIIನೇ ಅಧ್ಯಾಯದ ಮೇರೆಗೆ ಆದಾಯ ತೆರಿಗೆ ಪ್ರಾಧಿಕಾರಗಳಿಗೆ ಪ್ರದಾನ ಮಾಡಿದಂಥದೇ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಆ ಅಧಿನಿಯಮದ ಮೇರೆಗೆ ವಿಧಿಸಲಾದಂಥ ಮಿತಿಗಳಿಗೊಳಪಟ್ಟು, ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

**29. ಗಣಕಯಂತ್ರಗಳು ಅಥವಾ ದತ್ತಾಂಶಗಳನ್ನು ಬಳಸುವ ಅವಕಾಶ.–** (1) 69ನೇ ಪ್ರಕರಣದ (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ನಿಯಂತ್ರಕನು ಅಥವಾ ಅವನಿಂದ ಈ ಬಗ್ಗೆ ಅಧಿಕೃತನಾದ ಯಾರೇ ವ್ಯಕ್ತಿಯು, ಈ ಅಧಿನಿಯಮದ, ಅದರ ಮೇರೆಗೆ ಮಾಡಲಾದ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ಮಾಡಲಾಗಿದೆಯೆಂದು ಸಂದೇಹ ಪಡುವುದಕ್ಕೆ ಯುಕ್ತ ಕಾರಣಗಳಿದ್ದರೆ, ಅಂಥ ಗಣಕಯಂತ್ರ ವ್ಯವಸ್ಥೆಯಲ್ಲಿ ಒಳಗೊಂಡಿರುವ ಅಥವಾ ದೊರಕುವ ಯಾವುದೇ ಮಾಹಿತಿ ಅಥವಾ ದತ್ತಾಂಶವನ್ನು ಪಡೆಯುವುದಕ್ಕಾಗಿ ಶೋಧಿಸುವ ಅಥವಾ ಶೋಧಿಸುವಂತೆ ಮಾಡುವ ಉದ್ದೇಶಕ್ಕಾಗಿ, ಯಾವುದೇ ಗಣಕಯಂತ್ರ ವ್ಯವಸ್ಥೆ, ಯಾವುದೇ ಸಾಧನ, ದತ್ತಾಂಶ ಅಥವಾ ಅಂಥ ವ್ಯವಸ್ಥೆಗೆ ಅಳವಡಿಸಲಾದ ಯಾವುದೇ ಇತರ ಸಾಮಗ್ರಿಯನ್ನು ಬಳಸುವ ಅವಕಾಶವನ್ನು ಹೊಂದಿರತಕ್ಕದ್ದು.

(2) (1)ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ, ನಿಯಂತ್ರಕನು ಅಥವಾ ಅವನಿಂದ ಅಧಿಕೃತನಾದ ಯಾರೇ ವ್ಯಕ್ತಿಯು, ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಸೂಕ್ತ ತಾಂತ್ರಿಕ ಮತ್ತು ಇತರ ಸಹಾಯವನ್ನು ತನಗೆ ಒದಗಿಸುವುದಕ್ಕಾಗಿ, ಗಣಕಯಂತ್ರ ವ್ಯವಸ್ಥೆ, ದತ್ತಾಂಶ ಸಾಧನ ಅಥವಾ ಸಾಮಗ್ರಿಯ ಪ್ರಭಾರವನ್ನು ಹೊಂದಿರುವ ಅಥವಾ ಅದರ ಕಾರ್ಯಾಚರಣೆಗೆ ಅನ್ಯಥಾ ಸಂಬಂಧಪಟ್ಟ ಯಾರೇ ವ್ಯಕ್ತಿಗೆ ಆದೇಶದ ಮೂಲಕ ನಿರ್ದೇಶಿಸಬಹುದು.

**30. ಪ್ರಮಾಣೀಕರಿಸುವ ಪ್ರಾಧಿಕಾರವು ಕೆಲವು ಕಾರ್ಯವಿಧಾನಗಳನ್ನು ಅನುಸರಿಸುವುದು.–** ಪ್ರತಿಯೊಂದು ಪ್ರಮಾಣೀಕರಿಸುವ ಪ್ರಾಧಿಕಾರವು,–

(ಎ) ಅತಿಕ್ರಮಣ ಮತ್ತು ದುರುಪಯೋಗದಿಂದ ರಕ್ಷಿತವಾಗಿರುವ ಯಂತ್ರ ಭಾಗ ಮತ್ತು ಸೂಕ್ಷ್ಮಾಂಗಗಳನ್ನು ಬಳಸಬಹುದು ಮತ್ತು ಕಾರ್ಯವಿಧಾನಗಳನ್ನು ಅನುಸರಿಸಬಹುದು;

(ಬಿ) ಉದ್ದೇಶಿತ ಕಾರ್ಯವಿಧಾನಗಳನ್ನು ನೆರವೇರಿಸುವುದಕ್ಕಾಗಿ ಯುಕ್ತವಾಗಿ ಹೊಂದಿಕೊಳ್ಳುವಂಥ ತನ್ನ ಸೇವೆಗಳಲ್ಲಿ ವಿಶ್ವಾಸಾರ್ಹತೆಯ ಯುಕ್ತ ಮಟ್ಟವನ್ನು ಒದಗಿಸತಕ್ಕದ್ದು;

(ಸಿ) ಅಂಕಿಚಿಹ್ನೆಯ ರಹಸ್ಯ ಮತ್ತು ಗೌಪ್ಯತೆಯನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಭದ್ರತಾ ಕಾರ್ಯ ವಿಧಾನಗಳನ್ನು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು;

(ಡಿ) ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಮಾನಕಗಳನ್ನು ಪಾಲಿಸತಕ್ಕದ್ದು.

**31. ಪ್ರಮಾಣೀಕರಿಸುವ ಪ್ರಾಧಿಕಾರವು ಅಧಿನಿಯಮ, ಮುಂತಾದುವುಗಳ ಪಾಲನೆಯನ್ನು ಖಾತ್ರಿಪಡಿಸುವುದು.–** ಪ್ರತಿಯೊಂದು ಪ್ರಮಾಣೀಕರಿಸುವ ಪ್ರಾಧಿಕಾರವು, ತಾನು ನಿಯೋಜಿಸಿಕೊಂಡ ಅಥವಾ ಅನ್ಯಥಾ ತೊಡಗಿಸಿಕೊಂಡ ಪ್ರತಿಯೊಬ್ಬ ವ್ಯಕ್ತಿಯು, ಈ ಅಧಿನಿಯಮ ಮತ್ತು ಅದರ ಮೇರೆಗೆ ರಚಿಸಲಾದ ನಿಯಮಗಳ, ವಿನಿಯಮಗಳ ಮತ್ತು ಆದೇಶಗಳ ಉಪಬಂಧಗಳನ್ನು ನಿಯೋಜಿತನಾದ ಅಥವಾ ತೊಡಗಿಕೊಂಡ ಅವಧಿಯಲ್ಲಿ ಅವನು ಪಾಲಿಸುತ್ತಾನೆಂಬುದನ್ನು ಖಾತ್ರಿಪಡಿಸಿಕೊಳ್ಳತಕ್ಕದ್ದು.

**32. ಲೈಸೆನ್ಸನ್ನು ಪ್ರದರ್ಶಿಸುವುದು.–** ಪ್ರತಿಯೊಂದು ಪ್ರಮಾಣೀಕರಿಸುವ ಪ್ರಾಧಿಕಾರವು ತಾನು ವ್ಯವಹಾರವನ್ನು ನಡೆಸುವ ಆವರಣದ ಎದ್ದು ಕಾಣುವ ಸ್ಥಳದಲ್ಲಿ ತನ್ನ ಲೈಸೆನ್ಸನ್ನು ಪ್ರದರ್ಶಿಸತಕ್ಕದ್ದು.

**33. ಲೈಸೆನ್ಸನ್ನು ಹಿಂದಿರುಗಿಸುವುದು.–** (1) ಯಾವ ಪ್ರಮಾಣೀಕರಿಸುವ ಪ್ರಾಧಿಕಾರದ ಲೈಸೆನ್ಸನ್ನು ಅಮಾನತು ಗೊಳಿಸಲಾಗಿದೆಯೋ ಅಥವಾ ರದ್ದುಗೊಳಿಸಲಾಗಿದೆಯೋ ಅಂಥ ಪ್ರತಿಯೊಂದು ಪ್ರಾಧಿಕಾರವು ಅಂಥ ಅಮಾನತ್ತಿನ ಅಥವಾ ರದ್ದಿಯಾತಿಯ ತರುವಾಯ ತಕ್ಷಣವೇ ಲೈಸೆನ್ಸನ್ನು ನಿಯಂತ್ರಕನಿಗೆ ಹಿಂದಿರುಗಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಪ್ರಮಾಣೀಕರಿಸುವ ಪ್ರಾಧಿಕಾರವು ಲೈಸೆನ್ಸನ್ನು ಹಿಂತಿರುಗಿಸಲು ತಪ್ಪಿದಲ್ಲಿ, ಯಾವ ವ್ಯಕ್ತಿಯ ಪರವಾಗಿ ಲೈಸೆನ್ಸನ್ನು ನೀಡಲಾಗಿದೆಯೋ ಆ ವ್ಯಕ್ತಿಯು ಅಪರಾಧದ ತಪ್ಪಿತಸ್ಥನಾಗಿರತಕ್ಕದ್ದು ಮತ್ತು ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**34. ಬಹಿರಂಗಪಡಿಸುವಿಕೆ.–** (1) ಪ್ರತಿಯೊಂದು ಪ್ರಮಾಣೀಕರಿಸುವ ಪ್ರಾಧಿಕಾರವು ವಿನಿಯಮಗಳ ಮೂಲಕ, ನಿರ್ದಿಷ್ಟಪಡಿಸಿದ ರೀತಿಯಲ್ಲಿ ಈ ಕೆಳಕಂಡವುಗಳನ್ನು ಬಹಿರಂಗಪಡಿಸತಕ್ಕದ್ದು, ಎಂದರೆ:–

(ಎ) ಪ್ರಮಾಣೀಕರಿಸುವ ಪ್ರಾಧಿಕಾರವು, ಮತ್ತೊಂದು ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ಅಂಕಿ ಚಿಹ್ನೆಯ ಸಹಿ ಮಾಡಲು ಬಳಸುವ ಖಾಸಗಿ ಕೀಲಿಗೆ ಸಂವಾದಿಯಾದ ಸಾರ್ವಜನಿಕ ಕೀಲಿಯನ್ನು ಒಳಗೊಂಡಿರುವಂಥ ಅದರ ಅಂಕಿ ಚಿಹ್ನೆ ಪ್ರಮಾಣಪತ್ರ;

(ಬಿ) ಅದಕ್ಕೆ ಸಂಬಂಧಿಸಿದ ಯಾವುದೇ ಪ್ರಮಾಣೀಕರಣ ಪದ್ಧತಿಯ ವಿವರಣೆ;

(ಸಿ) ಪ್ರಮಾಣೀಕರಿಸುವ ಪ್ರಾಧಿಕಾರದ ಪ್ರಮಾಣಪತ್ರದ ರದ್ದಿಯಾತಿ ಅಥವಾ ಅಮಾನತ್ತಿನ ನೋಟೀಸು, ಯಾವುದಾದರೂ ಇದ್ದರೆ ಅದು; ಮತ್ತು

(ಡಿ) ಪ್ರಾಧಿಕಾರವು ನೀಡಿರುವ ಅಂಕಿ ಚಿಹ್ನೆ ಪ್ರಮಾಣಪತ್ರದ ಅಥವಾ ತನ್ನ ಸೇವೆಗಳನ್ನು ಸ್ವೀಕರಿಸುವಲ್ಲಿ ಪ್ರಾಧಿಕಾರದ ಸಾಮರ್ಥ್ಯದ ವಿಶ್ವಸನೀಯತೆಯ ಮೇಲೆ ಪ್ರಧಾನವಾಗಿ ಮತ್ತು ಪ್ರತಿಕೂಲವಾಗಿ ಬೀರುವ ಯಾವುದೇ ಇತರ ಸಂಗತಿ.

(2) ತನ್ನ ಗಣಕಯಂತ್ರ ವ್ಯವಸ್ಥೆಯ ಅಖಂಡತೆಯ ಮೇಲೆ ಅಥವಾ ಯಾವ ಷರತ್ತುಗಳಿಗೆ ಒಳಪಟ್ಟು ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡಲಾಯಿತೋ ಆ ಷರತ್ತುಗಳ ಮೇಲೆ ಪ್ರಧಾನವಾಗಿ ಮತ್ತು ಪ್ರತಿಕೂಲವಾಗಿ ಪರಿಣಾಮ ಬೀರಬಹುದಾದಂಥ ಯಾವುದೇ ಘಟನೆ ಸಂಭವಿಸಿದೆಯೆಂದು ಅಥವಾ ಯಾವುದೇ ಸನ್ನಿವೇಶವು ಉದ್ಭವಿಸಿದೆಯೆಂದು ಪ್ರಮಾಣೀಕರಿಸುವ ಪ್ರಾಧಿಕಾರವು ಅಭಿಪ್ರಾಯಪಡುವಲ್ಲಿ, ಅದು,–

(ಎ) ಆ ಘಟನೆಯಿಂದ ಬಾಧಿತನಾಗಬಹುದಾದ ಯಾರೇ ವ್ಯಕ್ತಿಗೆ ತಿಳಿಸಲು ಸೂಕ್ತ ಪ್ರಯತ್ನಗಳನ್ನು ಮಾಡತಕ್ಕದ್ದು; ಅಥವಾ

(ಬಿ) ಅಂಥ ಘಟನೆ ಅಥವಾ ಸನ್ನಿವೇಶದೊಡನೆ ವ್ಯವಹರಿಸಲು ಅದರ ಪ್ರಮಾಣೀಕರಣ ಪದ್ಧತಿಯ ವಿವರಣೆಯಲ್ಲಿ ನಿರ್ದಿಷ್ಟಪಡಿಸಲಾದ ಕಾರ್ಯವಿಧಾನಕ್ಕನುಸಾರವಾಗಿ ಕಾರ್ಯನಿರ್ವಹಿಸತಕ್ಕದ್ದು.

## ಅಧ್ಯಾಯ – VII

## ಅಂಕಿ ಚಿಹ್ನೆ ಪ್ರಮಾಣಪತ್ರಗಳು

**35. ಪ್ರಮಾಣೀಕರಿಸುವ ಪ್ರಾಧಿಕಾರವು ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡುವುದು.–** (1) ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡುವುದಕ್ಕಾಗಿ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಬಹುದು.

(2) ಅಂಥ ಪ್ರತಿಯೊಂದು ಅರ್ಜಿಯ ಜೊತೆಗೆ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳನ್ನು ಮೀರದಂತೆ ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದ ಫೀಜಿನ ಸಂದಾಯ ರಸೀದಿಯನ್ನು ಲಗತ್ತಿಸಿರತಕ್ಕದ್ದು:

ಪರಂತು, (2)ನೇ ಉಪ ಪ್ರಕರಣದ ಮೇರೆಗೆ ಫೀಜನ್ನು ಗೊತ್ತುಪಡಿಸುವಾಗ, ಬೇರೆ ಬೇರೆ ವರ್ಗಗಳ ಅರ್ಜಿದಾರರಿಗೆ ಬೇರೆ ಬೇರೆ ರೀತಿಯ ಫೀಜುಗಳನ್ನು ಗೊತ್ತುಪಡಿಸಬಹುದು.

(3) ಅಂಥ ಪ್ರತಿಯೊಂದು ಅರ್ಜಿಯೊಂದಿಗೆ ಪ್ರಮಾಣೀಕರಣ ಪದ್ಧತಿಯ ವಿವರಣೆಯನ್ನು ಅಥವಾ ಅಂಥ ವಿವರಣೆಯು ಇಲ್ಲದಿರುವಲ್ಲಿ, ವಿನಿಯಮಗಳ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ಒಳಗೊಂಡಿರುವ ವಿವರಣೆಯನ್ನು ಲಗತ್ತಿಸತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಪ್ರಮಾಣೀಕರಿಸುವ ಪ್ರಾಧಿಕಾರವು, ಪ್ರಮಾಣೀಕರಣ ಪದ್ಧತಿಯ ವಿವರಣೆಯನ್ನು ಅಥವಾ (3)ನೇ ಉಪಪ್ರಕರಣದ ಮೇರೆಗಿನ ಇತರ ವಿವರಣೆಯನ್ನು ಪರಿಶೀಲಿಸಿದ ತರುವಾಯ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ತರುವಾಯ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡಬಹುದು ಅಥವಾ ಲಿಖಿತ ಕಾರಣಗಳನ್ನು ದಾಖಲಿಸಿ, ಅರ್ಜಿಯನ್ನು ತಿರಸ್ಕರಿಸಬಹುದು:

ಪರಂತು, ಪ್ರಮಾಣೀಕರಿಸುವ ಪ್ರಾಧಿಕಾರವು, ಈ ಕೆಳಕಂಡ ಅಂಶಗಳ ಬಗ್ಗೆ ಮನದಟ್ಟು ಮಾಡಿಕೊಂಡ ಹೊರತು ಯಾವುದೇ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡತಕ್ಕದ್ದಲ್ಲ, ಎಂದರೆ:-

(ಎ) ಅಂಕಿಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿಗೆ ಸೇರಿಸಬೇಕಾದ ಸಾರ್ವಜನಿಕ ಕೀಲಿಗೆ ಸಂವಾದಿಯಾದ ಖಾಸಗಿ ಕೀಲಿಯನ್ನು ಅರ್ಜಿದಾರನು ಹೊಂದಿದ್ದಾನೆ;

(ಬಿ) ಅಂಕಿಚಿಹ್ನೆಯನ್ನು ಸೃಜಿಸುವ ಸಾಮರ್ಥ್ಯವಿರುವ, ಖಾಸಗಿ ಕೀಲಿಯನ್ನು ಅರ್ಜಿದಾರನು ಹೊಂದಿದ್ದಾನೆ;

(ಸಿ) ಪ್ರಮಾಣಪತ್ರದಲ್ಲಿ ಪಟ್ಟಿಗೆ ಸೇರಿಸಲಾದ ಸಾರ್ವಜನಿಕ ಕೀಲಿಯನ್ನು ಅರ್ಜಿದಾರನು ಹೊಂದಿರುವ ಖಾಸಗಿ ಕೀಲಿ ಮೂಲಕ ಮಾಡಿರುವ ಅಂಕಿ ಚಿಹ್ನೆಯನ್ನು ಪರಿಶೀಲಿಸಲು ಬಳಸಬಹುದು:

ಮತ್ತೂ ಪರಂತು, ಉದ್ದೇಶಿತ ತಿರಸ್ಕರಣೆಯ ವಿರುದ್ಧ ಕಾರಣವನ್ನು ತೋರಿಸಲು ಅರ್ಜಿದಾರನಿಗೆ ಒಂದು ಯುಕ್ತ ಅವಕಾಶವನ್ನು ನೀಡಿದ ಹೊರತು ಯಾವುದೇ ಅರ್ಜಿಯನ್ನು ತಿರಸ್ಕರಿಸತಕ್ಕದ್ದಲ್ಲ.

**36. ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡಿದ ಮೇಲೆ ನಿರೂಪಣೆಗಳು.-** ಪ್ರಮಾಣೀಕರಿಸುವ ಪ್ರಾಧಿಕಾರವು ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡುವಾಗ, ಕೆಳಕಂಡಂತೆ ಪ್ರಮಾಣೀಕರಿಸತಕ್ಕದ್ದು,-

(ಎ) ಈ ಅಧಿನಿಯಮದ ಮತ್ತು ಅದರ ಮೇರೆಗೆ ಮಾಡಲಾದ ನಿಯಮಗಳ ಮತ್ತು ವಿನಿಯಮಗಳ ಉಪಬಂಧಗಳನ್ನು ಪಾಲಿಸಲಾಗಿದೆ;

(ಬಿ) ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ಪ್ರಕಟಿಸಲಾಗಿದೆ ಅಥವಾ ಅನ್ಯಥಾ ಅದರ ಮೇಲೆ ಅವಲಂಬಿಸುವ ವ್ಯಕ್ತಿಗೆ ಅದನ್ನು ದೊರೆಯುವಂತೆ ಮಾಡಲಾಗಿದೆ ಮತ್ತು ವಂತಿಗೆದಾರನು ಅದನ್ನು ಒಪ್ಪಿದ್ದಾನೆ;

(ಸಿ) ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿಗೆ ಸೇರಿಸಲಾದ ಸಾರ್ವಜನಿಕ ಕೀಲಿಗೆ ಸಂವಾದಿಯಾದ ಖಾಸಗಿ ಕೀಲಿಯನ್ನು ವಂತಿಗೆದಾರನು ಹೊಂದಿದ್ದಾನೆ;

(ಡಿ) ವಂತಿಗೆದಾರನ ಸಾರ್ವಜನಿಕ ಕೀಲಿ ಮತ್ತು ಖಾಸಗಿ ಕೀಲಿಗಳು ಕಾರ್ಯನಿರ್ವಹಿಸುವ ಜೋಡಿ ಕೀಲಿಗಳಾಗಿರುತ್ತವೆ;

(ಇ) ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ಒಳಗೊಂಡಿರುವ ಮಾಹಿತಿಯು ನಿಖರವಾಗಿರುತ್ತದೆ; ಮತ್ತು

(ಎಫ್) ಯಾವ ಪ್ರಧಾನ ಸಂಗತಿಯನ್ನು ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ಸೇರಿಸಿದ್ದರೆ (ಎ) ಯಿಂದ (ಡಿ) ವರೆಗಿನ ಖಂಡಗಳಲ್ಲಿ ಮಾಡಲಾದ ನಿರೂಪಣೆಗಳ ವಿಶ್ವಸನೀಯತೆ ಮೇಲೆ ಪ್ರತಿಕೂಲ ಪರಿಣಾಮ ಉಂಟುಮಾಡಬಹುದಾಗಿತ್ತೋ ಅಂಥ ಯಾವುದೇ ಮುಖ್ಯ ಸಂಗತಿಯು ತಿಳಿದುಬಂದಿಲ್ಲ.

**37. ಅಂಕಿ ಚಿಹ್ನೆ ಪ್ರಮಾಣಪತ್ರದ ಅಮಾನತು.-** (1) (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡಿದ ಪ್ರಮಾಣೀಕರಿಸುವ ಪ್ರಾಧಿಕಾರವು ಅಂಥ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು,-

(ಎ) ಈ ಕೆಳಕಂಡ ಸಂದರ್ಭಗಳಲ್ಲಿ ಹಾಗೆ ಅಮಾನತುಗೊಳಿಸಬೇಕೆಂಬುದಾಗಿ,-

(i) ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿಗೆ ಸೇರಿಸಿದ ವಂತಿಗೆದಾರನಿಂದ; ಅಥವಾ

(ii) ಆ ವಂತಿಗೆದಾರನ ಪರವಾಗಿ ಕಾರ್ಯನಿರ್ವಹಿಸಲು ಯುಕ್ತವಾಗಿ ಅಧಿಕೃತನಾದ ಯಾರೇ ವ್ಯಕ್ತಿಯಿಂದ ಕೋರಿಕೆ ಬಂದ ಮೇಲೆ;

(ಬಿ) ಸಾರ್ವಜನಿಕ ಹಿತದೃಷ್ಟಿಯಿಂದ ಅಂಕಿಚಿಹ್ನೆ ಪ್ರಮಾಣಪತ್ರವನ್ನು ಅಮಾನತುಗೊಳಿಸತಕ್ಕದ್ದೆಂದು ಅಭಿಪ್ರಾಯಪಟ್ಟರೆ

– ಅಮಾನತುಗೊಳಿಸಬಹುದು.

(2) ಅಂಕಿಚಿಹ್ನೆ ಪ್ರಮಾಣಪತ್ರವನ್ನು ಅಮಾನತುಗೊಳಿಸುವ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ವಂತಿಗೆದಾರನಿಗೆ ಒಂದು ಯುಕ್ತ ಅವಕಾಶವನ್ನು ನೀಡಿದ ಹೊರತು, ಹದಿನೈದು ದಿನಗಳಿಗಿಂತ ಹೆಚ್ಚಿನ ಅವಧಿಗೆ ಅದನ್ನು ಅಮಾನತುಗೊಳಿಸತಕ್ಕದ್ದಲ್ಲ.

(3) ಈ ಪ್ರಕರಣದ ಮೇರೆಗೆ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ಅಮಾನತುಗೊಳಿಸಿದ ಮೇಲೆ, ಪ್ರಮಾಣೀಕರಿಸುವ ಪ್ರಾಧಿಕಾರವು ಆ ವಿಷಯವನ್ನು ವಂತಿಗೆದಾರನಿಗೆ ತಿಳಿಸತಕ್ಕದ್ದು.

**38. ಅಂಕಿ ಚಿಹ್ನೆ ಪ್ರಮಾಣಪತ್ರದ ರದ್ದಿಯಾತಿ.–** (1) ಪ್ರಮಾಣೀಕರಿಸುವ ಪ್ರಾಧಿಕಾರವು, ತಾನು ನೀಡಿದ ಅಂಕಿಚಿಹ್ನೆ ಪ್ರಮಾಣಪತ್ರವನ್ನು, ಈ ಕೆಳಕಂಡ ಸಂದರ್ಭಗಳಲ್ಲಿ ರದ್ದುಗೊಳಿಸಬಹುದು,–

(ಎ) ವಂತಿಗೆದಾರನು ಅಥವಾ ಅವನಿಂದ ಅಧಿಕೃತನಾದ ಯಾರೇ ಇತರ ವ್ಯಕ್ತಿಯು ಅಮಾನತು ಗೊಳಿಸಬೇಕೆಂದು ಕೋರಿ ಮನವಿಯನ್ನು ಸಲ್ಲಿಸಿರುವುದು; ಅಥವಾ

(ಬಿ) ವಂತಿಗೆದಾರನು ಮರಣ ಹೊಂದಿರುವುದು; ಅಥವಾ

(ಸಿ) ವಂತಿಗೆದಾರನು ಫರ್ಮ್ ಅಥವಾ ಕಂಪನಿಯಾಗಿದ್ದಲ್ಲಿ, ಫರ್ಮ್‌ನ ವಿಘಟನೆ ಅಥವಾ ಕಂಪನಿಯ ಪರಿಸಮಾಪ್ತಿಯಾದ ಮೇಲೆ.

(2) (3)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ಮತ್ತು (1)ನೇ ಉಪಪ್ರಕರಣದ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರಮಾಣೀಕರಿಸುವ ಪ್ರಾಧಿಕಾರವು,–

(ಎ) ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ನಿರೂಪಿಸಲಾದ ಪ್ರಮುಖ ಸಂಗತಿಯು ಸುಳ್ಳೆಂದು ಅಥವಾ ಅದನ್ನು ಮರೆಮಾಚಲಾಗಿದೆಯೆಂದು;

(ಬಿ) ಅಂಕಿ ಚಿಹ್ನೆ ಪ್ರಮಾಣಪತ್ರದ ನೀಡಿಕೆಯ ಸಲುವಾಗಿ ಇರುವ ಅಗತ್ಯತೆಯನ್ನು ಪಾಲಿಸಲಾಗಿಲ್ಲವೆಂದು;

(ಸಿ) ಪ್ರಮಾಣೀಕರಿಸುವ ಪ್ರಾಧಿಕಾರದ ಖಾಸಗಿ ಕೀಲಿ ಅಥವಾ ಭದ್ರತಾ ವ್ಯವಸ್ಥೆಯನ್ನು ಅಂಕಿ ಚಿಹ್ನೆ ಪ್ರಮಾಣಪತ್ರದ ವಿಶ್ವಸನೀಯತೆಯನ್ನು ಗಣನೀಯವಾಗಿ ಬಾಧಿಸುವ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಾಗಿದೆಯೆಂದು;

(ಡಿ) ವಂತಿಗೆದಾರನು ದಿವಾಳಿಯಾಗಿರುವುದಾಗಿ ಅಥವಾ ಮೃತನಾಗಿರುವುದಾಗಿ ಘೋಷಿತನಾಗಿರುವನೆಂದು ಅಥವಾ ವಂತಿಗೆದಾರನು ಒಂದು ಫರ್ಮ್ ಅಥವಾ ಕಂಪನಿಯಾಗಿರುವಲ್ಲಿ ವಿಘಟಿತವಾಗಿದೆಯೆಂದು, ಪರಿಸಮಾಪನ ಗೊಂಡಿದೆಯೆಂದು ಅಥವಾ ಅನ್ಯಥಾ ಅಸ್ತಿತ್ವದಲ್ಲಿರುವುದು ನಿಂತುಹೋಗಿದೆಯೆಂದು

– ಅಭಿಪ್ರಾಯಪಟ್ಟರೆ ತಾನು ನೀಡಿದ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ಯಾವುದೇ ಕಾಲದಲ್ಲಿ ರದ್ದುಗೊಳಿಸಬಹುದು.

(3) ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ರದ್ದುಗೊಳಿಸುವ ವಿಷಯದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ವಂತಿಗೆದಾರನಿಗೆ ನೀಡಿದ ಹೊರತು ಅದನ್ನು ರದ್ದುಗೊಳಿಸತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ರದ್ದುಪಡಿಸಿದ ಮೇಲೆ ಪ್ರಮಾಣೀಕರಿಸುವ ಪ್ರಾಧಿಕಾರವು ಅದನ್ನು ವಂತಿಗೆದಾರನಿಗೆ ತಿಳಿಸತಕ್ಕದ್ದು.

**39. ಅಮಾನತ್ತಿನ ಅಥವಾ ರದ್ದಿಯಾತಿಯ ನೋಟೀಸು.–** (1) 37ನೇ ಪ್ರಕರಣದ ಅಥವಾ 38ನೇ ಪ್ರಕರಣದ ಮೇರೆಗೆ ಅಂಕಿಚಿಹ್ನೆ ಪ್ರಮಾಣಪತ್ರವನ್ನು ಅಮಾನತುಗೊಳಿಸಿರುವಲ್ಲಿ ಅಥವಾ ರದ್ದುಗೊಳಿಸಿರುವಲ್ಲಿ, ಪ್ರಮಾಣೀಕರಿಸುವ ಪ್ರಾಧಿಕಾರವು, ಅಂತಹ ನೋಟೀಸಿನ ಪ್ರಕಟಣೆಗಾಗಿ ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ನಿರ್ದಿಷ್ಟಪಡಿಸಿ ಭಂಡಾರದಲ್ಲಿ ಅಂಥ ಅಮಾನತು ಅಥವಾ ಸಂದರ್ಭಾನುಸಾರ ರದ್ದಿಯಾತಿಯ ನೋಟೀಸನ್ನು ಪ್ರಕಟಿಸತಕ್ಕದ್ದು.

(2) ಒಂದು ಅಥವಾ ಹೆಚ್ಚಿನ ಭಂಡಾರಗಳನ್ನು ನಿರ್ದಿಷ್ಟಪಡಿಸಿರುವಲ್ಲಿ, ಪ್ರಮಾಣೀಕರಿಸುವ ಪ್ರಾಧಿಕಾರವು, ಅಂಥ ಅಮಾನತು ಅಥವಾ ಸಂದರ್ಭಾನುಸಾರ ರದ್ದಿಯಾತಿಯ ನೋಟೀಸುಗಳನ್ನು ಎಲ್ಲಾ ಅಂತಹ ಭಂಡಾರಗಳಲ್ಲಿ ಪ್ರಕಟಿಸತಕ್ಕದ್ದು.

## ಅಧ್ಯಾಯ – VIII

## ವಂತಿಗೆದಾರರ ಕರ್ತವ್ಯಗಳು

**40. ಜೋಡಿ ಕೀಲಿಗಳನ್ನು ಸೃಜಿಸುವುದು.–** ಯಾವುದೇ ಅಂಕಿ ಚಿಹ್ನೆ ಪ್ರಮಾಣಪತ್ರದ ಸಾರ್ವಜನಿಕ ಕೀಲಿಯು, ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿಗೆ ಸೇರಿಸಬೇಕಾದ ಆ ವಂತಿಗೆದಾರನ ಖಾಸಗಿ ಕೀಲಿಗೆ ಸಂವಾದಿಯಾಗಿದ್ದು, ವಂತಿಗೆದಾರನು ಅದನ್ನು ಒಪ್ಪಿಕೊಂಡಿರುವಲ್ಲಿ, ಆಗ ವಂತಿಗೆದಾರನು ಭದ್ರತಾ ಪ್ರಕ್ರಿಯೆಯನ್ನು ಅನ್ವಯಿಸಿ ಜೋಡಿ ಕೀಲಿಯನ್ನು ಸೃಜಿಸತಕ್ಕದ್ದು.

**41. ಅಂಕಿ ಚಿಹ್ನೆ ಪ್ರಮಾಣಪತ್ರದ ಅಂಗೀಕಾರ.–** (1) ಒಬ್ಬ ವಂತಿಗೆದಾರನು,–

(ಎ) ಒಬ್ಬ ಅಥವಾ ಹೆಚ್ಚಿನ ವ್ಯಕ್ತಿಗಳಿಗೆ;

(ಬಿ) ಒಂದು ಭಂಡಾರದಲ್ಲಿ, ಅಥವಾ

– ಅಂಕಿ ಚಿಹ್ನೆ ಪ್ರಮಾಣಪತ್ರದ ಪ್ರಕಟಣೆಯನ್ನು ಅವನು ಪ್ರಕಟಿಸಿದ್ದರೆ ಅಥವಾ ಪ್ರಕಟಿಸಲು ಅಧಿಕಾರ ನೀಡಿದ್ದರೆ ಅಥವಾ ಅನ್ಯಥಾ ಆ ಅಂಕಿ ಚಿಹ್ನೆ ಪ್ರಮಾಣಪತ್ರಕ್ಕೆ ಯಾವುದೇ ರೀತಿಯಲ್ಲಿ ತನ್ನ ಅನುಮೋದನೆಯನ್ನು ಪ್ರದರ್ಶಿಸಿದ್ದರೆ, ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ಅವನು ಅಂಗೀಕರಿಸಿದ್ದಾನೆಂದು ಭಾವಿಸತಕ್ಕದ್ದು.

(2) ಅಂಕಿಚಿಹ್ನೆ ಪ್ರಮಾಣಪತ್ರವನ್ನು ಅಂಗೀಕರಿಸುವ ಮೂಲಕ ವಂತಿಗೆದಾರನು,–

(ಎ) ವಂತಿಗೆದಾರನು ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿಗೆ ಸೇರಿಸಲಾದ ಸಾರ್ವಜನಿಕ ಕೀಲಿಗೆ ಸಂವಾದಿಯಾಗಿರುವ ಖಾಸಗಿ ಕೀಲಿಯನ್ನು ಧಾರಣ ಮಾಡಿರುವನೆಂದು ಮತ್ತು ಅದನ್ನು ಹಾಗೆ ಧಾರಣ ಮಾಡಲು ಹಕ್ಕುಳ್ಳವನಾಗಿದ್ದಾನೆಂದು;

(ಬಿ) ವಂತಿಗೆದಾರನು ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಮಾಡಿರುವ ಎಲ್ಲ ನಿರೂಪಣೆಗಳು ಮತ್ತು ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿ ಒಳಗೊಂಡ ಮಾಹಿತಿಗೆ ಸುಸಂಬದ್ಧವಾದ ಎಲ್ಲ ವಿಷಯವು ನಿಜವಾದುದೆಂದು;

(ಸಿ) ವಂತಿಗೆದಾರನ ತಿಳಿವಳಿಕೆಗೆ ಬಂದಿರುವ ಅಂಕಿ ಚಿಹ್ನೆ ಪ್ರಮಾಣಪತ್ರದಲ್ಲಿನ ಎಲ್ಲ ಮಾಹಿತಿಯು ನಿಜವಾದುದೆಂದು

– ಅಂಕಿಚಿಹ್ನೆ ಪ್ರಮಾಣಪತ್ರದಲ್ಲಿ ಒಳಗೊಂಡ ಮಾಹಿತಿಯ ಮೇಲೆ ಯುಕ್ತವಾಗಿ ಅವಲಂಬಿಸುವ ಎಲ್ಲರಿಗೂ ಪ್ರಮಾಣೀಕರಿಸಿ ನಿರೂಪಿಸುತ್ತಾನೆ.

**42. ಖಾಸಗಿ ಕೀಲಿಯ ನಿಯಂತ್ರಣ.–** (1) ಪ್ರತಿಯೊಬ್ಬ ವಂತಿಗೆದಾರನು ತನ್ನ ಅಂಕಿಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿಗೆ ಸೇರಿಸಲಾದ ಸಾರ್ವಜನಿಕ ಕೀಲಿಗೆ ಸಂವಾದಿಯಾದ ಖಾಸಗಿ ಕೀಲಿಯ ಮೇಲೆ ನಿಯಂತ್ರಣವನ್ನು ಇಟ್ಟುಕೊಳ್ಳಲು ಯುಕ್ತ ಎಚ್ಚರಿಕೆಯನ್ನು ತೆಗೆದುಕೊಳ್ಳತಕ್ಕದ್ದು ಮತ್ತು ವಂತಿಗೆದಾರನ ಅಂಕಿ ಚಿಹ್ನೆಯನ್ನು ಹಾಕಲು ಅಧಿಕೃತನಲ್ಲದ ವ್ಯಕ್ತಿಗೆ ಬಹಿರಂಗವಾಗುವುದನ್ನು ತಡೆಯಲು ಎಲ್ಲಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(2) ಅಂಕಿಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿಗೆ ಸೇರಿಸಲಾದ ಸಾರ್ವಜನಿಕ ಕೀಲಿಗೆ ಸಂವಾದಿಯಾದ ಖಾಸಗಿ ಕೀಲಿಯನ್ನು ಹೊಂದಾಣಿಕೆ ಮಾಡಿದ್ದರೆ, ಆಗ ವಂತಿಗೆದಾರನು, ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಯಾವುದೇ ವಿಳಂಬವಿಲ್ಲದೆ ಅದನ್ನು ತಿಳಿಸತಕ್ಕದ್ದು.

**ವಿವರಣೆ.–** ವಂತಿಗೆದಾರನು ಖಾಸಗಿ ಕೀಲಿಯು ಹೊಂದಿಕೆಯಾಗುತ್ತದೆಂದು ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ತಿಳಿಸುವ ತನಕ ಅವನೇ ಹೊಣೆಗಾರನಾಗಿರತಕ್ಕದ್ದೆಂದು ಸಂದೇಹ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

## ಅಧ್ಯಾಯ – IX

## ದಂಡನೆಗಳು ಮತ್ತು ನ್ಯಾಯನಿರ್ಣಯ

**43. ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ, ಇತ್ಯಾದಿಗಳಿಗೆ ಹಾನಿಯುಂಟುಮಾಡಿದ್ದಕ್ಕಾಗಿ ದಂಡನೆ.–** (1) ಯಾರೇ ವ್ಯಕ್ತಿಯು, ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲದ ಒಡೆಯನ ಅಥವಾ ಅದರ ಪ್ರಭಾರ ಹೊಂದಿರುವ ಯಾರೇ ಇತರ ವ್ಯಕ್ತಿಯ ಅನುಮತಿಯಿಲ್ಲದೆ,–

(ಎ) ಅಂಥ ಗಣಕಯಂತ್ರಕ್ಕೆ, ಗಣಕಯಂತ್ರ ವ್ಯವಸ್ಥೆಗೆ ಅಥವಾ ಗಣಕಯಂತ್ರ ಜಾಲವನ್ನು ಪ್ರವೇಶಿಸಿದರೆ ಅಥವಾ ಪ್ರವೇಶ ದೊರಕಿಸಿಕೊಂಡರೆ;

(ಬಿ) ತೆಗೆಯಬಹುದಾದ ಯಾವುದೇ ಸಂಗ್ರಹಣಾ ಮಾಧ್ಯಮದಲ್ಲಿ ಇರುವ ಅಥವಾ ಸಂಗ್ರಹಿಸಿರುವ ಮಾಹಿತಿ ಅಥವಾ ದತ್ತಾಂಶವೂ ಒಳಗೊಂಡಂತೆ ಅಂಥ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲದಿಂದ ಯಾವುದೇ ದತ್ತಾಂಶವನ್ನು ಗಣಕಯಂತ್ರ ದತ್ತಾಂಶ ಸಂಗ್ರಹಣವನ್ನು ಅಥವಾ ಮಾಹಿತಿಯ ಭಾರ ಕುಗ್ಗಿಸಿದರೆ, ಪ್ರತಿ ತೆಗೆದರೆ ಅಥವಾ ಉದ್ಧೃತ ಭಾಗಗಳನ್ನು ತೆಗೆದುಕೊಂಡರೆ;

(ಸಿ) ಯಾವುದೇ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲದಲ್ಲಿ ಯಾವುದೇ ಗಣಕಯಂತ್ರ ಕಶ್ಮಲಕಾರಕವನ್ನು ಅಥವಾ ಗಣಕಯಂತ್ರ ಸೋಂಕನ್ನು ಸೇರಿಸಿದರೆ ಅಥವಾ ಸೇರುವಂತೆ ಮಾಡಿದರೆ;

(ಡಿ) ಯಾವುದೇ ಗಣಕಯಂತ್ರವನ್ನು, ಗಣಕಯಂತ್ರ ವ್ಯವಸ್ಥೆಯನ್ನು ಅಥವಾ ಗಣಕಯಂತ್ರ ಜಾಲವನ್ನು, ದತ್ತಾಂಶವನ್ನು, ಗಣಕಯಂತ್ರ ದತ್ತಾಂಶ ಸಂಗ್ರಹವನ್ನು ಅಥವಾ ಅಂಥ ಗಣಕಯಂತ್ರದಲ್ಲಿ, ಗಣಕಯಂತ್ರ ವ್ಯವಸ್ಥೆಯಲ್ಲಿ ಅಥವಾ ಗಣಕಯಂತ್ರ ಜಾಲದಲ್ಲಿರುವ ಯಾವುದೇ ಇತರ ಕಾರ್ಯಸರಣಿಯನ್ನು ಹಾನಿಗೊಳಿಸಿದರೆ ಅಥವಾ ಅದಕ್ಕೆ ಹಾನಿಯಾಗುವಂತೆ ಮಾಡಿದರೆ;

(ಇ) ಯಾವುದೇ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲವನ್ನು ಭಂಗಗೊಳಿಸಿದರೆ ಅಥವಾ ಭಂಗಗೊಳಿಸುವಂತೆ ಮಾಡಿದರೆ;

(ಎಫ್) ಯಾವುದೇ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲಕ್ಕೆ ಪ್ರವೇಶ ಪಡೆಯಲು ಅಧಿಕೃತನಾದ ಯಾರೇ ವ್ಯಕ್ತಿಗೆ ಯಾವುದೇ ಉಪಾಯದಿಂದ ಪ್ರವೇಶವನ್ನು ನಿರಾಕರಿಸಿದರೆ ಅಥವಾ ನಿರಾಕರಿಸುವಂತೆ ಮಾಡಿದರೆ;

(ಜಿ) ಈ ಅಧಿನಿಯಮದ, ಅದರ ಮೇರೆಗೆ ಮಾಡಲಾದ ನಿಯಮಗಳ ಅಥವಾ ವಿನಿಯಮಗಳ ಉಪಬಂಧಗಳನ್ನು ಉಲ್ಲಂಘಿಸಿ, ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲಕ್ಕೆ ಯಾರೇ ವ್ಯಕ್ತಿಯು ಪ್ರವೇಶ ಪಡೆಯಲು ಅನುಕೂಲವಾಗುವ ಹಾಗೆ ಅವನಿಗೆ ನೆರವು ನೀಡಿದರೆ;

(ಹೆಚ್) ಯಾವುದೇ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲದಲ್ಲಿ ಹಸ್ತಕ್ಷೇಪ ಮಾಡಿ, ತಿದ್ದಿ ಅಥವಾ ಕೈವಾಡ ತೋರಿಸುವ ಮೂಲಕ ಒಬ್ಬ ವ್ಯಕ್ತಿಯು ಪಡೆದ ಸೇವೆಗಳ ವೆಚ್ಚವನ್ನು ಇನ್ನೊಬ್ಬ ವ್ಯಕ್ತಿಯ ಲೆಕ್ಕಕ್ಕೆ ತೋರಿಸಿದರೆ

– ಅವನು, ಹಾಗೆ ಬಾಧಿತನಾದ ವ್ಯಕ್ತಿಗೆ ಒಂದು ಕೋಟಿ ರೂಪಾಯಿಗೆ ಮೀರದಷ್ಟು ನಷ್ಟ ಪರಿಹಾರ ರೂಪದಲ್ಲಿ ಪರಿಹಾರ ಧನವನ್ನು ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(i) "ಗಣಕಯಂತ್ರ ಕಶ್ಮಲಕಾರಕ" ಎಂದರೆ,–

(ಎ) ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲದೊಳಗಿರುವ ದತ್ತಾಂಶವನ್ನು ಅಥವಾ ಕಾರ್ಯಕ್ರಮ ಸರಣಿಯನ್ನು ಮಾರ್ಪಾಟುಗೊಳಿಸುವ, ನಾಶಪಡಿಸುವ, ದಾಖಲಿಸುವ, ರವಾನಿಸುವ; ಅಥವಾ

(ಬಿ) ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲದ ಸಾಮಾನ್ಯ ಕಾರ್ಯಾಚರಣೆಯನ್ನು ಯಾವುದೇ ಉಪಾಯದ ಮೂಲಕ ಆಕ್ರಮಿಸಲು ಸಂಚು ಹೊಂದಿರುವ ಗಣಕಯಂತ್ರ ಸೂಚನೆಗಳ ಯಾವುದೇ ಸಮುಚ್ಚಯ;

(ii) "ಗಣಕಯಂತ್ರ ದತ್ತಾಂಶ ಸಂಗ್ರಹ" ಎಂದರೆ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲದಲ್ಲಿ ಔಪಚಾರಿಕ ರೀತಿಯಲ್ಲಿ ತಯಾರಿಸಲಾಗುತ್ತಿರುವ ಅಥವಾ ತಯಾರಿಸಲಾಗಿರುವ ಅಥವಾ ಉತ್ಪಾದಿಸಲಾದ ಮತ್ತು ಗಣಕಯಂತ್ರದಲ್ಲಿ, ಗಣಕಯಂತ್ರ ವ್ಯವಸ್ಥೆಯಲ್ಲಿ ಅಥವಾ ಗಣಕಯಂತ್ರ ಜಾಲದಲ್ಲಿ ಬಳಸಲು ಉದ್ದೇಶಿಸಿರುವ ಪಠ್ಯ, ಬಿಂಬ, ಶ್ರವ್ಯ, ದೃಶ್ಯ ಇವುಗಳಲ್ಲಿನ ಮಾಹಿತಿ, ಜ್ಞಾನ, ಸಂಗತಿಗಳು, ಕಲ್ಪನೆಗಳು ಅಥವಾ ಸೂಚನೆಗಳ ನಿರೂಪಣೆ;

(iii) "ಗಣಕಯಂತ್ರ ಸೋಂಕು" ಎಂದರೆ ಗಣಕಯಂತ್ರ ಸಂಪನ್ಮೂಲದ ಕಾರ್ಯನಿರ್ವಹಣೆಯನ್ನು ನಾಶ ಮಾಡುವ, ಭಂಗಗೊಳಿಸುವ, ಅವನತಿಗೊಳಿಸುವ ಅಥವಾ ಬಾಧಕಗೊಳಿಸುವ ಅಥವಾ ಮತ್ತೊಂದು ಗಣಕಯಂತ್ರ ಸಂಪನ್ಮೂಲದಲ್ಲಿ ಒಂದು ಕಾರ್ಯಸರಣಿ, ದತ್ತಾಂಶ ಅಥವಾ ಸೂಚನೆಯು ಕಾರ್ಯಗತಗೊಳ್ಳುತ್ತಿರುವಾಗ ಅಥವಾ ಯಾವುದೇ ಇತರ ಕೆಲವು ಘಟನೆಗಳು ನಡೆಯುವಾಗ ಆ ಗಣಕಯಂತ್ರ ಸಂಪನ್ಮೂಲದಲ್ಲಿ ಸೇರಿಕೊಂಡು ಕಾರ್ಯಾಚರಣೆ ಮಾಡುವ ಯಾವುದೇ ಗಣಕಯಂತ್ರ ಸೂಚನೆ, ಮಾಹಿತಿ, ದತ್ತಾಂಶ ಅಥವಾ ಕಾರ್ಯಸರಣಿ;

(iv) "ಹಾನಿ" ಎಂದರೆ ಯಾವುದೇ ಸಾಧನದ ಮೂಲಕ ಯಾವುದೇ ಗಣಕಯಂತ್ರ ಸಂಪನ್ಮೂಲವನ್ನು ನಾಶ ಮಾಡುವುದು, ವ್ಯತ್ಯಾಸಗೊಳಿಸುವುದು, ಬಿಟ್ಟುಬಿಡುವುದು, ಸೇರಿಸುವುದು, ಮಾರ್ಪಡಿಸುವುದು ಅಥವಾ ಪುನರ್ ವ್ಯವಸ್ಥೆಗೊಳಿಸುವುದು.

**44. ಮಾಹಿತಿ, ವಿವರಪಟ್ಟಿಕೆ, ಮುಂತಾದವುಗಳನ್ನು ಒದಗಿಸಲು ತಪ್ಪಿದ್ದಕ್ಕಾಗಿ ದಂಡನೆ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಯಾರೇ ವ್ಯಕ್ತಿಯನ್ನು,–

(ಎ) ನಿಯಂತ್ರಕನಿಗೆ ಅಥವಾ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಯಾವುದೇ ದಸ್ತಾವೇಜು, ವಿವರಪಟ್ಟಿಕೆ ಅಥವಾ ವರದಿಯನ್ನು ಒದಗಿಸಲು ಅಗತ್ಯಪಡಿಸಿದ್ದು, ಅದನ್ನು ಒದಗಿಸಲು ಅವನು ತಪ್ಪಿದರೆ, ಅಂಥ ಪ್ರತಿಯೊಂದು ತಪ್ಪಿತಕ್ಕಾಗಿ ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗೆ ಮೀರದ ದಂಡನೆಗೆ ಗುರಿಯಾಗತಕ್ಕದ್ದು;

(ಬಿ) ಯಾವುದೇ ವಿವರಪಟ್ಟಿಕೆಯನ್ನು ದಾಖಲ್ಮಾಡಲು ಅಥವಾ ಯಾವುದೇ ಮಾಹಿತಿ, ಪುಸ್ತಕಗಳು ಅಥವಾ ಇತರ ದಸ್ತಾವೇಜುಗಳನ್ನು ಒದಗಿಸಲು ಅಗತ್ಯಪಡಿಸಿದ್ದು, ವಿನಿಯಮಗಳಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ವಿವರಪಟ್ಟಿಕೆಯನ್ನು ಸಲ್ಲಿಸಲು ಅಥವಾ ಅವುಗಳನ್ನು ಒದಗಿಸಲು ತಪ್ಪಿದರೆ, ಅವನು ಅಂಥ ತಪ್ಪಿತವು ಮುಂದುವರಿದ ಅವಧಿಯ ಪ್ರತಿಯೊಂದು ದಿನಕ್ಕೆ ಐದು ಸಾವಿರ ರೂಪಾಯಿಗೆ ಮೀರದ ದಂಡನೆಗೆ ಗುರಿಯಾಗತಕ್ಕದ್ದು;

(ಸಿ) ಲೆಕ್ಕದ ಪುಸ್ತಕಗಳನ್ನು ಅಥವಾ ದಾಖಲೆಗಳನ್ನು ನಿರ್ವಹಿಸಲು ಅಗತ್ಯಪಡಿಸಲಾಗಿದ್ದು, ಅವುಗಳನ್ನು ನಿರ್ವಹಿಸಲು ತಪ್ಪಿದರೆ ಅಂಥ ತಪ್ಪಿತವು ಮುಂದುವರಿದ ಅವಧಿಯ ಪ್ರತಿಯೊಂದು ದಿನಕ್ಕೆ ಅವನು ಹತ್ತು ಸಾವಿರ ರೂಪಾಯಿಗೆ ಮೀರದ ದಂಡನೆಗೆ ಗುರಿಯಾಗತಕ್ಕದ್ದು.

**45. ಇನ್ನಿತರ ದಂಡನೆ.–** ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವ ನಿಯಮಗಳ ಅಥವಾ ವಿನಿಯಮಗಳ ಉಲ್ಲಂಘನೆಗಾಗಿ ಪ್ರತ್ಯೇಕವಾಗಿ ಯಾವುದೇ ದಂಡನೆಯನ್ನು ಉಪಬಂಧಿಸಿಲ್ಲವೋ ಅಂಥ ಯಾವುವೇ ನಿಯಮಗಳನ್ನು ಅಥವಾ ವಿನಿಯಮಗಳನ್ನು ಯಾರಾದರೂ ಉಲ್ಲಂಘಿಸಿದರೆ, ಅವನು ಅಂಥ ಉಲ್ಲಂಘನೆಯಿಂದ ಬಾಧಿತನಾದ ವ್ಯಕ್ತಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರದಷ್ಟು ನಷ್ಟ ಪರಿಹಾರವನ್ನು ಸಂದಾಯ ಮಾಡಲು ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರದಷ್ಟು ದಂಡನೆಗೆ ಗುರಿಯಾಗಲು ಬದ್ಧನಾಗತಕ್ಕದ್ದು.

**46. ನ್ಯಾಯ ನಿರ್ಣಯದ ಅಧಿಕಾರ.–** (1) ಈ ಅಧ್ಯಾಯದ ಮೇರೆಗೆ ನ್ಯಾಯನಿರ್ಣಯದ ಉದ್ದೇಶಗಳಿಗಾಗಿ, ಯಾರೇ ವ್ಯಕ್ತಿಯು ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮ, ವಿನಿಯಮ, ನಿರ್ದೇಶನ ಅಥವಾ ಆದೇಶದ ಉಪಬಂಧಗಳ ಪೈಕಿ ಯಾವುದೇ ಉಪಬಂಧದ ಉಲ್ಲಂಘನೆಯನ್ನು ಮಾಡಿರುವನೇ ಹೇಗೆ ಎಂಬುದನ್ನು ಈ ಅಧ್ಯಾಯದ ಮೇರೆಗೆ ನ್ಯಾಯ ನಿರ್ಣಯ ಮಾಡುವ ಉದ್ದೇಶಕ್ಕಾಗಿ ಕೇಂದ್ರ ಸರ್ಕಾರವು (3)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, ಭಾರತ ಸರ್ಕಾರದ ನಿರ್ದೇಶಕರ ದರ್ಜೆಗೆ ಕಡಿಮೆಯಿರದ ದರ್ಜೆಯ ಯಾರೇ ಅಧಿಕಾರಿಯನ್ನು ಅಥವಾ ರಾಜ್ಯ ಸರ್ಕಾರದ ಸಮಾನ ದರ್ಜೆಯ ಅಧಿಕಾರಿಯನ್ನು, ಕೇಂದ್ರ ಸರ್ಕಾರವು ಗೊತ್ತುಪಡಿಸಿದ ರೀತಿಯಲ್ಲಿ ವಿಚಾರಣೆಯನ್ನು ನಡೆಸಲು ನ್ಯಾಯನಿರ್ಣಯ ಅಧಿಕಾರಿಯನ್ನಾಗಿ ನೇಮಕ ಮಾಡತಕ್ಕದ್ದು.

(2) ನ್ಯಾಯ ನಿರ್ಣಯ ಅಧಿಕಾರಿಯು, (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದಂಥ ವ್ಯಕ್ತಿಗೆ, ಆ ವಿಷಯದಲ್ಲಿ ನಿವೇದನೆಯನ್ನು ಮಾಡಿಕೊಳ್ಳುವುದಕ್ಕೆ ಸೂಕ್ತ ಅವಕಾಶವನ್ನು ನೀಡಿದ ತರುವಾಯ ಮತ್ತು ಅಂಥ ವಿಚಾರಣೆ ನಡೆಸಿದ ಮೇಲೆ ಆ ವ್ಯಕ್ತಿಯು ಉಲ್ಲಂಘನೆಯನ್ನು ಮಾಡಿದ್ದಾನೆಂದು ಅವನಿಗೆ ಮನದಟ್ಟಾದರೆ, ಅವನು ಆ ಪ್ರಕರಣದ ಉಪಬಂಧ ಗಳಿಗನುಸಾರವಾಗಿ ತಾನು ಸೂಕ್ತವೆಂದು ಭಾವಿಸುವಂಥ ದಂಡನೆಯನ್ನು ವಿಧಿಸಬಹುದು ಅಥವಾ ನಷ್ಟ ಪರಿಹಾರದ ಐತೀರ್ಪು ಮಾಡಬಹುದು.

(3) ಯಾರೇ ವ್ಯಕ್ತಿಯು, ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಅನುಭವವನ್ನು ಮತ್ತು ಕಾನೂನು ಅಥವಾ ನ್ಯಾಯಿಕ ಅನುಭವವನ್ನು ಹೊಂದಿರುವ ಹೊರತು, ಅವನನ್ನು ನ್ಯಾಯನಿರ್ಣಯ ಅಧಿಕಾರಿಯಾಗಿ ನೇಮಕ ಮಾಡತಕ್ಕದ್ದಲ್ಲ.

(4) ಒಬ್ಬರಿಗಿಂತ ಹೆಚ್ಚಿನ ನ್ಯಾಯ ನಿರ್ಣಯ ಅಧಿಕಾರಿಗಳನ್ನು ನೇಮಕ ಮಾಡಿರುವಲ್ಲಿ ಕೇಂದ್ರ ಸರ್ಕಾರವು, ಆದೇಶದ ಮೂಲಕ, ಅಂಥ ಅಧಿಕಾರಿಗಳ ಸಂಬಂಧದಲ್ಲಿ ತಮ್ಮ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸತಕ್ಕ ವಿಷಯಗಳು ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸತಕ್ಕದ್ದು.

(5) ಪ್ರತಿಯೊಬ್ಬ ನ್ಯಾಯನಿರ್ಣಯ ಅಧಿಕಾರಿಯು, 58ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸೈಬರ್ ಅಪೀಲು ನ್ಯಾಯಾಧಿಕರಣಕ್ಕೆ ಪ್ರದಾನಮಾಡಿರುವ ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು, ಮತ್ತು,–

(ಎ) ಅವನ ಮುಂದಿರುವ ಎಲ್ಲಾ ವ್ಯವಹರಣೆಗಳನ್ನು ಭಾರತ ದಂಡ ಸಂಹಿತೆಯ (1860ರ 45) 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ ನ್ಯಾಯಿಕ ವ್ಯವಹರಣೆಗಳೆಂದು ಭಾವಿಸತಕ್ಕದ್ದು;

(ಬಿ) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ 345 ಮತ್ತು 346ನೇ ಪ್ರಕರಣಗಳ ಉದ್ದೇಶಗಳಿಗಾಗಿ ಅವನು ಒಂದು ಸಿವಿಲ್ ನ್ಯಾಯಾಲಯವಾಗಿರುವುದಾಗಿ ಭಾವಿಸತಕ್ಕದ್ದು.

**47. ನ್ಯಾಯ ನಿರ್ಣಯ ಅಧಿಕಾರಿಯು ಗಣನೆಗೆ ತೆಗೆದುಕೊಳ್ಳಬೇಕಾದ ಅಂಶಗಳು.–** ಈ ಅಧ್ಯಾಯದ ಮೇರೆಗೆ ನಷ್ಟ ಪರಿಹಾರದ ಪರಿಮಾಣವನ್ನು ನಿರ್ಣಯಿಸುವಾಗ, ನ್ಯಾಯ ನಿರ್ಣಯ ಅಧಿಕಾರಿಯು ಈ ಮುಂದಿನ ಅಂಶಗಳಿಗೆ ಯುಕ್ತ ಗಮನವನ್ನು ಕೊಡತಕ್ಕದ್ದು, ಎಂದರೆ:–

(ಎ) ಪರಿಮಾಣಾತ್ಮಕವಾಗಿ ಹೇಳಲು ಸಾಧ್ಯವಿದ್ದಲ್ಲಿ, ತಪ್ಪಿತದ ಪರಿಣಾಮವಾಗಿ ನ್ಯಾಯವಲ್ಲದ ಅನುಕೂಲದ ಮೂಲಕ ದೊರೆತ ಮೊತ್ತ;

(ಬಿ) ತಪ್ಪಿತದ ಪರಿಣಾಮವಾಗಿ ಯಾರೇ ವ್ಯಕ್ತಿಗೆ ಉಂಟಾದ ನಷ್ಟದ ಮೊತ್ತ;

(ಸಿ) ತಪ್ಪಿತದ ಪುನರಾವರ್ತನೆಯಾಗುವ ಸ್ವರೂಪ.

## ಅಧ್ಯಾಯ – X

## ಸೈಬರ್ ನಿಯಂತ್ರಣ ಅಪೀಲು ನ್ಯಾಯಾಧಿಕರಣ

**48. ಸೈಬರ್ ಅಪೀಲು ನ್ಯಾಯಾಧಿಕರಣದ ಸ್ಥಾಪನೆ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಸೈಬರ್ ನಿಯಂತ್ರಣ ಅಪೀಲು ಪ್ರಾಧಿಕಾರವೆಂದು ಕರೆಯಲಾಗುವ ಒಂದು ಅಥವಾ ಹೆಚ್ಚಿನ ಅಪೀಲು ನ್ಯಾಯಾಧಿಕರಣಗಳನ್ನು ಸ್ಥಾಪಿಸತಕ್ಕದ್ದು.

(2) ಕೇಂದ್ರ ಸರ್ಕಾರವು (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿರುವ ಅಧಿಸೂಚನೆಯಲ್ಲಿ, ಸೈಬರ್ ಅಪೀಲು ನ್ಯಾಯಾಧಿಕರಣವು ಚಲಾಯಿಸಬಹುದಾದ ಅಧಿಕಾರ ವ್ಯಾಪ್ತಿಯ ಸಂಬಂಧದ ವಿಷಯಗಳನ್ನು ಮತ್ತು ಸ್ಥಳಗಳನ್ನು ಸಹ ನಿರ್ದಿಷ್ಟಪಡಿಸತಕ್ಕದ್ದು.

**49. ಸೈಬರ್ ಅಪೀಲು ನ್ಯಾಯಾಧಿಕರಣದ ರಚನೆ.–** ಸೈಬರ್ ಅಪೀಲು ನ್ಯಾಯಾಧಿಕರಣವು, ಕೇಂದ್ರಸರ್ಕಾರವು, ಅಧಿಸೂಚನೆಯ ಮೂಲಕ ನೇಮಕ ಮಾಡಬೇಕಾದ ಮತ್ತು ಇಲ್ಲಿ ಇನ್ನು ಮುಂದೆ ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯೆಂದು ಉಲ್ಲೇಖಿಸಲಾಗುವ ಒಬ್ಬನೇ ಒಬ್ಬ ವ್ಯಕ್ತಿಯನ್ನು ಮಾತ್ರ ಒಳಗೊಂಡಿರತಕ್ಕದ್ದು.

**50. ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯಾಗಿ ನೇಮಕಗೊಳ್ಳುವುದಕ್ಕೆ ಇರಬೇಕಾದ ಅರ್ಹತೆಗಳು.–** ಒಬ್ಬ ವ್ಯಕ್ತಿಯು,–

(ಎ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಅಥವಾ ನ್ಯಾಯಾಧೀಶನಾಗಲು ಅರ್ಹತೆ ಹೊಂದಿರುವ; ಅಥವಾ

(ಬಿ) ಭಾರತೀಯ ಕಾನೂನು ಸೇವೆಯ ಸದಸ್ಯನಾಗಿರುವ ಅಥವಾ ಸದಸ್ಯನಾಗಿದ್ದ ಮತ್ತು ಆ ಸೇವೆಯಲ್ಲಿ ಕನಿಷ್ಠ ಮೂರು ವರ್ಷ ಪ್ರಥಮ ದರ್ಜೆಯ ಹುದ್ದೆಯನ್ನು ಹೊಂದಿರುವ ಅಥವಾ ಹೊಂದಿದ್ದ

– ಹೊರತು ಅವನು ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯಾಗಿ ನೇಮಕಗೊಳ್ಳುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ.

**51. ಪದಾವಧಿ.–** ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯು, ತಾನು ಪದವನ್ನು ವಹಿಸಿಕೊಂಡ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಅರವತ್ತೈದು ವರ್ಷ ವಯಸ್ಸಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಪದಧಾರಣ ಮಾಡಿರತಕ್ಕದ್ದು.

**52. ಅಧ್ಯಕ್ಷಾಧಿಕಾರಿಯ ಸಂಬಳ, ಭತ್ಯೆಗಳು ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳು.–** ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಗೆ ಸಂದಾಯ ಮಾಡಬೇಕಾದ ಸಂಬಳ ಮತ್ತು ಭತ್ಯೆಗಳು ಮತ್ತು ಪಿಂಚಣಿ, ಉಪದಾನ ಮತ್ತು ಇತರ ನಿವೃತ್ತಿ ಪ್ರಯೋಜನಗಳನ್ನು ಒಳಗೊಂಡಂತೆ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು:

ಪರಂತು, ಅಧ್ಯಕ್ಷಾಧಿಕಾರಿಯ ಸಂಬಳ ಮತ್ತು ಭತ್ಯೆಗಳಾಗಲಿ ಮತ್ತು ಸೇವೆಯ ಇತರ ನಿಬಂಧನೆಗಳು ಮತ್ತು ಷರತ್ತುಗಳಾಗಲಿ ನೇಮಕದ ನಂತರ ಆತನಿಗೆ ಅನಾನುಕೂಲವಾಗುವ ಹಾಗೆ ಅವುಗಳನ್ನು ವ್ಯತ್ಯಸ್ಥಗೊಳಿಸತಕ್ಕದ್ದಲ್ಲ.

**53. ಖಾಲಿ ಸ್ಥಾನಗಳ ಭರ್ತಿ.–** ತಾತ್ಕಾಲಿಕ ಗೈರು ಹಾಜರಿಯ ಹೊರತಾದ ಇತರ ಕಾರಣಕ್ಕಾಗಿ, ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯ ಪದವು ಖಾಲಿಯಾದರೆ, ಆಗ ಕೇಂದ್ರ ಸರ್ಕಾರವು ಅದನ್ನು ಭರ್ತಿ ಮಾಡುವುದಕ್ಕೆ ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮತ್ತೊಬ್ಬ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು ಮತ್ತು ಖಾಲಿ ಸ್ಥಾನವನ್ನು ಭರ್ತಿ ಮಾಡಿದ ಹಂತದಿಂದ ಸೈಬರ್ ಅಪೀಲು ನ್ಯಾಯಾಧಿಕರಣದ ಮುಂದೆ ಇತ್ಯರ್ಥದಲ್ಲಿ ಇದ್ದ ವ್ಯವಹರಣೆಗಳನ್ನು ಮುಂದುವರೆಸಬಹುದು.

**54. ರಾಜೀನಾಮೆ ಮತ್ತು ತೆಗೆದುಹಾಕುವುದು.–** (1) ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯು, ಕೇಂದ್ರ ಸರ್ಕಾರಕ್ಕೆ ತನ್ನ ಹಸ್ತಾಕ್ಷರದಲ್ಲಿ ಬರೆದ ನೋಟೀಸಿನ ಮೂಲಕ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು:

ಪರಂತು, ಸದರಿ ಅಧ್ಯಕ್ಷಾಧಿಕಾರಿಯು, ಕೇಂದ್ರ ಸರ್ಕಾರವು ಆತನ ಪದವನ್ನು ಬೇಗ ಬಿಟ್ಟುಕೊಡುವುದಕ್ಕೆ ಆತನಿಗೆ ಅನುಮತಿಸಿದ ಹೊರತು, ಅಂತಹ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿ ಮುಕ್ತಾಯದವರೆಗೆ ಅಥವಾ ಕ್ರಮಬದ್ಧವಾಗಿ ಅವನ ಉತ್ತರಾಧಿಕಾರಿಯಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯು ತನ್ನ ಪದವನ್ನು ವಹಿಸಿಕೊಳ್ಳುವವರೆಗೆ ಅಥವಾ ಅವನ ಪದಾವಧಿಯ ಮುಕ್ತಾಯದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ತನ್ನ ಪದದಲ್ಲಿ ಮುಂದುವರಿಯತಕ್ಕದ್ದು.

(2) ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ವಿಚಾರಣೆ ನಡೆಸಿ ಆ ಕುರಿತು ಅಧ್ಯಕ್ಷಾಧಿಕಾರಿಯ ವಿರುದ್ಧ ಮಾಡಲಾದ ಆರೋಪಗಳನ್ನು ಅವನಿಗೆ ತಿಳಿಸಿದ್ದು, ಆ ಆರೋಪಗಳ ಸಂಬಂಧದಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಒಂದು ಸೂಕ್ತ ಅವಕಾಶ ನೀಡಿದ ನಂತರ ರುಜುವಾತಾದ ದುರ್ವರ್ತನೆಯ ಅಥವಾ ಅಸಮರ್ಥತೆಯ ಕಾರಣದ ಮೇಲೆ ಕೇಂದ್ರ ಸರ್ಕಾರದ ಒಂದು ಆದೇಶದ ಮೂಲಕ ಹೊರತು ಅವನನ್ನು ಪದದಿಂದ ತೆಗೆದುಹಾಕತಕ್ಕದ್ದಲ್ಲ.

(3) ಕೇಂದ್ರ ಸರ್ಕಾರವು, ಮೇಲೆ ಹೇಳಿದ ಅಧ್ಯಕ್ಷಾಧಿಕಾರಿಯ ದುರ್ನಡತೆ ಅಥವಾ ಅಸಮರ್ಥತೆಯ ತನಿಖೆ ನಡೆಸುವ ಪ್ರಕ್ರಿಯೆಯನ್ನು ನಿಯಮಗಳ ಮೂಲಕ ವಿನಿಯಮಿಸಬಹುದು.

**55. ಅಪೀಲು ನ್ಯಾಯಾಧಿಕರಣವನ್ನು ರಚಿಸುವ ಆದೇಶಗಳು ಅಂತಿಮವಾಗಿರುವುದು ಮತ್ತು ಅದರ ವ್ಯವಹರಣೆಗಳನ್ನು ಅಸಿಂಧುಗೊಳಿಸದಿರುವುದು.–** ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯಾಗಿ ಕೇಂದ್ರ ಸರ್ಕಾರವು ಯಾರೇ ವ್ಯಕ್ತಿಯನ್ನು ನೇಮಕ ಮಾಡುವ ಆದೇಶವನ್ನು ಯಾವುದೇ ರೀತಿಯಲ್ಲಿ ಪ್ರಶ್ನಿಸತಕ್ಕದ್ದಲ್ಲ ಮತ್ತು ಸೈಬರ್ ಅಪೀಲು ನ್ಯಾಯಾಧಿಕರಣದ ಮುಂದಿರುವ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ಸೈಬರ್ ಅಪೀಲು ನ್ಯಾಯಾಧಿಕರಣದ ರಚನೆಯಲ್ಲಿ ಯಾವುದೇ ದೋಷವಿರುವುದೆಂಬ ಕಾರಣಮಾತ್ರದಿಂದಲೇ ಯಾವುದೇ ರೀತಿಯಲ್ಲಿ ಪ್ರಶ್ನಿಸತಕ್ಕದ್ದಲ್ಲ.

**56. ಸೈಬರ್ ಅಪೀಲು ನ್ಯಾಯಾಧಿಕರಣದ ಸಿಬ್ಬಂದಿ.–** (1) ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಂತಹ ಅಧಿಕಾರಿಗಳನ್ನು ಮತ್ತು ನೌಕರರನ್ನು ಸೈಬರ್ ಅಪೀಲು ನ್ಯಾಯಾಧಿಕರಣಕ್ಕೆ ಒದಗಿಸತಕ್ಕದ್ದು.

(2) ಸೈಬರ್ ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳು ಮತ್ತು ನೌಕರರು ಅಧ್ಯಕ್ಷಾಧಿಕಾರಿಯ ಸಾಮಾನ್ಯ ಅಧೀಕ್ಷಣೆಯಲ್ಲಿ ತಮ್ಮ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(3) ಸೈಬರ್ ಅಪೀಲು ನ್ಯಾಯಾಧಿಕರಣದ ಅಧಿಕಾರಿಗಳ ಮತ್ತು ನೌಕರರ ಸಂಬಳಗಳು, ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂತೆ ಇರತಕ್ಕದ್ದು.

**57. ಸೈಬರ್ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲು.–** (1) (2)ನೇ ಉಪಪ್ರಕರಣದಲ್ಲಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಮೇರೆಗೆ ನಿಯಂತ್ರಕನು ಅಥವಾ ನ್ಯಾಯನಿರ್ಣಯ ಅಧಿಕಾರಿಯು ಮಾಡಿದ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆ ವಿಷಯದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸೈಬರ್ ಅಪೀಲು ನ್ಯಾಯಾಧಿಕರಣಕ್ಕೆ ಅಪೀಲನ್ನು ಮಾಡಬಹುದು.

(2) ಪಕ್ಷಕಾರರ ಅನುಮತಿಯಿಂದ ನ್ಯಾಯ ನಿರ್ಣಯ ಅಧಿಕಾರಿಯು ಮಾಡಿದ ಆದೇಶದ ವಿರುದ್ಧ ಸೈಬರ್ ಅಪೀಲು ನ್ಯಾಯಾಧಿಕರಣಕ್ಕೆ ಯಾವುದೇ ಅಪೀಲು ಮಾಡಲು ಅವಕಾಶವಿರತಕ್ಕದ್ದಲ್ಲ.

(3) (1)ನೇ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ಅಪೀಲನ್ನು ನಿಯಂತ್ರಕನು ಅಥವಾ ನ್ಯಾಯನಿರ್ಣಯ ಅಧಿಕಾರಿಯು ಮಾಡಿದ ಆದೇಶದ ಪ್ರತಿಯನ್ನು, ಬಾಧಿತನಾದ ವ್ಯಕ್ತಿಯು ಸ್ವೀಕರಿಸಿದ ದಿನಾಂಕದಿಂದ ನಲವತ್ತೈದು ದಿನಗಳ ಅವಧಿಯೊಳಗೆ ದಾಖಲ್ಮಾಡತಕ್ಕದ್ದು ಮತ್ತು ಅದು ಗೊತ್ತುಪಡಿಸಬಹುದಾದಂತಹ ನಮೂನೆಯಲ್ಲಿರತಕ್ಕದ್ದು ಮತ್ತು ಗೊತ್ತುಪಡಿಸಬಹುದಾದ ಫೀಜನ್ನು ಸಂದಾಯ ಮಾಡತಕ್ಕದ್ದು:

ಪರಂತು, ಸದರಿ ನಲವತ್ತೈದು ದಿನಗಳ ಅವಧಿಯೊಳಗೆ ಅಪೀಲು ದಾಖಲಿಸದಿರುವುದಕ್ಕೆ ಸಾಕಷ್ಟು ಕಾರಣವಿತ್ತೆಂದು ಸೈಬರ್ ಅಪೀಲು ನ್ಯಾಯಾಧಿಕರಣವು ಮನಗಂಡರೆ ಆ ಅವಧಿಯ ಮುಕ್ತಾಯದ ನಂತರವೂ ಅಪೀಲನ್ನು ಸ್ವೀಕರಿಸಬಹುದು.

(4) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಅಪೀಲನ್ನು ಸ್ವೀಕರಿಸಿದ ಮೇಲೆ, ಸೈಬರ್ ಅಪೀಲು ನ್ಯಾಯಾಧಿಕರಣವು, ಅಪೀಲಿನ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡಿದ ನಂತರ, ಯಾವ ಆದೇಶದ ವಿರುದ್ಧ ಅಪೀಲು ಮಾಡಲಾಗಿದೆಯೋ ಆ ಆದೇಶವನ್ನು ತಾನು ಸೂಕ್ತವೆಂದು ಭಾವಿಸಬಹುದಾದಂತೆ, ಸ್ಥಿರೀಕರಿಸುವ, ಮಾರ್ಪಡಿಸುವ ಅಥವಾ ತಳ್ಳಿಹಾಕುವ ಆದೇಶವನ್ನು ಮಾಡಬಹುದು.

(5) ಸೈಬರ್ ಅಪೀಲು ನ್ಯಾಯಾಧಿಕರಣವು, ತಾನು ಮಾಡಿದ ಪ್ರತಿಯೊಂದು ಆದೇಶದ ಪ್ರತಿಯನ್ನು ಅಪೀಲಿನ ಪಕ್ಷಕಾರರಿಗೆ ಮತ್ತು ಸಂಬಂಧಿಸಿದ ನಿಯಂತ್ರಕನಿಗೆ ಅಥವಾ ನ್ಯಾಯನಿರ್ಣಯ ಅಧಿಕಾರಿಗೆ ಕಳುಹಿಸತಕ್ಕದ್ದು.

(6) (1)ನೇ ಉಪಪ್ರಕರಣದ ಮೇರೆಗೆ ಸೈಬರ್ ಅಪೀಲು ನ್ಯಾಯಾಧಿಕರಣದ ಮುಂದೆ ದಾಖಲ್ಮಾಡಿದ ಅಪೀಲಿನ ಬಗ್ಗೆ ಸಾಧ್ಯವಾದಷ್ಟು ಶೀಘ್ರವಾಗಿ ವ್ಯವಹರಿಸತಕ್ಕದ್ದು ಮತ್ತು ಅಪೀಲಿನ ಸ್ವೀಕೃತಿಯ ದಿನಾಂಕದಿಂದ ಆರು ತಿಂಗಳೊಳಗಾಗಿ ಅಪೀಲನ್ನು ಅಂತಿಮವಾಗಿ ವಿಲೇ ಮಾಡುವುದಕ್ಕೆ ಅದು ಪ್ರಯತ್ನಿಸತಕ್ಕದ್ದು.

**58. ಸೈಬರ್ ಅಪೀಲು ನ್ಯಾಯಾಧಿಕರಣದ ಕಾರ್ಯವಿಧಾನ ಮತ್ತು ಅಧಿಕಾರಗಳು.–** (1) ಸೈಬರ್ ಅಪೀಲು ನ್ಯಾಯಾಧಿಕರಣವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5) ರಲ್ಲಿ ನಿರೂಪಿಸಲಾದ ಕಾರ್ಯವಿಧಾನಕ್ಕೆ ಬದ್ಧವಾಗಿರತಕ್ಕದ್ದಲ್ಲ, ಆದರೆ ಸಹಜ ನ್ಯಾಯದ ತತ್ವಗಳ ಮಾರ್ಗದರ್ಶನ ಪಡೆಯತಕ್ಕದ್ದು ಮತ್ತು ಈ ಅಧಿನಿಯಮದ ಮತ್ತು ಯಾವುವೇ ಇತರ ಉಪಬಂಧಗಳಿಗೆ, ನಿಯಮಗಳಿಗೆ ಒಳಪಟ್ಟು, ಸೈಬರ್ ಅಪೀಲು ನ್ಯಾಯಾಧಿಕರಣವು ಅದರ ಉಪವೇಶನಗಳನ್ನು ನಡೆಸತಕ್ಕ ಸ್ಥಳವೂ ಸೇರಿದಂತೆ ಸ್ವಂತದ ಪ್ರಕ್ರಿಯೆಯನ್ನು ವಿನಿಯಮಿಸುವ ಅಧಿಕಾರಗಳನ್ನು ಹೊಂದಿರತಕ್ಕದ್ದು.

(2) ಸೈಬರ್ ಅಪೀಲು ನ್ಯಾಯಾಧಿಕರಣವು, ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂತಹುದೇ ಅಧಿಕಾರಗಳನ್ನು, ಈ ಅಧಿನಿಯಮದ ಮೇರೆಗೆ ತನ್ನ ಪ್ರಕಾರ್ಯಗಳನ್ನು ನಿರ್ವಹಿಸುವ ಉದ್ದೇಶಗಳಿಗಾಗಿ ಹೊಂದಿರತಕ್ಕದ್ದು, ಅವು ಯಾವುವೆಂದರೆ,–

(ಎ) ಯಾರೇ ವ್ಯಕ್ತಿಗೆ ಹಾಜರಾಗುವಂತೆ ಆಜ್ಞೆ ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಿಸುವುದು ಹಾಗೂ ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಅಥವಾ ಇತರ ವಿದ್ಯುನ್ಮಾನ ದಾಖಲೆಗಳನ್ನು ಶೋಧಿಸಿ ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಶಪಥ ಪತ್ರದ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸಲು ಕಾರ್ಯಾಜ್ಞೆಗಳನ್ನು ಹೊರಡಿಸುವುದು;

(ಇ) ತನ್ನ ತೀರ್ಮಾನಗಳನ್ನು ಪುನರವಲೋಕಿಸುವುದು;

(ಎಫ್) ತಪ್ಪಿತಕ್ಕಾಗಿ ಅರ್ಜಿಯನ್ನು ವಜಾ ಮಾಡುವುದು ಅಥವಾ ಅದನ್ನು ಏಕಪಕ್ಷೀಯವಾಗಿ ತೀರ್ಮಾನಿಸುವುದು;

(ಜಿ) ಗೊತ್ತುಪಡಿಸಬಹುದಾದಂಥ ಯಾವುದೇ ಇತರ ವಿಷಯ.

(3) ಸೈಬರ್ ಅಪೀಲು ಪ್ರಾಧಿಕಾರದ ಮುಂದಿರುವ ಪ್ರತಿಯೊಂದು ವ್ಯವಹರಣೆಯನ್ನು, ಭಾರತ ದಂಡ ಸಂಹಿತೆ, 1860 (1860ರ 45)ರ 193 ಮತ್ತು 228ನೇ ಪ್ರಕರಣಗಳ ಅರ್ಥ ವ್ಯಾಪ್ತಿಯೊಳಗೆ ಮತ್ತು 196ನೇ ಪ್ರಕರಣದ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು ಮತ್ತು ಸೈಬರ್ ಅಪೀಲು ನ್ಯಾಯಾಧಿಕರಣವನ್ನು ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ (1974ರ 2) 195ನೇ ಪ್ರಕರಣದ ಮತ್ತು ಅಧ್ಯಾಯ XXVIರ ಉದ್ದೇಶಗಳಿಗಾಗಿ ಒಂದು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

**59. ಕಾನೂನುಸಮ್ಮತ ಪ್ರಾತಿನಿಧ್ಯದ ಹಕ್ಕು.–** ಅಪೀಲುದಾರನು, ಸೈಬರ್ ಅಪೀಲು ನ್ಯಾಯಾಧಿಕರಣದ ಮುಂದೆ ಇರುವ ತನ್ನ ಅಥವಾ ಅದರ ಮೊಕದ್ದಮೆಯನ್ನು ಮಂಡಿಸಲು ತಾನೇ ಖುದ್ದಾಗಿ ಹಾಜರಾಗಬಹುದು ಅಥವಾ ಒಬ್ಬರು ಅಥವಾ ಹೆಚ್ಚು ಜನ ನ್ಯಾಯವಾದಿಗಳನ್ನು ಅಥವಾ ಅದರ ಅಧಿಕಾರಿಗಳಲ್ಲಿ ಯಾರೇ ಅಧಿಕಾರಿಯನ್ನು ಅಧಿಕೃತಗೊಳಿಸಬಹುದು.

**60. ಕಾಲಪರಿಮಿತಿ.–** ಕಾಲಪರಿಮಿತಿ ಅಧಿನಿಯಮ, 1963ರ (1963ರ 36) ಉಪಬಂಧಗಳನ್ನು ಸಾಧ್ಯವಾಗಬಹುದಾದಷ್ಟು ಮಟ್ಟಿಗೆ ಸೈಬರ್ ಅಪೀಲು ನ್ಯಾಯಾಧಿಕರಣಕ್ಕೆ ಮಾಡುವ ಅಪೀಲಿಗೆ ಅನ್ವಯಿಸತಕ್ಕದ್ದು.

**61. ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿಯು ಇಲ್ಲದಿರುವುದು.–** ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ನೇಮಕಗೊಂಡ ನ್ಯಾಯ ನಿರ್ಣಯ ಅಧಿಕಾರಿಯು ಅಥವಾ ಈ ಅಧಿನಿಯಮದ ಮೇರೆಗೆ ರಚಿತವಾದ ಸೈಬರ್ ಅಪೀಲು ನ್ಯಾಯಾಧಿಕರಣವು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ನಿರ್ಧರಿಸಲು ಅಧಿಕಾರ

ಹೊಂದಿರುವಂಥ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ದಾವೆಯನ್ನು ಅಥವಾ ವ್ಯವಹರಣೆಯನ್ನು ಸ್ವೀಕರಿಸಲು ಅಧಿಕಾರ ವ್ಯಾಪ್ತಿ ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರಕ್ಕನುಸಾರ ತೆಗೆದುಕೊಂಡ ಅಥವಾ ತೆಗೆದುಕೊಳ್ಳಬೇಕಾದ ಯಾವುದೇ ಕ್ರಮದ ಸಂಬಂಧದಲ್ಲಿ ಯಾವುದೇ ನ್ಯಾಯಾಲಯವಾಗಲಿ ಅಥವಾ ಇತರ ಪ್ರಾಧಿಕಾರವಾಗಲಿ ಯಾವುದೇ ನಿರ್ಬಂಧಕಾಜ್ಞೆ ನೀಡತಕ್ಕದ್ದಲ್ಲ.

**62. ಉಚ್ಚ ನ್ಯಾಯಾಲಯಕ್ಕೆ ಅಪೀಲು.–** ಸೈಬರ್ ಅಪೀಲು ನ್ಯಾಯಾಧಿಕರಣದ ಯಾವುದೇ ತೀರ್ಮಾನ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು ಅವನಿಗೆ ಸೈಬರ್ ಅಪೀಲು ನ್ಯಾಯಾಧಿಕರಣದ ತೀರ್ಮಾನವನ್ನು ಅಥವಾ ಆದೇಶವನ್ನು ತಿಳಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗಾಗಿ ಅಂತಹ ಆದೇಶದಿಂದ ಉದ್ಭವಿಸಿದ ಸಂಗತಿಯ ಅಥವಾ ಕಾನೂನಿನ ಯಾವುದೇ ಪ್ರಶ್ನೆಯ ಬಗ್ಗೆ ಉಚ್ಚ ನ್ಯಾಯಾಲಯಕ್ಕೆ ಅಪೀಲನ್ನು ಸಲ್ಲಿಸಬಹುದು:

ಪರಂತು, ಉಚ್ಚ ನ್ಯಾಯಾಲಯವು, ಅಪೀಲುದಾರನಿಗೆ ಸದರಿ ಅವಧಿಯೊಳಗೆ ಅಪೀಲನ್ನು ಸಲ್ಲಿಸದಂತೆ ತಡವಾಗಲು ಸಾಕಷ್ಟು ಕಾರಣವಿತ್ತೆಂದು ಮನಗಂಡರೆ, ಅರವತ್ತು ದಿನಗಳಿಗೆ ಹೆಚ್ಚಾಗದ ಇನ್ನಷ್ಟು ಅವಧಿಯೊಳಗೆ ಅದನ್ನು ದಾಖಲು ಮಾಡುವುದಕ್ಕೆ ಅವಕಾಶ ನೀಡಬಹುದು.

**63. ಉಲ್ಲಂಘನೆಗಳನ್ನು ರಾಜೀ ಮಾಡಿಕೊಳ್ಳುವುದು.–** (1) ಈ ಅಧ್ಯಾಯದ ಮೇರೆಗಿನ ಯಾವುದೇ ಉಲ್ಲಂಘನೆಯನ್ನು ನ್ಯಾಯನಿರ್ಣಯ ವ್ಯವಹರಣೆಗಳನ್ನು ಹೂಡುವುದಕ್ಕೆ ಮುಂಚೆಯಾಗಲಿ ಅಥವಾ ಆ ತರುವಾಯವಾಗಲಿ, ಸಂದರ್ಭಾನುಸಾರ ನಿಯಂತ್ರಕನು ಅಥವಾ ಈ ಸಂಬಂಧದಲ್ಲಿ ಅವನಿಂದ ಅಥವಾ ನ್ಯಾಯ ನಿರ್ಣಯ ಅಧಿಕಾರಿಯಿಂದ ವಿಶೇಷವಾಗಿ ಅಧಿಕೃತನಾಗಬಹುದಾದಂಥ ಇತರ ಅಧಿಕಾರಿಯು, ನಿಯಂತ್ರಕನು ಅಥವಾ ಅಂಥ ಇತರ ಅಧಿಕಾರಿಯು ಅಥವಾ ನ್ಯಾಯ ನಿರ್ಣಯ ಅಧಿಕಾರಿಯು ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ರಾಜಿ ಮಾಡಿಸಬಹುದು:

ಪರಂತು, ಅಂತಹ ಮೊತ್ತವು, ಯಾವುದೇ ಸಂದರ್ಭದಲ್ಲೂ ಹಾಗೆ ರಾಜೀಮಾಡಿಕೊಳ್ಳಲಾದ ಉಲ್ಲಂಘನೆಗಾಗಿ ಈ ಅಧಿನಿಯಮದ ಮೇರೆಗೆ ವಿಧಿಸಬಹುದಾದ ದಂಡದ ಗರಿಷ್ಠ ಮೊಬಲಗನ್ನು ಮೀರತಕ್ಕದ್ದಲ್ಲ.

(2) ಯಾರೇ ವ್ಯಕ್ತಿಯು, ತಾನು ಮಾಡಿದ ಮೊದಲ ಉಲ್ಲಂಘನೆಯ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಅದೇ ಅಥವಾ ಅಂತಹುದೇ ಉಲ್ಲಂಘನೆಯನ್ನು ಮಾಡಿದರೆ, (1)ನೇ ಉಪ ಪ್ರಕರಣದಲ್ಲಿರುವುದು ಯಾವುದೂ, ರಾಜೀ ಮಾಡಿಕೊಳ್ಳುವುದಕ್ಕೆ ಅನ್ವಯಿಸತಕ್ಕದ್ದಲ್ಲ.

**ವಿವರಣೆ.–** ಹಿಂದೆ ರಾಜೀ ಮಾಡಿದ ಉಲ್ಲಂಘನೆಯ ದಿನಾಂಕದಿಂದ ಮೂರು ವರ್ಷಗಳ ಅವಧಿಯ ಮುಕ್ತಾಯದ ನಂತರ ಮಾಡಿದ ಯಾವುದೇ ಎರಡನೇ ಅಥವಾ ನಂತರದ ಉಲ್ಲಂಘನೆಯನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ಮೊದಲ ಉಲ್ಲಂಘನೆಯೆಂದು ಭಾವಿಸತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ಉಲ್ಲಂಘನೆಯನ್ನು ರಾಜೀ ಮಾಡಿಕೊಂಡಿರುವಲ್ಲಿ, ಹಾಗೆ ರಾಜಿ ಮಾಡಿಕೊಂಡ ಉಲ್ಲಂಘನೆಯ ಸಂಬಂಧದಲ್ಲಿ ಅಂಥ ಉಲ್ಲಂಘನೆಯ ತಪ್ಪಿತಸ್ಥ ವ್ಯಕ್ತಿಯ ವಿರುದ್ಧ, ಯಾವುದೇ ವ್ಯವಹರಣೆಯನ್ನು ಅಥವಾ ಸಂದರ್ಭಾನುಸಾರ ಹೆಚ್ಚಿನ ವ್ಯವಹರಣೆಯನ್ನು ತೆಗೆದುಕೊಳ್ಳತಕ್ಕದ್ದಲ್ಲ.

**64. ದಂಡದ ವಸೂಲಿ.–** ಈ ಅಧಿನಿಯಮದ ಮೇರೆಗೆ ವಿಧಿಸಲಾದ ದಂಡವನ್ನು ಸಂದಾಯ ಮಾಡದಿದ್ದರೆ ಅದನ್ನು ಭೂ ಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು ಮತ್ತು ದಂಡವನ್ನು ಸಂದಾಯ ಮಾಡುವವರೆಗೆ ಲೈಸೆನ್ಸನ್ನು ಅಥವಾ ಸಂದರ್ಭಾನುಸಾರ, ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ಅಮಾನತ್ತಿನಲ್ಲಿಡತಕ್ಕದ್ದು.

## ಅಧ್ಯಾಯ – XI

## ಅಪರಾಧಗಳು

**65. ಗಣಕಯಂತ್ರದ ಮೂಲ ದಸ್ತಾವೇಜುಗಳನ್ನು ಅಕ್ರಮವಾಗಿ ತಿದ್ದುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಗಣಕಯಂತ್ರದ ಮೂಲ ಸಂಕೇತವನ್ನು ಇಡುವಂತೆ ಅಥವಾ ನಿರ್ವಹಿಸಿಕೊಂಡು ಬರುವಂತೆ ಅಗತ್ಯಪಡಿಸಿದ್ದು ಗಣಕಯಂತ್ರದ, ಗಣಕಯಂತ್ರ ಕಾರ್ಯಸರಣಿಯ, ಗಣಕಯಂತ್ರ ವ್ಯವಸ್ಥೆಯ ಅಥವಾ ಗಣಕಯಂತ್ರ ಜಾಲದ ಸಲುವಾಗಿ ಬಳಸುವ ಯಾವುದೇ ಗಣಕಯಂತ್ರದ ಮೂಲ ಸಂಕೇತವನ್ನು ಯಾರಾದರೂ ಗೊತ್ತಿದ್ದೂ ಅಥವಾ ಉದ್ದೇಶಪೂರ್ವಕವಾಗಿ ಬಚ್ಚಿಟ್ಟರೆ, ನಾಶಗೊಳಿಸಿದರೆ ಅಥವಾ ವ್ಯತ್ಯಾಸಗೊಳಿಸಿದರೆ, ಅಥವಾ ಉದ್ದೇಶಪೂರ್ವಕವಾಗಿ ಅಥವಾ

ಗೊತ್ತಿದ್ದೂ ಬಚ್ಚಿಡುವುದಕ್ಕೆ, ನಾಶ ಮಾಡುವುದಕ್ಕೆ ಅಥವಾ ವ್ಯತ್ಯಾಸಗೊಳಿಸುವುದಕ್ಕೆ ಇನ್ನೊಬ್ಬರನ್ನು ಪ್ರೇರೇಪಿಸಿದರೆ, ಅವನು ಮೂರು ವರ್ಷಗಳವರೆಗಿನ ಕಾರಾವಾಸದಿಂದ ಅಥವಾ ಎರಡು ಲಕ್ಷ ರೂಪಾಯಿವರೆಗಿನ ಜುಲ್ಮಾನೆ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ, "ಗಣಕಯಂತ್ರದ ಮೂಲ ಸಂಕೇತ" ಎಂದರೆ ಯಾವುದೇ ನಮೂನೆಯಲ್ಲಿರುವ ಗಣಕಯಂತ್ರ ಮೂಲದ ಕಾರ್ಯ ಸರಣಿಗಳನ್ನು ಪಟ್ಟಿ ಮಾಡುವುದು, ಗಣಕಯಂತ್ರದ ಆಜ್ಞೆಗಳು, ವಿನ್ಯಾಸ ಮತ್ತು ನಿರ್ದಿಷ್ಟ ರೂಪುರೇಷೆ ಮತ್ತು ಕಾರ್ಯ ಸರಣಿ – ಇವುಗಳ ವಿಶ್ಲೇಷಣೆ.

**66. ಗಣಕಯಂತ್ರ ವ್ಯವಸ್ಥೆಯನ್ನು ಛಿನ್ನಭಿನ್ನಗೊಳಿಸುವುದು.–** (1) ಸಾರ್ವಜನಿಕರಿಗೆ ಅಥವಾ ಯಾರೇ ವ್ಯಕ್ತಿಗೆ ಅಕ್ರಮ ನಷ್ಟವನ್ನು ಅಥವಾ ಹಾನಿಯನ್ನು ಉಂಟು ಮಾಡುವ ಆಶಯದಿಂದ ಅಥವಾ ಹಾಗೆ ನಷ್ಟ ಅಥವಾ ಹಾನಿ ಉಂಟು ಮಾಡುವ ಸಂಭವ ಇದೆಯೆಂದು ಗೊತ್ತಿದ್ದು ಗಣಕಯಂತ್ರದ ಮೂಲ ಸಂಪತ್ತಿನಲ್ಲಿರುವ ಯಾವುದೇ ಮಾಹಿತಿಯನ್ನು ನಾಶಗೊಳಿಸಿದ್ದರೆ ಅಥವಾ ಅಳಿಸಿ ಹಾಕಿದ್ದರೆ ಅಥವಾ ವ್ಯತ್ಯಾಸಗೊಳಿಸಿದರೆ ಅಥವಾ ಅದರ ಮೌಲ್ಯವನ್ನು ಅಥವಾ ಉಪಯುಕ್ತತೆಯನ್ನು ಕುಂದಿಸಿದರೆ ಅಥವಾ ಯಾವುದೇ ಸಾಧನದ ಮೂಲಕ ಹಾನಿಕಾರಕ ಪರಿಣಾಮವನ್ನುಂಟುಮಾಡಿದರೆ, ಅವನು ಛಿನ್ನಭಿನ್ನಗೊಳಿಸಿದಂತಾಗುತ್ತದೆ.

(2) ಛಿನ್ನಭಿನ್ನಗೊಳಿಸುವ ಯಾರೇ ಆಗಲಿ, ಅವನು ಮೂರು ವರ್ಷಗಳ ಅವಧಿಯ ಕಾರಾವಾಸದಿಂದ ಅಥವಾ ಎರಡು ಲಕ್ಷ ರೂ.ಗಳವರೆಗಿನ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**67. ವಿದ್ಯುನ್ಮಾನ ನಮೂನೆಯಲ್ಲಿ ಅಶ್ಲೀಲವಾದ ಮಾಹಿತಿಯನ್ನು ಪ್ರಕಟಿಸುವುದು.–** ಯಾರೇ ಆಗಲಿ ವಿದ್ಯುನ್ಮಾನ ನಮೂನೆಯಲ್ಲಿ ಕಾಮಪ್ರಚೋದಕವಾದ ಅಥವಾ ಲೈಂಗಿಕ ಆಸಕ್ತಿಗೆ ಹಿತವಾಗುವಂಥ ಯಾವುದೇ ಸಾಮಗ್ರಿಯನ್ನು ಅಥವಾ ಅದರಲ್ಲಿ ಒಳಗೊಂಡಂಥ ಅಥವಾ ಅದರಲ್ಲಿ ಸಾಕಾರಗೊಂಡಿರುವ ವಿಷಯವನ್ನು ಓದುವ, ನೋಡುವ ಅಥವಾ ಕೇಳುವ ಎಲ್ಲ ಸುಸಂಗತ ಸಂದರ್ಭಗಳನ್ನು ಗಮನಿಸಿ, ಅದರಲ್ಲಿ ಒಳಗೊಂಡಂಥ ಅಥವಾ ಸಾಕಾರಗೊಂಡಂಥ ವಿಷಯಗಳನ್ನು ಓದುವ, ನೋಡುವ ಅಥವಾ ಕೇಳುವ ಸಂಭವವಿರುವ ವ್ಯಕ್ತಿಗಳನ್ನು ನೀತಿಗೆಡಿಸುವ ಅಥವಾ ಭ್ರಷ್ಟಗೊಳಿಸುವ ಪರಿಣಾಮವನ್ನು ಹೊಂದಿದ್ದರೆ, ಅವನು ಮೊದಲ ಸಲ ಅಪರಾಧ ನಿರ್ಣಯವಾದ ಮೇಲೆ ಐದು ವರ್ಷಗಳವರೆಗಿನ ಎರಡೂ ಬಗೆಯ ಕಾರಾವಾಸದಿಂದ ಮತ್ತು ಒಂದು ಲಕ್ಷ ರೂ. ಜುಲ್ಮಾನೆಯಿಂದ ಮತ್ತು ಎರಡನೆಯ ಸಲದ ಅಥವಾ ತರುವಾಯದ ಅಪರಾಧ ನಿರ್ಣಯವಾದ ಮೇಲೆ ಹತ್ತು ವರ್ಷಗಳವರೆಗಿನ ಎರಡೂ ಬಗೆಯ ಕಾರಾವಾಸದಿಂದ ಹಾಗೂ ಎರಡು ಲಕ್ಷ ರೂಪಾಯಿವರೆಗಿನ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**68. ನಿರ್ದೇಶನಗಳನ್ನು ನೀಡಲು ನಿಯಂತ್ರಕನ ಅಧಿಕಾರ.** – (1) ನಿಯಂತ್ರಕನು ಆದೇಶವನ್ನು ಹೊರಡಿಸಿ, ಈ ಅಧಿನಿಯಮದ ಮೇರೆಗೆ ಮಾಡಲಾದ ನಿಯಮಗಳ ಅಥವಾ ಯಾವುವೇ ವಿನಿಯಮಗಳ ಯಾವುವೇ ಉಪಬಂಧಗಳ ಪಾಲನೆಯನ್ನು ಸುನಿಶ್ಚಿತಗೊಳಿಸಲು ಆದೇಶದಲ್ಲಿ ನಿರ್ದಿಷ್ಟಪಡಿಸಿದಂತಹ ಕ್ರಮಗಳನ್ನು ತೆಗೆದುಕೊಳ್ಳುವುದು ಅಥವಾ ಅಂತಹ ಚಟುವಟಿಕೆಗಳ ಮುಂದುವರಿಕೆಯನ್ನು ನಿಲ್ಲಿಸುವುದು ಅವಶ್ಯವೆನಿಸಿದರೆ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಅಥವಾ ಅಂತಹ ಪ್ರಾಧಿಕಾರದ ಯಾರೇ ನೌಕರನಿಗೆ ಹಾಗೆ ನಿರ್ದೇಶನ ನೀಡಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಆದೇಶವನ್ನು ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು, ಅಪರಾಧವನ್ನು ಮಾಡಿದ ತಪ್ಪಿತಸ್ಥನಾಗಿರತಕ್ಕದ್ದು ಮತ್ತು ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳಿಗೆ ಮೀರದ ಅವಧಿಯ ಕಾರಾವಾಸದಿಂದ ಅಥವಾ ಎರಡು ಲಕ್ಷ ರೂಪಾಯಿಗಳಿಗೆ ಮೀರದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**69. ಮಾಹಿತಿಯನ್ನು ಕೊಡುವಂತೆ ಸಾಂಕೇತಿಕ ಭಾಷೆಯಿಂದ ಸಾಮಾನ್ಯ ಭಾಷೆಗೆ ಪರಿವರ್ತಿಸಲು ಬೇಕಾದ ಅನುಕೂಲಗಳನ್ನು ನೀಡಲು ವಂತಿಗೆದಾರನಿಗೆ ನಿಯಂತ್ರಕನ ನಿರ್ದೇಶನಗಳು.–** (1) ಭಾರತದ ಸಾರ್ವಭೌಮತ್ವ ಹಾಗೂ ಅಖಂಡತೆ, ರಾಷ್ಟ್ರದ ಭದ್ರತೆ, ವಿದೇಶೀ ರಾಷ್ಟ್ರಗಳೊಂದಿಗೆ ಸ್ನೇಹಪರ ಸಂಬಂಧಗಳು ಅಥವಾ ಸಾರ್ವಜನಿಕ ಸುವ್ಯವಸ್ಥೆ– ಇವುಗಳ ಹಿತದೃಷ್ಟಿಯಿಂದ ಅಥವಾ ಯಾವುದೇ ಸಂಜ್ಞೇಯ ಅಪರಾಧ ಮಾಡುವುದಕ್ಕೆ ದುಷ್ಪ್ರೇರಣೆ ಮಾಡುವುದನ್ನು ತಡೆಯಲು, ಯಾವುದೇ ಗಣಕಯಂತ್ರದ ಸಂಪನ್ಮೂಲದ ಮೂಲಕ ರವಾನೆಯಾಗುತ್ತಿರುವ ಯಾವುದೇ ಮಾಹಿತಿಯನ್ನು ತಡೆಹಿಡಿಯುವುದು ಅಗತ್ಯ ಅಥವಾ ವಿಹಿತವೆಂದು ನಿಯಂತ್ರಕನಿಗೆ ಮನದಟ್ಟಾದರೆ ಆ ಕುರಿತು ಲಿಖಿತ ಕಾರಣಗಳನ್ನು ದಾಖಲಿಸಿ ಅವನು ಹಾಗೆ ಮಾಡುವಂತೆ ಆದೇಶದ ಮೂಲಕ ನಿರ್ದೇಶನ ನೀಡಬಹುದು.

(2) ವಂತಿಗೆದಾರನನ್ನು ಅಥವಾ ಗಣಕಯಂತ್ರದ ಸಂಪನ್ಮೂಲದ ಪ್ರಭಾರವನ್ನು ಹೊಂದಿರುವ ಯಾರೇ ವ್ಯಕ್ತಿಯನ್ನು (1)ನೇ ಉಪ ಪ್ರಕರಣದ ಮೇರೆಗೆ ನಿರ್ದೇಶಿಸಲಾದಂಥ ಯಾವುದೇ ಏಜೆನ್ಸಿಯ ಮೂಲಕ ಕೋರಿದಾಗ, ಅವನು ಆ ಮಾಹಿತಿಯನ್ನು ಸಾಂಕೇತಿಕ ಭಾಷೆಯನ್ನು ಸಾಮಾನ್ಯ ಭಾಷೆಗೆ ಪರಿವರ್ತಿಸಲು ಎಲ್ಲಾ ಅನುಕೂಲತೆಗಳನ್ನು ಮತ್ತು ತಾಂತ್ರಿಕ ಸಹಾಯವನ್ನು ನೀಡತಕ್ಕದ್ದು.

(3) (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಏಜೆನ್ಸಿಗೆ ಸಹಾಯ ನೀಡಲು ವಂತಿಗೆದಾರನು ಅಥವಾ ಯಾರೇ ವ್ಯಕ್ತಿಯು ತಪ್ಪಿದರೆ ಅವನು ಏಳು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**70. ಸಂರಕ್ಷಿತ ವ್ಯವಸ್ಥೆ.–** (1) ಸಮುಚಿತ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಯಾವುದೇ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲವನ್ನು ಸಂರಕ್ಷಿತ ವ್ಯವಸ್ಥೆಯೆಂದು ಘೋಷಿಸಬಹುದು.

(2) ಸಮುಚಿತ ಸರ್ಕಾರವು, ಲಿಖಿತ ಆದೇಶದ ಮೂಲಕ, (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚಿಸಿದ ಸಂರಕ್ಷಿತ ವ್ಯವಸ್ಥೆಗಳನ್ನು ನೋಡುವುದಕ್ಕೆ ಅಧಿಕಾರ ಪಡೆದ ವ್ಯಕ್ತಿಗಳನ್ನು ಅಧಿಕೃತಗೊಳಿಸಬಹುದು.

(3) ಈ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಸಂರಕ್ಷಿತ ವ್ಯವಸ್ಥೆಯನ್ನು ಯಾರೇ ವ್ಯಕ್ತಿಯು ಪ್ರವೇಶಿಸುವ ಅಥವಾ ಪ್ರವೇಶಿಸಲು ಪ್ರಯತ್ನಪಟ್ಟರೆ, ಅವನು ಹತ್ತು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು.

**71. ತಪ್ಪು ನಿರೂಪಣೆಗಾಗಿ ದಂಡ.–** ಯಾರಾದರೂ, ಯಾವುದೇ ಲೈಸೆನ್ಸು ಅಥವಾ ಸಂದರ್ಭಾನುಸಾರ ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ಪಡೆಯುವುದಕ್ಕಾಗಿ ನಿಯಂತ್ರಕನಿಗೆ ಅಥವಾ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಯಾವುದೇ ತಪ್ಪು ನಿರೂಪಣೆಯನ್ನು ನೀಡಿದರೆ ಅಥವಾ ಯಾವುದೇ ಮುಖ್ಯ ಅಂಶವನ್ನು ಮುಚ್ಚಿಟ್ಟರೆ, ಅವನು ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**72. ಗೌಪ್ಯತೆ ಮತ್ತು ರಹಸ್ಯತೆಯ ಉಲ್ಲಂಘನೆಗೆ ದಂಡ.–** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅನ್ಯಥಾ ಉಪಬಂಧಿಸಿರುವುದನ್ನು ಉಳಿದು, ಈ ಅಧಿನಿಯಮದ, ಅದರ ಮೇರೆಗೆ ಮಾಡಲಾದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಪ್ರದತ್ತವಾದ ಅಧಿಕಾರಗಳ ಪೈಕಿ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಯಾರೇ ವ್ಯಕ್ತಿಯು, ಸಂಬಂಧಪಟ್ಟ ವ್ಯಕ್ತಿಯ ಅನುಮತಿಯಿಲ್ಲದೆ ಯಾವುದೇ ವಿದ್ಯುನ್ಮಾನ ದಾಖಲೆ, ಪುಸ್ತಕ, ರಿಜಿಸ್ಟರು, ಪತ್ರ ವ್ಯವಹಾರ, ಮಾಹಿತಿ, ದಸ್ತಾವೇಜು ಅಥವಾ ಇತರ ಸಾಮಗ್ರಿಯನ್ನು ನೋಡುವುದಕ್ಕೆ ಯಾರೇ ಮತ್ತೊಬ್ಬ ವ್ಯಕ್ತಿಗೆ ಅಂತಹ ವಿದ್ಯುನ್ಮಾನ ದಾಖಲೆ, ಪುಸ್ತಕ, ರಿಜಿಸ್ಟರು, ಪತ್ರ ವ್ಯವಹಾರ, ಮಾಹಿತಿ, ದಸ್ತಾವೇಜು ಅಥವಾ ಇತರ ಸಾಮಗ್ರಿಯನ್ನು ಬಹಿರಂಗಪಡಿಸಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**73. ಕೆಲವು ವಿವರಗಳಲ್ಲಿ ತಪ್ಪಾಗಿರುವ ಅಂಕಿಚಿಹ್ನೆ ಪ್ರಮಾಣಪತ್ರವನ್ನು ಪ್ರಕಟಿಸಿದ್ದಕ್ಕಾಗಿ ದಂಡ.–** (1) ಯಾರೇ ವ್ಯಕ್ತಿಯು,–

(ಎ) ಪ್ರಮಾಣಪತ್ರದಲ್ಲಿ ನಮೂದಿಸಲಾದ ಪ್ರಮಾಣೀಕರಿಸುವ ಪ್ರಾಧಿಕಾರವು ಅದನ್ನು ನೀಡಿರುವುದಿಲ್ಲ; ಅಥವಾ

(ಬಿ) ಪ್ರಮಾಣಪತ್ರದಲ್ಲಿ ನಮೂದಿಸಲಾದ ವಂತಿಗೆದಾರನು ಅದನ್ನು ಸ್ವೀಕರಿಸಿರುವುದಿಲ್ಲ; ಅಥವಾ

(ಸಿ) ಪ್ರಮಾಣಪತ್ರವನ್ನು ರದ್ದುಗೊಳಿಸಲಾಗಿದೆ ಅಥವಾ ತಡೆಹಿಡಿಯಲಾಗಿದೆ ಎಂದು ಗೊತ್ತಿದ್ದೂ

– ಅಂತಹ ಅಮಾನತ್ತು ಅಥವಾ ರದ್ದಿಯಾತಿಯ ಮುಂಚೆ ಸೃಜಿಸಲಾದ ಅಂಕಿಚಿಹ್ನೆಯನ್ನು ಪ್ರಕಟಿಸುವ ಉದ್ದೇಶಕ್ಕಾಗಿ ಅಂಕಿಚಿಹ್ನೆಯ ಪ್ರಮಾಣಪತ್ರದ ಪ್ರಕಟಣೆ ಆಗಿದ್ದ ಹೊರತು, ಅದನ್ನು ಪ್ರಕಟಿಸತಕ್ಕದ್ದಲ್ಲ ಅಥವಾ ಅನ್ಯಥಾ ಯಾರೇ ಇತರ ವ್ಯಕ್ತಿಗೆ ದೊರೆಯುವಂತೆ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದ ಯಾರೇ ವ್ಯಕ್ತಿಯು ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**74. ಮೋಸಮಾಡುವ ಉದ್ದೇಶಕ್ಕಾಗಿ ಪ್ರಕಟಣೆ.–** ಯಾರೇ ಆಗಲಿ ಗೊತ್ತಿದ್ದೂ, ಯಾವುದೇ ಮೋಸದ ಅಥವಾ ಕಾನೂನುಬಾಹಿರವಾದ ಉದ್ದೇಶಕ್ಕಾಗಿ ಅಂಕಿಚಿಹ್ನೆ ಪ್ರಮಾಣ ಪತ್ರವನ್ನು ಸೃಜಿಸಿದರೆ, ಪ್ರಕಟಿಸಿದರೆ ಅಥವಾ ಅನ್ಯಥಾ ದೊರಕುವಂತೆ ಮಾಡಿದರೆ, ಅವನು ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಲಕ್ಷ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವೆರಡರಿಂದಲೂ ದಂಡಿತನಾಗತಕ್ಕದ್ದು.

**75. ಭಾರತದ ಹೊರಗೆ ಮಾಡಿದ ಅಪರಾಧ ಅಥವಾ ಉಲ್ಲಂಘನೆಗೆ ಅಧಿನಿಯಮವು ಅನ್ವಯವಾಗುವುದು.–**(1) (2)ನೇ ಉಪಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಅವನ ರಾಷ್ಟ್ರೀಯತೆಯು ಯಾವುದೇ ಇದ್ದರೂ ಸರಿಯೇ ಯಾರೇ ವ್ಯಕ್ತಿಯು ಗಣನೆಗೆ ತೆಗೆದುಕೊಳ್ಳದೆ ಭಾರತದ ಹೊರಗೆ ಮಾಡಿದ ಯಾವುದೇ ಅಪರಾಧಕ್ಕೆ ಅಥವಾ ಉಲ್ಲಂಘನೆಗೆ ಈ ಅಧಿನಿಯಮದ ಉಪಬಂಧಗಳು ಅನ್ವಯವಾಗತಕ್ಕದ್ದು.

(2) ಅಪರಾಧ ಅಥವಾ ಉಲ್ಲಂಘನೆ ಆಗುವಂಥ ಕಾರ್ಯವು ಅಥವಾ ವರ್ತನೆಯು ಭಾರತದಲ್ಲಿರುವ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ ಅಥವಾ ಗಣಕಯಂತ್ರ ಜಾಲಕ್ಕೆ ಸಂಬಂಧಿಸಿದ್ದರೆ ಯಾರೇ ವ್ಯಕ್ತಿಯು ಭಾರತದ ಹೊರಗೆ ಮಾಡಿದ ಅಪರಾಧಕ್ಕೆ ಅಥವಾ ಉಲ್ಲಂಘನೆಗೆ (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ ಈ ಅಧಿನಿಯಮವು ಅನ್ವಯಿಸತಕ್ಕದ್ದು.

**76. ಮುಟ್ಟುಗೋಲು.–** ಯಾವುದೇ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ, ಕಾಂತೀಯ ತಟ್ಟೆಗಳು, ಅಡಕ ತಟ್ಟೆಗಳು, ಧ್ವನಿ ಪಟ್ಟಿಗಳು ಅಥವಾ ಅವಕ್ಕೆ ಸಂಬಂಧಿಸಿದ ಯಾವುದೇ ಇತರ ಉಪಸಾಧನಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ, ಅದರ ಮೇರೆಗೆ ಮಾಡಿದ ನಿಯಮಗಳ, ಆದೇಶಗಳ ಅಥವಾ ವಿನಿಯಮಗಳ ಯಾವುದೇ ಉಪಬಂಧದ ಸಂಬಂಧದಲ್ಲಿ ಉಲ್ಲಂಘನೆಯಾಗಿದ್ದರೆ ಅಥವಾ ಆಗುತ್ತಿದ್ದರೆ, ಅದು ಮುಟ್ಟುಗೋಲಿಗೆ ಗುರಿಯಾಗತಕ್ಕದ್ದು:

ಪರಂತು, ಅಂಥ ಯಾವುದೇ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ, ಕಾಂತೀಯ ತಟ್ಟೆಗಳು, ಅಡಕ ತಟ್ಟೆಗಳು, ಧ್ವನಿಪಟ್ಟಿಗಳು ಅಥವಾ ಅವುಗಳಿಗೆ ಸಂಬಂಧಿಸಿದ ಯಾವುದೇ ಇತರ ಉಪಸಾಧನಗಳ ಸ್ವಾಧೀನತೆ, ಅಧಿಕಾರ ಅಥವಾ ನಿಯಂತ್ರಣ ಹೊಂದಿರುವ ವ್ಯಕ್ತಿಯು ಈ ಅಧಿನಿಯಮದ, ಅದರ ಮೇರೆಗೆ ರಚಿಸಿದ ನಿಯಮಗಳ, ಆದೇಶಗಳ ಅಥವಾ ವಿನಿಯಮಗಳ ಉಪಬಂಧಗಳ ಉಲ್ಲಂಘನೆಗೆ ಜವಾಬ್ದಾರನಲ್ಲವೆಂದು ಕಂಡುಬಂದಿದೆಯೆಂಬುದಾಗಿ ಸರ್ಕಾರ ಮುಟ್ಟುಗೋಲಿನ ನ್ಯಾಯನಿರ್ಣಯ ನೀಡುವ ನ್ಯಾಯಾಲಯಕ್ಕೆ ಮನದಟ್ಟಾಗುವ ರೀತಿಯಲ್ಲಿ ಸಾಧಿಸಿದರೆ ನ್ಯಾಯಾಲಯವು ಅಂಥ ಗಣಕಯಂತ್ರ, ಗಣಕಯಂತ್ರ ವ್ಯವಸ್ಥೆ, ಕಾಂತೀಯ ತಟ್ಟೆಗಳು, ಅಡಕ ತಟ್ಟೆಗಳು, ಧ್ವನಿಪಟ್ಟಿಗಳು ಅಥವಾ ಅವುಗಳಿಗೆ ಸಂಬಂಧಿಸಿದ ಯಾವುದೇ ಇತರ ಉಪಸಾಧನಗಳನ್ನು ಸರ್ಕಾರ ಮುಟ್ಟುಗೋಲಿನ ಆದೇಶ ಮಾಡುವುದಕ್ಕೆ ಬದಲಾಗಿ ಈ ಅಧಿನಿಯಮದ, ಅದರ ಮೇರೆಗೆ ಮಾಡಿದ ನಿಯಮಗಳ, ಆದೇಶಗಳ ಅಥವಾ ವಿನಿಯಮಗಳ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಯ ವಿರುದ್ಧ ತಾನು ಸೂಕ್ತವೆಂದು ಭಾವಿಸುವಂತೆ ಈ ಅಧಿನಿಯಮದಿಂದ ಅಧಿಕೃತಗೊಳಿಸಲಾದಂಥ ಇತರ ಆದೇಶವನ್ನು ಮಾಡಬಹುದು.

**77. ದಂಡಗಳು ಅಥವಾ ಮುಟ್ಟುಗೋಲುಗಳು ಇತರ ದಂಡನೆಗಳಿಗೆ ಅಡ್ಡಿಯಾಗದಿರುವುದು.–** ಈ ಅಧಿನಿಯಮದ ಮೇರೆಗೆ ವಿಧಿಸಲಾದ ಯಾವುದೇ ದಂಡನೆ ಅಥವಾ ಮುಟ್ಟುಗೋಲು, ಆ ಮೂಲಕ ಬಾಧಿತವಾದ ವ್ಯಕ್ತಿಗೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಗುರಿಯಾಗತಕ್ಕ ಯಾವುದೇ ಇತರ ದಂಡನೆಯನ್ನು ವಿಧಿಸುವುದಕ್ಕೆ ತಡೆಯಾಗತಕ್ಕದ್ದಲ್ಲ.

**78. ಅಪರಾಧ ತನಿಖಾಧಿಕಾರ.–** ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973 (1974ರ 2)ರಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಪೊಲೀಸ್ ಉಪ ಅಧೀಕ್ಷಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಪೊಲೀಸ್ ಅಧಿಕಾರಿಯು, ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧದ ತನಿಖೆ ಮಾಡತಕ್ಕದ್ದು.

## ಅಧ್ಯಾಯ – XII

### ಕಾರ್ಯಾಚರಣೆ ಜಾಲದ ಸೇವೆಯನ್ನು ಒದಗಿಸುವವರು ಕೆಲವು ಸಂದರ್ಭಗಳಲ್ಲಿ ಹೊಣೆಯಾಗದಿರುವುದು

**79. ಕಾರ್ಯಾಚರಣೆ ಜಾಲದ ಸೇವೆಯನ್ನು ಒದಗಿಸುವವರು ಕೆಲವು ಸಂದರ್ಭಗಳಲ್ಲಿ ಹೊಣೆಯಾಗದಿರುವುದು.–** ಕಾರ್ಯಾಚರಣೆ ಜಾಲದ ಸೇವೆಯನ್ನು ಒದಗಿಸುವಾತನಾಗಿ ಯಾವುದೇ ಸೇವೆಯನ್ನು ಒದಗಿಸುವ ಯಾರೇ ವ್ಯಕ್ತಿಯು ಅವನು ದೊರಕಿಸಿಕೊಟ್ಟ ತೃತೀಯ ಪಕ್ಷದ ಮಾಹಿತಿ ಅಥವಾ ಯಾವುದೇ ದತ್ತಾಂಶದ ಬಗೆಗಿನ ಅಪರಾಧವು ಅಥವಾ ಉಲ್ಲಂಘನೆಯು ತನ್ನ ತಿಳಿವಳಿಕೆಗೆ ಬಾರದೆ ಮಾಡಲಾಯಿತೆಂದು ಅಥವಾ ಅಂಥ ಅಪರಾಧ ಅಥವಾ ಉಲ್ಲಂಘನೆ ಮಾಡುವುದನ್ನು ತಡೆಯಲು ತಾನು ಎಲ್ಲ ಯುಕ್ತ ಶ್ರದ್ಧೆ ವಹಿಸಿದ್ದೇನೆಂದು ರುಜುವಾತು ಮಾಡಿದರೆ, ಅವನು ಈ ಅಧಿನಿಯಮದ, ಅದರ ಮೇರೆಗೆ ಮಾಡಿದ ನಿಯಮಗಳ ಅಥವಾ ವಿನಿಯಮಗಳ ಮೇರೆಗೆ ಹೊಣೆಗಾರನಾಗತಕ್ಕದ್ದಲ್ಲವೆಂಬುದಾಗಿ, ಸಂದೇಹಗಳ ನಿವಾರಣೆಗಾಗಿ ಈ ಮೂಲಕ ಘೋಷಿಸಲಾಗಿದೆ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಾರ್ಯಾಚರಣೆ ಜಾಲದ ಸೇವೆ ಒದಗಿಸುವಾತ" ಎಂದರೆ ಒಬ್ಬ ಮಧ್ಯಸ್ಥಗಾರ;

(ಬಿ) "ತೃತೀಯ ಪಕ್ಷದ ಮಾಹಿತಿ" ಎಂದರೆ ಕಾರ್ಯಾಚರಣೆ ಜಾಲದ ಸೇವೆಯನ್ನು ಒದಗಿಸುವಾತನು ಮಧ್ಯಸ್ಥನಾಗಿರತಕ್ಕ ತನ್ನ ಸಾಮರ್ಥ್ಯದಲ್ಲಿ ವ್ಯವಹರಿಸುವ ಯಾವುದೇ ಮಾಹಿತಿ.

## ಅಧ್ಯಾಯ – XIII

### ಸಂಕೀರ್ಣ

**80. ಪೊಲೀಸು ಅಧಿಕಾರಿ ಮತ್ತು ಇತರ ಅಧಿಕಾರಿಗಳಿಗೆ ಪ್ರವೇಶ, ಶೋಧನೆ, ಮುಂತಾದವುಗಳ ಬಗ್ಗೆ ಅಧಿಕಾರ.– (1)** ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಉಪ ಅಧೀಕ್ಷಕರ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಯಾರೇ ಪೊಲೀಸ್ ಅಧಿಕಾರಿಯು ಅಥವಾ ಈ ಬಗ್ಗೆ ಕೇಂದ್ರ ಸರ್ಕಾರದಿಂದ ಅಧಿಕೃತನಾದ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಯಾರೇ ಇತರ ಅಧಿಕಾರಿಯು ಯಾವುದೇ ಸಾರ್ವಜನಿಕ ಸ್ಥಳವನ್ನು ಪ್ರವೇಶಿಸಿ ಶೋಧಿಸಬಹುದು ಮತ್ತು ಈ ಅಧಿನಿಯಮದ ಮೇರೆಗಿನ ಯಾವುದೇ ಅಪರಾಧ ಮಾಡಿದ್ದಾನೆಂದು, ಮಾಡುತ್ತಿರುವನೆಂದು, ಮಾಡಲಿರುವನೆಂದು ಯುಕ್ತವಾಗಿ ಸಂದೇಹಾಸ್ಪದನಾದ ಯಾರೇ ವ್ಯಕ್ತಿಯು ಅಲ್ಲಿ ಕಂಡುಬಂದರೆ ಅವನನ್ನು ವಾರಂಟಿಲ್ಲದೆ ಬಂಧಿಸಬಹುದು.

**ವಿವರಣೆ.–** ಈ ಉಪ ಪ್ರಕರಣದ ಉದ್ದೇಶಗಳಿಗಾಗಿ 'ಸಾರ್ವಜನಿಕ ಸ್ಥಳ' ಎಂಬ ಪದವು ಯಾವುದೇ ಸಾರ್ವಜನಿಕ ವಾಹನ, ಯಾವುದೇ ಹೋಟೆಲ್, ಯಾವುದೇ ಅಂಗಡಿ ಅಥವಾ ಸಾರ್ವಜನಿಕರು ಬಳಸುವ ಉದ್ದೇಶಕ್ಕಾಗಿ ಇರುವ ಅಥವಾ ಸಾರ್ವಜನಿಕರಿಗೆ ಪ್ರವೇಶ ಅವಕಾಶವಿರುವ ಯಾವುದೇ ಇತರ ಸ್ಥಳ.

(2) ಪೊಲೀಸ್ ಅಧಿಕಾರಿಯ ಹೊರತಾಗಿ ಒಬ್ಬ ಅಧಿಕಾರಿಯಿಂದ (1)ನೇ ಉಪ ಪ್ರಕರಣದ ಮೇರೆಗೆ ಯಾರೇ ವ್ಯಕ್ತಿಯು ಬಂಧಿತನಾಗಿರುವಲ್ಲಿ, ಅಂತಹ ಅಧಿಕಾರಿಯು, ಯಾವುದೇ ಅನಗತ್ಯ ವಿಳಂಬವಿಲ್ಲದೆ, ಆ ಮೊಕದ್ದಮೆಯಲ್ಲಿ ಅಧಿಕಾರ ವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟನ ಮುಂದೆ ಅಥವಾ ಪೊಲೀಸ್ ಠಾಣೆಯ ಪ್ರಭಾರ ಹೊಂದಿರುವ ಅಧಿಕಾರಿಯ ಮುಂದೆ ಬಂಧಿತ ವ್ಯಕ್ತಿಯನ್ನು ತೆಗೆದುಕೊಂಡು ಹೋಗತಕ್ಕದ್ದು ಅಥವಾ ಕಳುಹಿಸತಕ್ಕದ್ದು.

(3) ಈ ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಪ್ರವೇಶ, ಶೋಧನೆ ಅಥವಾ ಬಂಧನಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, 1973ರ (1974ರ 2) ಉಪಬಂಧಗಳು ಈ ಪ್ರಕರಣದ ಉಪಬಂಧಗಳಿಗೊಳಪಟ್ಟು ಸಾಧ್ಯವಿರಬಹುದಾದಷ್ಟು ಮಟ್ಟಿಗೆ ಅನ್ವಯವಾಗತಕ್ಕದ್ದು.

**81. ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು.–** ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರುವುದು ಏನೇ ಇದ್ದರೂ, ಈ ಉಪಬಂಧಗಳೇ ಅಧ್ಯಾರೋಹಿ ಪರಿಣಾಮ ಹೊಂದಿರತಕ್ಕದ್ದು.

**81ಎ. ವಿದ್ಯುನ್ಮಾನ ಚೆಕ್ಕಿಗೆ ಮತ್ತು ಟ್ರಂಕೇಟೆಡ್ ಚೆಕ್ಕುಗಳಿಗೆ ಅಧಿನಿಯಮದ ಅನ್ವಯ.–** (1) ತತ್ಕಾಲದಲ್ಲಿ ಜಾರಿಯಲ್ಲಿರುವ ಈ ಅಧಿನಿಯಮದ ಉಪಬಂಧಗಳು, ಕೇಂದ್ರ ಸರ್ಕಾರವು ಭಾರತ ರಿಸರ್ವ್ ಬ್ಯಾಂಕ್‌ನೊಂದಿಗೆ ಸಮಾಲೋಚಿಸಿ, ರಾಜಪತ್ರದಲ್ಲಿ ಅಧಿಸೂಚನೆ ಮೂಲಕ, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ 26)ರ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಮಾಡಿದ ಅವಶ್ಯವೆನಿಸಬಹುದಾದಂಥ ಮಾರ್ಪಾಡುಗಳು ಮತ್ತು ತಿದ್ದುಪಡಿಗಳಿಗೊಳಪಟ್ಟು ವಿದ್ಯುನ್ಮಾನ ಚೆಕ್ಕುಗಳಿಗೆ ಮತ್ತು ಟ್ರಂಕೇಟೆಡ್ ಚೆಕ್ಕುಗಳಿಗೆ ಅಥವಾ ಅವುಗಳಿಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು.

(2) ಕೇಂದ್ರ ಸರ್ಕಾರವು (1)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ನಿರಂತರವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಒಂದು ಅವಧಿಯವರೆಗೆ ಇರಿಸತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರವಾಗಿ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಗಿಯುವುದಕ್ಕೆ ಮುಂಚೆ, ಆ ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ಅಧಿಸೂಚನೆಯು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದರೆ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆಯ ಮೇರೆಗೆ ಹಿಂದೆ ಮಾಡಿದ ಯಾವುದೇ ಕೃತ್ಯದ ಕಾನೂನು ಮಾನ್ಯತೆಗೆ ಬಾಧಕವಾಗದಂತೆ ಇರತಕ್ಕದ್ದು.

**ವಿವರಣೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ, "ವಿದ್ಯುನ್ಮಾನ ಚೆಕ್ಕು " ಮತ್ತು "ಟ್ರಂಕೇಟೆಡ್ ಚೆಕ್ಕು" ಎಂಬ ಪದಾವಳಿಗಳು, ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881ರ (1881ರ 26) 6ನೇ ಪ್ರಕರಣದಲ್ಲಿ ಅವುಗಳಿಗೆ ನೀಡಿರುವ ಅರ್ಥವನ್ನೇ ಹೊಂದಿರತಕ್ಕದ್ದು.

**82. ನಿಯಂತ್ರಕ, ಉಪ ನಿಯಂತ್ರಕ ಮತ್ತು ಸಹಾಯಕ ನಿಯಂತ್ರಕರು ಲೋಕನೌಕರರಾಗಿರುವುದು.–** ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿ ಮತ್ತು ಇತರ ಅಧಿಕಾರಿಗಳು ಮತ್ತು ನೌಕರರನ್ನು ನಿಯಂತ್ರಕ, ಉಪ ನಿಯಂತ್ರಕ ಮತ್ತು ಸಹಾಯಕ ನಿಯಂತ್ರಕರುಗಳನ್ನು ಭಾರತ ದಂಡ ಸಂಹಿತೆ, 1860 (1860 ರ 45) ಇದರ 21ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಲೋಕನೌಕರರೆಂದು ಭಾವಿಸತಕ್ಕದ್ದು.

**83. ನಿರ್ದೇಶನಗಳನ್ನು ನೀಡುವ ಅಧಿಕಾರ.–** ಕೇಂದ್ರ ಸರ್ಕಾರವು, ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮದ, ವಿನಿಯಮದ ಅಥವಾ ಆದೇಶದ ಉಪಬಂಧಗಳ ಪೈಕಿ ಯಾವುದೇ ಉಪಬಂಧವನ್ನು ರಾಜ್ಯದಲ್ಲಿ ಕಾರ್ಯಗತಗೊಳಿಸುವುದಕ್ಕೆ ಸಂಬಂಧಪಟ್ಟಂತೆ ಯಾವುದೇ ರಾಜ್ಯ ಸರ್ಕಾರಕ್ಕೆ ನಿರ್ದೇಶನಗಳನ್ನು ನೀಡಬಹುದು.

**84. ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.–** ಈ ಅಧಿನಿಯಮ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮ, ವಿನಿಯಮ ಅಥವಾ ಆದೇಶಕ್ಕನುಸಾರವಾಗಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ನಿಯಂತ್ರಕನ ಅಥವಾ ಅವನ ಪರವಾಗಿ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ, ಸೈಬರ್ ಅಪೀಲು ನ್ಯಾಯಾಧಿಕರಣದ ಅಧ್ಯಕ್ಷಾಧಿಕಾರಿಯ, ನ್ಯಾಯ ನಿರ್ಣಯ ಅಧಿಕಾರಿಗಳ ಮತ್ತು ಸಿಬ್ಬಂದಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

**85. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ನಿಯಮ, ನಿರ್ದೇಶನ ಅಥವಾ ಆದೇಶದ ಉಪಬಂಧಗಳ ಪೈಕಿ ಯಾವುದೇ ಉಪಬಂಧದ ಉಲ್ಲಂಘನೆಯನ್ನು ಮಾಡುವ ಯಾರೇ ವ್ಯಕ್ತಿಯು ಒಂದು ಕಂಪನಿಯಾಗಿರುವಲ್ಲಿ, ಅಂಥ ಉಲ್ಲಂಘನೆಯನ್ನು ಮಾಡಿದ ಸಮಯದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಯ ವ್ಯವಹಾರ ನಡೆಸಲು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ಮತ್ತು ಕಂಪನಿಯು ಸಹ ಉಲ್ಲಂಘನೆಯ ತಪ್ಪಿತಸ್ಥನಾಗತಕ್ಕದ್ದು ಮತ್ತು ಅವನು, ಕಾನೂನು ವ್ಯವಹರಣೆಗೆ ಗುರಿಯಾಗಲು ಮತ್ತು ತದನುಸಾರವಾಗಿ ದಂಡಿತನಾಗಲು ಬದ್ಧನಾಗತಕ್ಕದ್ದು:

ಪರಂತು, ಅಂಥ ಉಲ್ಲಂಘನೆಯು ತನ್ನ ತಿಳಿವಳಿಕೆಗೆ ಬಾರದೆ ನಡೆದಿದೆಯೆಂದು ಅಥವಾ ಅಂತಹ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕೆ ತಾನು ಯಥೋಚಿತ ಜಾಗರೂಕತೆಯನ್ನು ವಹಿಸಿದ್ದೆನೆಂದು ಅಂಥ ಯಾರೇ ವ್ಯಕ್ತಿಯು ರುಜುವಾತುಪಡಿಸಿದರೆ, ಈ ಉಪಪ್ರಕರಣದಲ್ಲಿರುವುದು ಯಾವುದೂ ಅವನನ್ನು ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುದೇ ನಿಯಮ, ನಿರ್ದೇಶನ ಅಥವಾ ಆದೇಶದ ಉಪಬಂಧಗಳ ಪೈಕಿ ಯಾವುದೇ ಉಪಬಂಧದ ಉಲ್ಲಂಘನೆಯನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಉಲ್ಲಂಘನೆಯನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ಅಥವಾ ಅದನ್ನು ಅವರ ಯಾವುದೇ ನಿರ್ಲಕ್ಷ್ಯಕ್ಕೆ ಆರೋಪಿಸಬಹುದೆಂದು ರುಜುವಾತಾದರೆ, ಅಂತಹ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿ ಸಹ ಆ ಉಲ್ಲಂಘನೆಯ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನ ವಿರುದ್ಧದ ವ್ಯವಹರಣೆಗೆ ಗುರಿಯಾಗಲು ಮತ್ತು ತದನುಸಾರವಾಗಿ ದಂಡಿತನಾಗಲು ಬದ್ಧನಾಗಿರತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(i) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಅದು ವ್ಯವಹಾರ ಸಂಸ್ಥೆ ಅಥವಾ ಇತರ ವ್ಯಕ್ತಿಗಳ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ii) ವ್ಯವಹಾರ ಸಂಸ್ಥೆಯ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಆ ವ್ಯವಹಾರ ಸಂಸ್ಥೆಯ ಪಾಲುದಾರ.

**86. ತೊಂದರೆಗಳ ನಿವಾರಣೆ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ತೊಂದರೆಯನ್ನು ನಿವಾರಿಸಲು ತನಗೆ ಅವಶ್ಯವೆಂದು ಅಥವಾ ವಿಹಿತವೆಂದು ತೋರುವ ಮತ್ತು ಈ ಅಧಿನಿಯಮದ ಉದ್ದೇಶಗಳಿಗೆ ಅಸಂಗತವಾಗಿಲ್ಲದಂತಹ ಉಪಬಂಧಗಳನ್ನು ಮಾಡಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ನಂತರ, ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಸಾಧ್ಯವಾಗಬಹುದಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**87. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಮತ್ತು ವಿದ್ಯುನ್ಮಾನ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ಮಾಡಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳಲ್ಲಿ ಈ ಮುಂದಿನ ಎಲ್ಲಾ ವಿಷಯಗಳ ಅಥವಾ ಆ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 5ನೇ ಪ್ರಕರಣದ ಮೇರೆಗೆ ಅಂಕಿ ಚಿಹ್ನೆಯ ಮೂಲಕ ಯಾವುದೇ ಮಾಹಿತಿ ಅಥವಾ ವಿಷಯವನ್ನು ಅಧಿಪ್ರಮಾಣಿಸಬಹುದಾದ ರೀತಿ;

(ಬಿ) 6ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ದಾಖಲ್ಮಾಡುವಿಕೆ, ಹೊರಡಿಸುವಿಕೆ, ನೀಡಿಕೆ ಅಥವಾ ಸಂದಾಯ – ಇವನ್ನು ಮಾಡುವ ವಿದ್ಯುನ್ಮಾನ ನಮೂನೆ;

(ಸಿ) 6ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ವಿದ್ಯುನ್ಮಾನ ದಾಖಲೆಗಳನ್ನು ದಾಖಲ್ಮಾಡತಕ್ಕ ಅಥವಾ ನೀಡತಕ್ಕ ರೀತಿ ಮತ್ತು ನಮೂನೆ ಮತ್ತು ಸಂದಾಯದ ವಿಧಾನ;

(ಡಿ) ಅಂಕಿಚಿಹ್ನೆಯ ವಿಧ, 10ನೇ ಪ್ರಕರಣದ ಮೇರೆಗೆ ಅದನ್ನು ಒತ್ತುವ ರೀತಿ ಮತ್ತು ನಮೂನೆ ಇವುಗಳಿಗೆ ಸಂಬಂಧಿಸುವ ವಿಷಯಗಳು;

(ಇ) 16ನೇ ಪ್ರಕರಣದ ಮೇರೆಗೆ ಸುರಕ್ಷಿತ ವಿದ್ಯುನ್ಮಾನ ದಾಖಲೆಯನ್ನು ಮತ್ತು ಸುರಕ್ಷಿತ ಅಂಕಿ ಚಿಹ್ನೆಯನ್ನು ಸೃಜಿಸುವ ಉದ್ದೇಶಕ್ಕಾಗಿ ಇರುವ ಭದ್ರತಾ ಕಾರ್ಯವಿಧಾನ;

(ಎಫ್) 17ನೇ ಪ್ರಕರಣದ ಮೇರೆಗೆ ನಿಯಂತ್ರಕನ, ಉಪ ನಿಯಂತ್ರಕನ ಮತ್ತು ಸಹಾಯಕ ನಿಯಂತ್ರಕರ ಅರ್ಹತೆಗಳು, ಅನುಭವ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಜಿ) 20ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದ ಮೇರೆಗೆ ನಿಯಂತ್ರಕನು ಪಾಲಿಸಬೇಕಾದ ಇತರ ಗುಣ ಮಟ್ಟಗಳು;

(ಹೆಚ್) 21ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅರ್ಜಿದಾರನು ಪೂರೈಸತಕ್ಕ ಅಗತ್ಯತೆಗಳು;

(ಐ) 21ನೇ ಪ್ರಕರಣದ (3)ನೇ ಉಪಪ್ರಕರಣದ (ಎ) ಖಂಡದ ಮೇರೆಗೆ ನೀಡಲಾದ ಲೈಸೆನ್ಸಿನ ಸಿಂಧುತ್ವದ ಅವಧಿ;

(ಜೆ) 22ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸಿಗೆ ಅರ್ಜಿ ಸಲ್ಲಿಸಬಹುದಾದ ನಮೂನೆ;

(ಕೆ) 22ನೇ ಪ್ರಕರಣದ (2)ನೇ ಉಪಪ್ರಕರಣದ (ಸಿ) ಖಂಡದ ಮೇರೆಗೆ ಸಂದಾಯ ಮಾಡಬೇಕಾದ ಫೀಜಿನ ಮೊತ್ತ;

(ಎಲ್) 22ನೇ ಪ್ರಕರಣದ (2)ನೇ ಉಪಪ್ರಕರಣದ (ಡಿ) ಖಂಡದ ಮೇರೆಗೆ ಲೈಸೆನ್ಸಿನ ಅರ್ಜಿಗೆ ಲಗತ್ತಿಸತಕ್ಕ ಇತರ ದಸ್ತಾವೇಜುಗಳು;

(ಎಂ) 23ನೇ ಪ್ರಕರಣದ ಮೇರೆಗೆ ಲೈಸೆನ್ಸಿನ ನವೀಕರಣದ ನಮೂನೆ ಮತ್ತು ಅದಕ್ಕೆ ಸಂದಾಯ ಮಾಡಬೇಕಾದ ಫೀಜು;

(ಎನ್) 35ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಂಕಿ ಚಿಹ್ನೆ ಪ್ರಮಾಣಪತ್ರ ನೀಡಿಕೆಯ ಸಲುವಾಗಿ ಸಲ್ಲಿಸಬಹುದಾದ ಅರ್ಜಿಯ ನಮೂನೆ;

(ಓ) 35ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಅಂಕಿಚಿಹ್ನೆ ಪ್ರಮಾಣಪತ್ರದ ನೀಡಿಕೆಗಾಗಿ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಸಂದಾಯ ಮಾಡಬೇಕಾದ ಫೀಜು;

(ಪಿ) 46ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನ್ಯಾಯನಿರ್ಣಯ ಅಧಿಕಾರಿಯು ವಿಚಾರಣೆಯನ್ನು ನಡೆಸತಕ್ಕ ರೀತಿ;

(ಕ್ಯೂ) 46ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ನ್ಯಾಯ ನಿರ್ಣಯ ಅಧಿಕಾರಿಯು ಹೊಂದಿರತಕ್ಕ ಅರ್ಹತೆ ಮತ್ತು ಅನುಭವ;

(ಆರ್) 52ನೇ ಪ್ರಕರಣದ ಮೇರೆಗೆ ಅಧ್ಯಕ್ಷಾಧಿಕಾರಿಯ ಸಂಬಳ, ಭತ್ಯೆಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಎಸ್) 54ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಧ್ಯಕ್ಷಾಧಿಕಾರಿಯ ದುರ್ನಡತೆ ಅಥವಾ ಅಸಮರ್ಥತೆಯ ಬಗ್ಗೆ ತನಿಖೆ ನಡೆಸುವ ಕಾರ್ಯವಿಧಾನ;

(ಟಿ) 56ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಇತರ ಅಧಿಕಾರಿಗಳ ಮತ್ತು ನೌಕರರ ಸಂಬಳ ಮತ್ತು ಭತ್ಯೆಗಳು ಮತ್ತು ಇತರ ಸೇವಾ ಷರತ್ತುಗಳು;

(ಯು) 57ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ದಾಖಲ್ಮಾಡಬಹುದಾದ ರೀತಿ ಮತ್ತು ಅದರ ಫೀಜು;

(ವಿ) 58ನೇ ಪ್ರಕರಣದ (2)ನೇ ಉಪ ಪ್ರಕರಣದ (ಜಿ) ಖಂಡದ ಮೇರೆಗೆ ನಿಯಮಿಸುವುದು ಅಗತ್ಯವಾಗಿರುವಂಥ ಸಿವಿಲ್ ನ್ಯಾಯಾಲಯದ ಯಾವುದೇ ಇತರ ಅಧಿಕಾರ; ಮತ್ತು

(ಡಬ್ಲ್ಯೂ) ಗೊತ್ತುಪಡಿಸಬೇಕಾದ ಅಥವಾ ಗೊತ್ತುಪಡಿಸಬಹುದಾದ ಯಾವುದೇ ಇತರ ವಿಷಯ.

(3) 1ನೇ ಪ್ರಕರಣದ (4)ನೇ ಉಪ ಪ್ರಕರಣದ (ಎಫ್) ಖಂಡದ ಮೇರೆಗೆ ಕೇಂದ್ರ ಸರ್ಕಾರವು ಮಾಡಿದ ಪ್ರತಿಯೊಂದು ಅಧಿಸೂಚನೆಯನ್ನು ಮತ್ತು ಅದರ ಮೂಲಕ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಆಧಿವೇಶನಗಳ ನಿಕಟೋತ್ತರದಲ್ಲಿ ಬರುವ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ಅಧಿಸೂಚನೆಯಲ್ಲಿ ಅಥವಾ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ಅಧಿಸೂಚನೆಯನ್ನು ಅಥವಾ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ಅಧಿಸೂಚನೆಯು ಅಥವಾ ನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಅಧಿಸೂಚನೆ ಅಥವಾ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**88. ಸಲಹಾ ಸಮಿತಿಯ ರಚನೆ.–** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಪ್ರಾರಂಭದ ನಂತರ ಸಾಧ್ಯವಾಗಬಹುದಾದಷ್ಟು ಬೇಗನೆ, ಸೈಬರ್ ವಿನಿಯಮಗಳ ಸಲಹಾ ಸಮಿತಿ ಎಂದು ಕರೆಯಲಾಗುವ ಒಂದು ಸಮಿತಿಯನ್ನು ರಚಿಸತಕ್ಕದ್ದು.

(2) ಸೈಬರ್ ವಿನಿಯಮಗಳ ಸಲಹಾ ಸಮಿತಿಯು, ಒಬ್ಬ ಅಧ್ಯಕ್ಷನನ್ನು ಮತ್ತು ಪ್ರಧಾನವಾಗಿ ಪರಿಣಾಮಕ್ಕೆ ಒಳಗಾಗಿರುವ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಅಥವಾ ವಸ್ತು ವಿಷಯದ ಬಗ್ಗೆ ವಿಶೇಷ ಜ್ಞಾನ ಹೊಂದಿರುವ ಮತ್ತು ಕೇಂದ್ರ ಸರ್ಕಾರವು, ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಮಂದಿ ಸರ್ಕಾರಿ ಮತ್ತು ಸರ್ಕಾರೇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಸೈಬರ್ ವಿನಿಯಮಗಳ ಸಲಹಾ ಸಮಿತಿಯು,–

(ಎ) ಯಾವುವೇ ನಿಯಮಗಳ ಸಂಬಂಧದಲ್ಲಿ ಸಾಮಾನ್ಯವಾಗಿಯಾಗಲಿ ಅಥವಾ ಅಧಿನಿಯಮಕ್ಕೆ ಸಂಬಂಧಪಟ್ಟ ಯಾವುದೇ ಇತರ ಉದ್ದೇಶಕ್ಕಾಗಲಿ ಕೇಂದ್ರ ಸರ್ಕಾರಕ್ಕೆ;

(ಬಿ) ಈ ಅಧಿನಿಯಮದ ಮೇರೆಗೆ ವಿನಿಯಮಗಳನ್ನು ರೂಪಿಸುವಲ್ಲಿ, ನಿಯಂತ್ರಕನಿಗೆ

– ಸಲಹೆ ನೀಡತಕ್ಕದ್ದು.

(4) ಸಮಿತಿಯ ಸರ್ಕಾರೇತರ ಸದಸ್ಯರಿಗೆ ಕೇಂದ್ರ ಸರ್ಕಾರವು ನಿಗದಿಪಡಿಸಬಹುದಾದಂಥ ಪ್ರಯಾಣ ಭತ್ಯೆ ಮತ್ತು ಇತರ ಭತ್ಯೆಗಳು ಸಂದಾಯವಾಗತಕ್ಕದ್ದು.

**89. ನಿಯಂತ್ರಕನ ವಿನಿಯಮ ರಚನಾಧಿಕಾರ.–** (1) ನಿಯಂತ್ರಕನು, ಸೈಬರ್ ವಿನಿಯಮಗಳ ಸಲಹಾ ಸಮಿತಿಯೊಂದಿಗೆ ಸಮಾಲೋಚನೆ ನಡೆಸಿದ ನಂತರ ಮತ್ತು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು, ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಪಾಲಿಸುವುದಕ್ಕೆ ಈ ಅಧಿನಿಯಮಕ್ಕೆ ಮತ್ತು ಅದರ ಮೇರೆಗೆ ಮಾಡಿದ ನಿಯಮಗಳಿಗೆ ಸಂಗತವಾಗುವ ವಿನಿಯಮಗಳನ್ನು ಮಾಡಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂತಹ ವಿನಿಯಮಗಳು ಈ ಮುಂದಿನ ಎಲ್ಲಾ ವಿಷಯಗಳ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಅವು ಯಾವುವೆಂದರೆ:–

(ಎ) 18ನೇ ಪ್ರಕರಣದ (ಎಂ) ಖಂಡದ ಮೇರೆಗೆ ಪ್ರತಿಯೊಂದು ಪ್ರಮಾಣೀಕರಿಸುವ ಪ್ರಾಧಿಕಾರವು ಬಹಿರಂಗಪಡಿಸುವ ದಾಖಲೆಯನ್ನು ಒಳಗೊಂಡಿರುವ ದತ್ತಾಂಶ ಸಂಗ್ರಹದ ನಿರ್ವಹಣೆಗೆ ಸಂಬಂಧಿಸಿದ ವಿವರಗಳು;

(ಬಿ) 19ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಯಂತ್ರಕನು ಯಾವುದೇ ವಿದೇಶೀ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಯಾವ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು ಮಾನ್ಯತೆ ನೀಡಬಹುದೋ ಆ ಷರತ್ತುಗಳು ಮತ್ತು ನಿರ್ಬಂಧಗಳು;

(ಸಿ) 21ನೇ ಪ್ರಕರಣದ (3)ನೇ ಉಪ ಪ್ರಕರಣದ (ಸಿ) ಖಂಡದ ಮೇರೆಗೆ ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಲೈಸನ್ಸು ನೀಡಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು;

(ಡಿ) 30ನೇ ಪ್ರಕರಣದ (ಡಿ) ಖಂಡದ ಮೇರೆಗೆ ಪ್ರಮಾಣೀಕರಿಸುವ ಪ್ರಾಧಿಕಾರವು ಪಾಲಿಸಬೇಕಾದ ಇತರ ಮಾನಕಗಳು;

(ಇ) 34ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳನ್ನು ಪ್ರಮಾಣೀಕರಿಸುವ ಪ್ರಾಧಿಕಾರವು ಬಹಿರಂಗಪಡಿಸತಕ್ಕ ರೀತಿ;

(ಎಫ್) 35ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅರ್ಜಿಗೆ ಲಗತ್ತಿಸತಕ್ಕ ವಿವರಪತ್ರದ ವಿವರಗಳು;

(ಜಿ) 42ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ವಂತಿಗೆದಾರನು ಖಾಸಗಿ ಕೀಲಿಯನ್ನು ಹೊಂದಾಣಿಕೆ ಮಾಡಿಕೊಳ್ಳುವುದನ್ನು ತಿಳಿಸತಕ್ಕ ರೀತಿ.

(3) ಈ ಅಧಿನಿಯಮದ ಮೇರೆಗೆ ರಚಿಸಲಾದ ಪ್ರತಿಯೊಂದು ವಿನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದಲ್ಲಿ ಬರುವ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ವಿನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ವಿನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ ಆ ವಿನಿಯಮವು ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ, ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ವಿನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**90. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳು ಈ ಮುಂದಿನ ಎಲ್ಲಾ ವಿಷಯಗಳ ಅಥವಾ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಅವು ಯಾವುವೆಂದರೆ,–

(ಎ) 6ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ದಾಖಲು ಮಾಡುವಿಕೆ, ನೀಡುವಿಕೆ, ಸ್ವೀಕೃತಿ ನೀಡುವಿಕೆ ಅಥವಾ ಸಂದಾಯವನ್ನು ಮಾಡಬಹುದಾದ ವಿದ್ಯುನ್ಮಾನ ನಮೂನೆ;

(ಬಿ) 6ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳು;

(ಸಿ) ರಾಜ್ಯ ಸರ್ಕಾರವು ನಿಯಮಗಳ ಮೂಲಕ ಅಗತ್ಯವಾಗಿ ಉಪಬಂಧಿಸಬೇಕಾದ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲವು ಎರಡೂ ಸದನಗಳನ್ನು ಒಳಗೊಂಡಿದ್ದರೆ, ಆ ಪ್ರತಿಯೊಂದು ಸದನದ ಮುಂದೆ ಅಥವಾ ಅಂತಹ ವಿಧಾನ ಮಂಡಲವು ಒಂದು ಸದನವನ್ನು ಹೊಂದಿದ್ದರೆ, ಆ ಸದನದ ಮುಂದೆ ಮಂಡಿಸತಕ್ಕದ್ದು.

**91. 1860ರ ಅಧಿನಿಯಮ 45ರ ತಿದ್ದುಪಡಿ.–** ಭಾರತ ದಂಡ ಸಂಹಿತೆ, 1860 (1860ರ 45)ನ್ನು ಈ ಅಧಿನಿಯಮದ ಮೊದಲ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕದ್ದು.

**92. 1872ರ ಅಧಿನಿಯಮ 1ರ ತಿದ್ದುಪಡಿ.–** ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ನ್ನು ಈ ಅಧಿನಿಯಮದ ಎರಡನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕದ್ದು.

**93. 1891ರ ಅಧಿನಿಯಮ 18ರ ತಿದ್ದುಪಡಿ.–** ಬ್ಯಾಂಕರ್ ಪುಸ್ತಕ ಸಾಕ್ಷ್ಯ ಅಧಿನಿಯಮ, 1891 (1891ರ 18)ನ್ನು ಈ ಅಧಿನಿಯಮದ ಮೂರನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕದ್ದು.

**94. 1934ರ ಅಧಿನಿಯಮ 2ರ ತಿದ್ದುಪಡಿ.–** ಭಾರತದ ರಿಜರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ನ್ನು ಈ ಅಧಿನಿಯಮದ ನಾಲ್ಕನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ತಿದ್ದುಪಡಿ ಮಾಡತಕ್ಕದ್ದು.

## ಮೊದಲನೇ ಅನುಸೂಚಿ

**(91ನೇ ಪ್ರಕರಣ ನೋಡಿ)**

**ಭಾರತ ದಂಡ ಸಂಹಿತೆಗೆ ತಿದ್ದುಪಡಿಗಳು**

**(1860ರ 45)**

(1) 29ನೇ ಪ್ರಕರಣದ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"29ಎ. ವಿದ್ಯುನ್ಮಾನ ದಾಖಲೆ.–** "ವಿದ್ಯುನ್ಮಾನ ದಾಖಲೆ" ಎಂಬ ಪದಗಳು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000–ಇದರ 2ನೇ ಪ್ರಕರಣದ (1)ನೇ ಉಪ ಪ್ರಕರಣದ (ಟಿ) ಖಂಡದಲ್ಲಿ ಅವುಗಳಿಗೆ ಗೊತ್ತುಪಡಿಸಿದ ಅರ್ಥವನ್ನೇ ಹೊಂದಿರತಕ್ಕದ್ದು."

(2) 167ನೇ ಪ್ರಕರಣದಲ್ಲಿ, "ಯಾವ ಲೋಕ ನೌಕರನಿಗೆ, ಯಾವುದೇ ದಸ್ತಾವೇಜಿನ ತಯಾರಿಕೆ ಅಥವಾ ಭಾಷಾಂತರದ ಹೊಣೆಯನ್ನು ವಹಿಸಿಕೊಡಲಾಗಿದೆಯೋ ಅಂಥ ಲೋಕ ನೌಕರನು, ಆ ದಸ್ತಾವೇಜನ್ನು ರೂಪಿಸಿದರೆ ಅಥವಾ ಭಾಷಾಂತರಿಸಿದರೆ" ಎಂಬ ಪದಗಳಿಗೆ ಬದಲಾಗಿ, "ಯಾವ ಲೋಕ ನೌಕರನಿಗೆ, ಯಾವುದೇ ದಸ್ತಾವೇಜಿನ ಅಥವಾ ವಿದ್ಯುನ್ಮಾನ ದಾಖಲೆಯ ತಯಾರಿಕೆ ಅಥವಾ ಭಾಷಾಂತರದ ಹೊಣೆಯನ್ನು ವಹಿಸಿಕೊಡಲಾಗಿದೆಯೋ ಅಂಥ ಲೋಕ ನೌಕರನು ಆ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ರೂಪಿಸಿದರೆ, ತಯಾರಿಸಿದರೆ ಅಥವಾ ಭಾಷಾಂತರಿಸಿದರೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(3) 172ನೇ ಪ್ರಕರಣದಲ್ಲಿ "ನ್ಯಾಯಾಲಯದಲ್ಲಿ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದು" ಎಂಬ ಪದಗಳಿಗೆ ಬದಲಾಗಿ "ನ್ಯಾಯಾಲಯದಲ್ಲಿ ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಹಾಜರುಪಡಿಸುವುದು" ಎಂಬ ಪದಗಳನ್ನು ಸೇರಿಸತಕ್ಕದ್ದು.

(4) 173ನೇ ಪ್ರಕರಣದಲ್ಲಿ, "ನ್ಯಾಯಾಲಯದಲ್ಲಿ ಒಂದು ದಸ್ತಾವೇಜನ್ನು ಹಾಜರುಪಡಿಸುವುದು" ಎಂಬ ಪದಗಳಿಗೆ ಬದಲಾಗಿ, "ನ್ಯಾಯಾಲಯದಲ್ಲಿ ಒಂದು ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಹಾಜರುಪಡಿಸುವುದು" ಎಂಬ ಪದಗಳನ್ನು ಸೇರಿಸತಕ್ಕದ್ದು.

(5) 175ನೇ ಪ್ರಕರಣದಲ್ಲಿ, "ದಸ್ತಾವೇಜು" ಎಂಬ ಪದವು ಬರುವ ಎರಡೂ ಕಡೆಗಳಲ್ಲಿ, "ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(6) 192ನೇ ಪ್ರಕರಣದಲ್ಲಿ, "ಯಾವುದೇ ಪುಸ್ತಕದಲ್ಲಿ ಅಥವಾ ದಾಖಲೆಯಲ್ಲಿ ಯಾವುದೇ ಸುಳ್ಳು ನಮೂದನೆಯನ್ನು ಮಾಡಿದರೆ ಅಥವಾ ಸುಳ್ಳು ಹೇಳಿಕೆ ಇರುವ ಯಾವುದೇ ದಸ್ತಾವೇಜನ್ನು ತಯಾರಿಸಿದರೆ" ಎಂಬ ಪದಗಳಿಗೆ ಬದಲಾಗಿ, "ಯಾವುದೇ ಪುಸ್ತಕದಲ್ಲಿ ಅಥವಾ ಯಾವುದೇ ದಾಖಲೆಯಲ್ಲಿ ಅಥವಾ ವಿದ್ಯುನ್ಮಾನ ದಾಖಲೆಯಲ್ಲಿ ಯಾವುದೇ ಸುಳ್ಳು ನಮೂದನೆಯನ್ನು ಮಾಡಿದರೆ ಅಥವಾ ಸುಳ್ಳು ಹೇಳಿಕೆ ಇರುವ ಯಾವುದೇ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ತಯಾರಿಸಿದರೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(7) 204ನೇ ಪ್ರಕರಣದಲ್ಲಿ, "ದಸ್ತಾವೇಜು" ಎಂಬ ಪದವು ಬಂದಿರುವ ಎರಡೂ ಕಡೆಗಳಲ್ಲಿ, ಅದಕ್ಕೆ ಬದಲಾಗಿ "ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(8) 463ನೇ ಪ್ರಕರಣದಲ್ಲಿ, "ಯಾರೇ ವ್ಯಕ್ತಿಯು ನಷ್ಟ ಅಥವಾ ಕ್ಷತಿಯನ್ನು ಉಂಟು ಮಾಡುವ ಉದ್ದೇಶದಿಂದ ಯಾವುವೇ ಸುಳ್ಳು ದಸ್ತಾವೇಜುಗಳನ್ನು ಅಥವಾ ಒಂದು ದಸ್ತಾವೇಜಿನ ಭಾಗವನ್ನು ಸೃಜಿಸಿದರೆ" ಎಂಬ ಪದಗಳಿಗೆ ಬದಲಾಗಿ, "ಯಾರೇ ವ್ಯಕ್ತಿಯು ನಷ್ಟ ಅಥವಾ ಕ್ಷತಿಯನ್ನು ಉಂಟು ಮಾಡುವ ಉದ್ದೇಶದಿಂದ ಯಾವುವೇ ಸುಳ್ಳು ದಸ್ತಾವೇಜುಗಳನ್ನು ಅಥವಾ ಸುಳ್ಳು ವಿದ್ಯುನ್ಮಾನ ದಾಖಲೆಯನ್ನು ಅಥವಾ ಯಾವುದೇ ದಸ್ತಾವೇಜಿನ ಅಥವಾ ವಿದ್ಯುನ್ಮಾನ ದಾಖಲೆಯ ಭಾಗವನ್ನು ಸೃಜಿಸಿದರೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(9) 464ನೇ ಪ್ರಕರಣದಲ್ಲಿ,–

(ಎ) "ಒಬ್ಬ ವ್ಯಕ್ತಿಯು ಸುಳ್ಳು ದಸ್ತಾವೇಜನ್ನು ಸೃಜಿಸಿದ್ದಾನೆ ಎಂದು ಹೇಳಲಾಗುತ್ತದೆ" ಎಂಬ ಪದಗಳಿಂದ ಮುಕ್ತಾಯವಾಗುವ ಮತ್ತು "ಯಾವುದೇ ದಸ್ತಾವೇಜಿನ ಒಳಾಂಶಗಳನ್ನಾಗಲಿ ಅಥವಾ ವ್ಯತ್ಯಾಸದ ಸ್ವರೂಪವನ್ನಾಗಲಿ ವಂಚನೆ ಮಾಡಿರುವ ಕಾರಣದಿಂದ ಅವನಿಗೆ ತಿಳಿದಿಲ್ಲವೆಂದು" ಎಂಬ ಪದಗಳಿಂದ ಆರಂಭವಾಗುವ ವಾಕ್ಯ ಭಾಗಕ್ಕೆ ಬದಲಾಗಿ ಈ ಮುಂದಿನ ವಾಕ್ಯ ಭಾಗವನ್ನು ಸೇರಿಸತಕ್ಕದ್ದು, ಎಂದರೆ:–

"ಯಾರಿಂದ ಅಥವಾ ಯಾರ ಅಧಿಕಾರದಿಂದ ರಚಿಸಲಾಗಿಲ್ಲವೆಂದು ಅಥವಾ ಅದಕ್ಕೆ ಸಹಿ ಮಾಡಲಾಗಿಲ್ಲವೆಂದು, ಮೊಹರು ಮಾಡಿಲ್ಲವೆಂದು, ಬರೆದುಕೊಡಲಾಗಿಲ್ಲವೆಂದು ಅಥವಾ ಅಂಟಿಸಿಲ್ಲವೆಂದು ತಾನು ತಿಳಿದಿರುವನೋ ಆ ವ್ಯಕ್ತಿಯಿಂದ ಅಥವಾ ಅವನ ಪ್ರಾಧಿಕಾರದಿಂದ ಅಂಥ ದಸ್ತಾವೇಜನ್ನು ಅಥವಾ ಅದರ ಯಾವುದೇ ಭಾಗವನ್ನು, ವಿದ್ಯುನ್ಮಾನ ದಾಖಲೆಯನ್ನು ಅಥವಾ ಅಂಕಿ ಚಿಹ್ನೆಯನ್ನು ರಚಿಸಲಾಗಿದೆ, ಅದಕ್ಕೆ ಸಹಿ ಹಾಕಲಾಗಿದೆ, ಮೊಹರು ಹಾಕಲಾಗಿದೆ, ಬರೆದುಕೊಡಲಾಗಿದೆ, ರವಾನಿಸಲಾಗಿದೆ ಅಥವಾ ಅಂಟಿಸಲಾಗಿದೆ, ಎಂದರೆ,–

**ಮೊದಲನೆಯದಾಗಿ**–

(ಎ) ದಸ್ತಾವೇಜನ್ನು ಅಥವಾ ಅದರ ಯಾವುದೇ ಭಾಗವನ್ನು ಸೃಜಿಸುವ, ಸಹಿ ಹಾಕುವ, ಮೊಹರು ಹಾಕುವ ಅಥವಾ ಬರೆದುಕೊಡುವ;

(ಬಿ) ಯಾವುದೇ ವಿದ್ಯುನ್ಮಾನ ದಾಖಲೆಯನ್ನು ಅಥವಾ ಯಾವುದೇ ವಿದ್ಯುನ್ಮಾನ ದಾಖಲೆಯ ಭಾಗವನ್ನು ಸೃಜಿಸುವ ಅಥವಾ ರವಾನಿಸುವ;

(ಸಿ) ಯಾವುದೇ ವಿದ್ಯುನ್ಮಾನ ದಾಖಲೆಯ ಮೇಲೆ ಯಾವುದೇ ಅಂಕಿ ಚಿಹ್ನೆ ಹಾಕುವ;

(ಡಿ) ದಸ್ತಾವೇಜನ್ನು ಬರೆದುಕೊಡುವುದನ್ನು ಅಥವಾ ಅಂಕಿ ಚಿಹ್ನೆಯ ಪ್ರಾಮಾಣಿಕತೆಯನ್ನು ಸೂಚಿಸುವ ಗುರುತನ್ನು ಮಾಡುವ; ಅಥವಾ

**ಎರಡನೆಯದಾಗಿ** – ಒಂದು ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ತಾನು ಅಥವಾ ಇತರ ಯಾರೇ ವ್ಯಕ್ತಿಯು ಸೃಜಿಸಿದ ಅಥವಾ ಬರೆದುಕೊಟ್ಟ ಅಥವಾ ಅಂಕಿ ಚಿಹ್ನೆಯನ್ನು ಮಾಡಿದ ನಂತರ ಅದನ್ನು ವ್ಯತ್ಯಾಸಗೊಳಿಸುವ ಕಾಲದಲ್ಲಿ ಅಂಥ ಇತರ ವ್ಯಕ್ತಿಯು ಬದುಕಿರಲಿ, ಸತ್ತಿರಲಿ, ರದ್ದು ಮಾಡುವ ಮೂಲಕ ಅಥವಾ ಅನ್ಯಥಾ ಆ ದಸ್ತಾವೇಜಿನ ಯಾವುದೇ ಮುಖ್ಯ ಭಾಗವನ್ನು ವಿಧಿಬದ್ಧವಾದ ಪ್ರಾಧಿಕಾರವಿಲ್ಲದೆ ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ವ್ಯತ್ಯಾಸಗೊಳಿಸುವ; ಅಥವಾ

**ಮೂರನೆಯದಾಗಿ** – ದಸ್ತಾವೇಜಿನ ಅಥವಾ ವಿದ್ಯುನ್ಮಾನ ದಾಖಲೆಯ ಒಳಾಂಶವನ್ನಾಗಲಿ ಅಥವಾ ವ್ಯತ್ಯಾಸದ ಸ್ವರೂಪವನ್ನಾಗಲಿ ಒಬ್ಬ ವ್ಯಕ್ತಿಯು ತನ್ನ ಅಸ್ವಸ್ಥ ಚಿತ್ತದ ಅಥವಾ ಅಮಲಿನ ಕಾರಣದಿಂದಾಗಿ ತಿಳಿಯಲಾರನೆಂದು ಅಥವಾ ಅವನಿಗೆ ವಂಚನೆ ಮಾಡಿರುವ ಕಾರಣದಿಂದ ಅವನಿಗೆ ತಿಳಿದಿಲ್ಲವೆಂದು ತಿಳಿದೂ ಅಪ್ರಾಮಾಣಿಕವಾಗಿ ಅಥವಾ ಮೋಸದಿಂದ ಅಂಥ ವ್ಯಕ್ತಿಯು ಆ ದಸ್ತಾವೇಜಿಗೆ ಅಥವಾ ವಿದ್ಯುನ್ಮಾನ ದಾಖಲೆಗೆ ಸಹಿ ಹಾಕುವಂತೆ ಅಥವಾ ವಿದ್ಯುನ್ಮಾನ ದಾಖಲೆಗೆ ತನ್ನ ಅಂಕಿ ಚಿಹ್ನೆ ಹಾಕುವಂತೆ, ಮೊಹರು ಹಾಕುವಂತೆ, ಅದನ್ನು ಬರೆದುಕೊಡುವಂತೆ ಅಥವಾ ವ್ಯತ್ಯಸ್ಥಗೊಳಿಸುವಂತೆ ಮಾಡುವ ವ್ಯಕ್ತಿಯು ಸುಳ್ಳು ದಸ್ತಾವೇಜನ್ನು ಸೃಜಿಸಿದ್ದಾನೆಂದು ಹೇಳಲಾಗುತ್ತದೆ";

(ಬಿ) 2ನೇ ವಿವರಣೆಯ ನಂತರ, ಈ ಮುಂದಿನ ವಿವರಣೆಯನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:–

**ವಿವರಣೆ 3**.– ಈ ಪ್ರಕರಣದ ಉದ್ದೇಶಗಳಿಗಾಗಿ, "ಅಂಕಿ ಚಿಹ್ನೆಯನ್ನು ಸೇರಿಸುವುದು" ಎಂಬ ಪದಾವಳಿಯು, ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000ದ 2ನೇ ಪ್ರಕರಣದ (1)ನೇ ಉಪ ಪ್ರಕರಣದ (ಡಿ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಅದು ಹೊಂದಿರತಕ್ಕದ್ದು.

(10) 466ನೇ ಪ್ರಕರಣದಲ್ಲಿ,–

(ಎ) "ದಸ್ತಾವೇಜನ್ನು ಸುಳ್ಳು ಸೃಷ್ಟನೆ ಮಾಡುವ ವ್ಯಕ್ತಿಯು" ಎಂಬ ಪದಗಳ ಬದಲಿಗೆ, "ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಸುಳ್ಳು ಸೃಷ್ಟನೆ ಮಾಡುವ ವ್ಯಕ್ತಿಯು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಈ ಮುಂದಿನ ವಿವರಣೆಯನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ:–

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ, "ರಿಜಿಸ್ಟರು" ಎಂಬುದು "ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000" ಇದರ 2ನೇ ಪ್ರಕರಣದ (1)ನೇ ಉಪ ಪ್ರಕರಣದ (ಆರ್) ಖಂಡದಲ್ಲಿ ವಿವರಿಸಲಾದಂತೆ ವಿದ್ಯುನ್ಮಾನ ನಮೂನೆಯಲ್ಲಿ ಇಟ್ಟುಕೊಂಡು ಬಂದಿರುವ ಯಾವುವೇ ನಮೂದನೆಗಳ ಯಾವುದೇ ಪಟ್ಟಿ, ದತ್ತಾಂಶ ಅಥವಾ ದಾಖಲೆಯನ್ನು ಒಳಗೊಂಡಿರುತ್ತದೆ.

(11) 468ನೇ ಪ್ರಕರಣದಲ್ಲಿ, "ಸುಳ್ಳು ಸೃಷ್ಟನೆಯ ದಸ್ತಾವೇಜನ್ನು" ಎಂಬ ಪದಗಳಿಗೆ ಬದಲಾಗಿ "ಸುಳ್ಳು ಸೃಷ್ಟನೆಯ ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(12) 469ನೇ ಪ್ರಕರಣದಲ್ಲಿ, "ಸುಳ್ಳು ಸೃಷ್ಟನೆಯ ದಸ್ತಾವೇಜನ್ನು ಉಪಯೋಗಿಸಬೇಕೆಂದು ಉದ್ದೇಶಿಸಿ" ಎಂಬ ಪದಗಳಿಗೆ ಬದಲಾಗಿ "ಸುಳ್ಳು ಸೃಷ್ಟನೆಯ ದಸ್ತಾವೇಜನ್ನು ಅಥವಾ ವಿದ್ಯುನ್ಮಾನ ದಾಖಲೆಯನ್ನು ಉಪಯೋಗಿಸಬೇಕೆಂದು ಉದ್ದೇಶಿಸಿ" ಎಂಬ ಪದಗಳನ್ನು ಸೇರಿಸತಕ್ಕದ್ದು.

(13) 470ನೇ ಪ್ರಕರಣದಲ್ಲಿ, "ದಸ್ತಾವೇಜು" ಎಂಬ ಪದವು ಬಂದಿರುವ ಎರಡೂ ಕಡೆಗಳಲ್ಲಿ, "ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(14) 471ನೇ ಪ್ರಕರಣದಲ್ಲಿ, "ದಸ್ತಾವೇಜು" ಎಂಬ ಪದವು ಬಂದಿರುವ ಕಡೆಗಳಲ್ಲಿ, "ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(15) 474ನೇ ಪ್ರಕರಣದಲ್ಲಿ, "ಒಂದು ದಸ್ತಾವೇಜು ಸುಳ್ಳು ಸೃಷ್ಟನೆ ಎಂದು ತಿಳಿದಿದ್ದೂ ಸ್ವಾಧೀನದಲ್ಲಿಟ್ಟುಕೊಂಡ" ಎಂದು ಆರಂಭಗೊಂಡು "466ನೇ ಪ್ರಕರಣದಲ್ಲಿ ವಿವರಿಸಿದವುಗಳಲ್ಲಿ ಒಂದಾದ ದಸ್ತಾವೇಜು" ಎಂಬ ಪದಗಳ ಬದಲಿಗೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

ಯಾರೇ ವ್ಯಕ್ತಿಯು ಯಾವುದೇ ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆಯು ಸುಳ್ಳು ಸೃಷ್ಟನೆ ಎಂದು ತಿಳಿದಿದ್ದೂ ಮತ್ತು ಅದನ್ನು ನೈಜವೆಂದು ಮೋಸದಿಂದ ಅಥವಾ ಅಪ್ರಾಮಾಣಿಕವಾಗಿ ಬಳಸುವ ಉದ್ದೇಶದಿಂದ ಸ್ವಾಧೀನದಲ್ಲಿಟ್ಟುಕೊಂಡರೆ ಆ "ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆಯು ಈ ಸಂಹಿತೆಯ 466ನೇ ಪ್ರಕರಣದಲ್ಲಿ ನಮೂದಿಸಿದ ವಿವರಣೆಗಳಲ್ಲಿ ಒಂದಾಗಿದ್ದರೆ".

(16) 476ನೇ ಪ್ರಕರಣದಲ್ಲಿರುವ, "ಯಾವುದೇ ದಸ್ತಾವೇಜು" ಎಂಬ ಪದಗಳಿಗೆ ಬದಲಾಗಿ "ಯಾವುದೇ ದಸ್ತಾವೇಜು ಅಥವಾ ವಿದ್ಯುನ್ಮಾನ ದಾಖಲೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(17) 477ಎ ಪ್ರಕರಣದಲ್ಲಿ, "ಪುಸ್ತಕ, ಕಾಗದ, ಬರಹ" ಎಂಬ ಪದಗಳು ಬಂದಿರುವ ಎರಡೂ ಕಡೆಗಳಲ್ಲಿ ಅದಕ್ಕೆ ಬದಲಾಗಿ "ಪುಸ್ತಕ, ವಿದ್ಯುನ್ಮಾನ ದಾಖಲೆ, ಕಾಗದ, ಬರಹ" ಎಂಬ ಪದಗಳನ್ನು ಸೇರಿಸತಕ್ಕದ್ದು.

## ಎರಡನೇ ಅನುಸೂಚಿ

**(92ನೇ ಪ್ರಕರಣ ನೋಡಿ)**

**ಭಾರತ ಸಾಕ್ಷ್ಯ ಅಧಿನಿಯಮ, 1872ಕ್ಕೆ ತಿದ್ದುಪಡಿಗಳು**

**(1872ರ 1)**

**1.** 3ನೇ ಪ್ರಕರಣದಲ್ಲಿ,–

(ಎ) "ಸಾಕ್ಷ್ಯ"ದ ಪರಿಭಾಷೆಯಲ್ಲಿ, "ನ್ಯಾಯಾಲಯದ ಪರಿಶೀಲನೆಗಾಗಿ ಹಾಜರುಪಡಿಸಲಾದ ಎಲ್ಲಾ ದಸ್ತಾವೇಜುಗಳು", ಎಂಬ ಪದಗಳಿಗೆ ಬದಲಾಗಿ "ನ್ಯಾಯಾಲಯದ ಪರಿಶೀಲನೆಗಾಗಿ ಹಾಜರುಪಡಿಸಲಾದ ವಿದ್ಯುನ್ಮಾನ ದಾಖಲೆಗಳನ್ನು ಒಳಗೊಂಡಿರುವ ಎಲ್ಲಾ ದಸ್ತಾವೇಜುಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) "ಭಾರತ"ದ ಪರಿಭಾಷೆಯ ನಂತರ, ಈ ಮುಂದಿನವುಗಳನ್ನು ಸೇರಿಸತಕ್ಕದ್ದು, ಎಂದರೆ:–

"ಪ್ರಮಾಣೀಕರಿಸುವ ಪ್ರಾಧಿಕಾರ", "ಅಂಕಿ ಚಿಹ್ನೆ", "ಅಂಕಿ ಚಿಹ್ನೆ ಪ್ರಮಾಣಪತ್ರ", "ವಿದ್ಯುನ್ಮಾನ ನಮೂನೆ", "ವಿದ್ಯುನ್ಮಾನ ದಾಖಲೆಗಳು", "ಮಾಹಿತಿ", "ಸುರಕ್ಷಿತ ವಿದ್ಯುನ್ಮಾನ ದಾಖಲೆ", "ಸುರಕ್ಷಿತ ಅಂಕಿ ಚಿಹ್ನೆ" ಮತ್ತು "ವಂತಿಗೆದಾರ" ಎಂಬ ಪದಾವಳಿಗಳು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 ಇದರಲ್ಲಿ ಅನುಕ್ರಮವಾಗಿ ಅವುಗಳಿಗೆ ಕೊಟ್ಟಿರುವ ಅರ್ಥಗಳನ್ನೇ ಹೊಂದಿರತಕ್ಕದ್ದು.

**2.** 17ನೇ ಪ್ರಕರಣದಲ್ಲಿ, "ಮೌಖಿಕ ಅಥವಾ ದಸ್ತಾವೇಜೀಯ" ಎಂಬ ಪದಗಳಿಗೆ ಬದಲಾಗಿ, "ಮೌಖಿಕ ಅಥವಾ ದಸ್ತಾವೇಜೀಯ ಅಥವಾ ವಿದ್ಯುನ್ಮಾನ ನಮೂನೆಯಲ್ಲಿ ಒಳಗೊಂಡಿರುವ" ಎಂಬ ಪದಗಳನ್ನು ಸೇರಿಸತಕ್ಕದ್ದು.

**3.** 22ನೇ ಪ್ರಕರಣದ ನಂತರ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"22ಎ. ವಿದ್ಯುನ್ಮಾನ ದಾಖಲೆಗಳ ಒಳಾಂಶಗಳ ಬಗ್ಗೆ ಮೌಖಿಕ ಒಪ್ಪಿಗೆಯು ಸುಸಂಬದ್ಧವಾಗುವ ಸಂದರ್ಭ.–** ಹಾಜರುಪಡಿಸಲಾದ ವಿದ್ಯುನ್ಮಾನ ದಾಖಲೆಗಳ ನೈಜತೆಯನ್ನು ಪ್ರಶ್ನಿಸಿದ ಹೊರತು ವಿದ್ಯುನ್ಮಾನ ದಾಖಲೆಗಳ ಒಳಾಂಶಗಳಿಗೆ ಸಂಬಂಧಿಸಿದಂತೆ ಮೌಖಿಕ ಒಪ್ಪಿಗೆಗಳು ಸುಸಂಬದ್ಧವಲ್ಲ".

**4.** 34ನೇ ಪ್ರಕರಣದಲ್ಲಿ "ಲೆಕ್ಕ ಪುಸ್ತಕಗಳಲ್ಲಿನ ನಮೂದುಗಳು" ಎಂಬ ಪದಗಳಿಗೆ ಬದಲಾಗಿ "ವಿದ್ಯುನ್ಮಾನ ನಮೂನೆಯಲ್ಲಿ ಇಟ್ಟುಕೊಂಡು ಬಂದ ನಮೂದುಗಳೂ ಸೇರಿದಂತೆ ಲೆಕ್ಕ ಪುಸ್ತಕಗಳಲ್ಲಿನ ನಮೂದುಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

**5.** 35ನೇ ಪ್ರಕರಣದಲ್ಲಿ "ದಾಖಲೆ" ಎಂಬ ಪದವು ಬರುವ ಎರಡೂ ಕಡೆಗಳಲ್ಲಿ, ಅದಕ್ಕೆ ಬದಲಾಗಿ "ದಾಖಲೆ ಅಥವಾ ವಿದ್ಯುನ್ಮಾನ ದಾಖಲೆ" ಎಂಬ ಪದವನ್ನು ಸೇರಿಸತಕ್ಕದ್ದು.

**6.** 39ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"39. ಹೇಳಿಕೆಯು, ಸಂಭಾಷಣೆಯ, ದಸ್ತಾವೇಜಿನ, ವಿದ್ಯುನ್ಮಾನ ದಾಖಲೆಯ, ಪುಸ್ತಕದ ಅಥವಾ ಪತ್ರಗಳ ಅಥವಾ ಕಾಗದ ಪತ್ರಗಳ ಸರಣಿಯ ಭಾಗವಾಗಿರುವಾಗ ಯಾವ ಸಾಕ್ಷ್ಯವನ್ನು ಕೊಡುವುದು.–** ಯಾವ ಹೇಳಿಕೆಯ ಬಗ್ಗೆ ಸಾಕ್ಷ್ಯವನ್ನು ನೀಡಲಾಗಿದೆಯೋ, ಆ ಯಾವುದೇ ಹೇಳಿಕೆಯು ಅದಕ್ಕಿಂತ ಒಂದು ದೀರ್ಘವಾದ ಹೇಳಿಕೆಯ ಅಥವಾ ಒಂದು ಸಂಭಾಷಣೆಯ ಅಥವಾ ಒಂದು ಬಿಡಿ ದಸ್ತಾವೇಜಿನ ಭಾಗವಾಗಿರುವಾಗ ಅಥವಾ ಒಂದು ಪುಸ್ತಕದ ಭಾಗವಾಗಿರುವ ದಸ್ತಾವೇಜಿನಲ್ಲಿ ಒಳಗೊಂಡಿರುವಾಗ ಅಥವಾ ವಿದ್ಯುನ್ಮಾನ ದಾಖಲೆಯ ಭಾಗದಲ್ಲಿ ಒಳಗೊಂಡಿರುವಾಗ ಅಥವಾ ಪುಸ್ತಕದ ಅಥವಾ ಸಂಬಂಧವುಳ್ಳ ಪತ್ರಗಳ ಅಥವಾ ಕಾಗದ ಪತ್ರಗಳ ಸರಣಿಯ ಭಾಗವಾಗಿರುವ ಒಂದು ದಸ್ತಾವೇಜಿನಲ್ಲಿ ಇರುವ ಹೇಳಿಕೆಯಾದಾಗ ವಿಶಿಷ್ಟ ಮೊಕದ್ದಮೆಯಲ್ಲಿ ಹೇಳಿಕೆಯ ಸ್ವರೂಪವನ್ನು ಮತ್ತು ಪರಿಣಾಮವನ್ನು ಮತ್ತು ಅದನ್ನು ಮಾಡಿದ ವಿದ್ಯಮಾನವನ್ನು ಪೂರ್ಣವಾಗಿ ತಿಳಿದುಕೊಳ್ಳಲು ಅವಶ್ಯವೆಂದು ನ್ಯಾಯಾಲಯವು ಪರ್ಯಾಲೋಚಿಸುವಷ್ಟರ ಮಟ್ಟಿಗೆ ಮತ್ತು ಅದಕ್ಕಿಂತ ಹೆಚ್ಚಾಗದಂತೆ ಅಂಥ ಹೇಳಿಕೆಯ, ಸಂಭಾಷಣೆಯ, ದಸ್ತಾವೇಜಿನ, ವಿದ್ಯುನ್ಮಾನ ದಾಖಲೆಯ, ಪುಸ್ತಕದ ಅಥವಾ ಪತ್ರಗಳ ಅಥವಾ ಕಾಗದ ಪತ್ರಗಳ ಸರಣಿಯ ಸಾಕ್ಷ್ಯವನ್ನು ಕೊಡತಕ್ಕದ್ದು."

**7.** 47ನೇ ಪ್ರಕರಣದ ನಂತರ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"47ಎ. ಅಂಕಿ ಚಿಹ್ನೆಯು ಎಲ್ಲಿ ಸುಸಂಬದ್ಧ ಎಂಬ ಬಗ್ಗೆ ಅಭಿಪ್ರಾಯ.–** ಯಾರೇ ವ್ಯಕ್ತಿಯು ಅಂಕಿ ಚಿಹ್ನೆಯ ಬಗ್ಗೆ ನ್ಯಾಯಾಲಯವು ಅಭಿಪ್ರಾಯವನ್ನು ರೂಪಿಸಿಕೊಳ್ಳಬೇಕಾದಾಗ, ಅಂಕಿ ಚಿಹ್ನೆ ಪ್ರಮಾಣಪತ್ರವನ್ನು ನೀಡಿದ ಪ್ರಮಾಣೀಕರಿಸುವ ಪ್ರಾಧಿಕಾರದ ಅಭಿಪ್ರಾಯವು ಸುಸಂಬದ್ಧ ಸಂಗತಿಯಾಗಿರುತ್ತದೆ".

**8.** 59ನೇ ಪ್ರಕರಣದಲ್ಲಿ "ದಸ್ತಾವೇಜುಗಳ ಒಳಾಂಶಗಳು" ಎಂಬ ಪದಗಳಿಗೆ ಬದಲಾಗಿ "ದಸ್ತಾವೇಜುಗಳ ಅಥವಾ ವಿದ್ಯುನ್ಮಾನ ದಾಖಲೆಗಳ ಒಳಾಂಶಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

**9.** 65ನೇ ಪ್ರಕರಣದ ನಂತರ, ಈ ಮುಂದಿನ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:–

**"65ಎ. ವಿದ್ಯುನ್ಮಾನ ದಾಖಲೆಗೆ ಸಂಬಂಧಿಸಿದ ಸಾಕ್ಷ್ಯದ ಬಗೆಗಿನ ವಿಶೇಷ ಉಪಬಂಧಗಳು.–** ವಿದ್ಯುನ್ಮಾನ ದಾಖಲೆಗಳ ಒಳಾಂಶಗಳನ್ನು 65ಬಿ ಪ್ರಕರಣದ ಉಪಬಂಧಗಳಿಗನುಸಾರ ರುಜುವಾತುಪಡಿಸಬಹುದು.

**65ಬಿ. ವಿದ್ಯುನ್ಮಾನ ದಾಖಲೆಗಳ ಅಂಗೀಕಾರಾರ್ಹತೆ.–** (1) ಈ ಅಧಿನಿಯಮದಲ್ಲಿ ಒಳಗೊಂಡಿರುವುದು ಏನೇ ಇದ್ದರೂ, ಕಾಗದದ ಮೇಲೆ ಮುದ್ರಿತವಾದ, ಗಣಕ ಯಂತ್ರದಿಂದ ಉತ್ಪಾದಿಸಲಾದ, ದೃಷ್ಟಿಗೋಚರ ಅಥವಾ ಕಾಂತೀಯ ಮಾಧ್ಯಮದಲ್ಲಿ ಸಂಗ್ರಹಿಸಲಾದ, ದಾಖಲಿಸಲಾದ ಅಥವಾ ಪ್ರತಿ ಮಾಡಲಾದ ವಿದ್ಯುನ್ಮಾನ ದಾಖಲೆಯನ್ನು ಒಳಗೊಂಡಿರುವ ಯಾವುದೇ ಮಾಹಿತಿಯನ್ನು ಸಹ (ಇದರಲ್ಲಿ ಇನ್ನು ಮುಂದೆ ಗಣಕಯಂತ್ರ ಉತ್ಪನ್ನ ಎಂದು ಉಲ್ಲೇಖಿಸಲಾಗಿದೆ) ಈ ಪ್ರಕರಣದಲ್ಲಿ ನಮೂದಿಸಲಾದ ಷರತ್ತುಗಳು ಮಾಹಿತಿಗೆ ಮತ್ತು ಸಂಬಂಧಪಟ್ಟ ಗಣಕಯಂತ್ರಕ್ಕೆ ಸಂಬಂಧಿಸಿದಂತೆ ತೃಪ್ತಿಕರವಾಗಿದ್ದರೆ, ದಸ್ತಾವೇಜು ಎಂದು ಭಾವಿಸತಕ್ಕದ್ದು ಮತ್ತು ಅಂಗೀಕಾರಾರ್ಹವಾಗಿರುವ ನೇರ ಸಾಕ್ಷ್ಯವಿದ್ದು ಮೂಲ ಪ್ರತಿಯಲ್ಲಿರುವ ಯಾವುದೇ ಒಳಾಂಶವನ್ನು ಅಥವಾ ಅದರಲ್ಲಿ ಹೇಳಲಾದ ಯಾವುದೇ ಸಂಗತಿಯನ್ನು ಸಾಕ್ಷ್ಯವೆಂದು, ಹೆಚ್ಚಿನ ಆಧಾರವಿಲ್ಲದೆ ಮತ್ತು ಮೂಲ ಪ್ರತಿಯನ್ನು ಹಾಜರುಪಡಿಸದಿದ್ದರೂ, ಯಾವುದೇ ವ್ಯವಹರಣೆಯಲ್ಲಿ ಅಂಗೀಕಾರಾರ್ಹವಾಗತಕ್ಕದ್ದು.

(2) ಗಣಕಯಂತ್ರ ಉತ್ಪನ್ನಕ್ಕೆ ಸಂಬಂಧಿಸಿದಂತೆ (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಷರತ್ತುಗಳು ಈ ಮುಂದಿನಂತೆ ಇರತಕ್ಕದ್ದು, ಎಂದರೆ:–

(ಎ) ಗಣಕಯಂತ್ರದ ಬಳಕೆಯ ಮೇಲೆ ಕಾನೂನುಬದ್ಧ ನಿಯಂತ್ರಣ ಹೊಂದಿರುವ ವ್ಯಕ್ತಿಯು ಆ ಅವಧಿಯೊಳಗೆ ನಿಯತವಾಗಿ ನಿರ್ವಹಿಸಿದ ಯಾವುದೇ ಚಟುವಟಿಕೆಗಳ ಉದ್ದೇಶಗಳಿಗಾಗಿ ಮಾಹಿತಿಯನ್ನು ಶೇಖರಿಸಲು ಅಥವಾ ಸಂಸ್ಕರಿಸಲು ಗಣಕಯಂತ್ರವನ್ನು ನಿಯತವಾಗಿ ಬಳಸಿದ ಅವಧಿಯಲ್ಲಿ ಗಣಕಯಂತ್ರ ಉತ್ಪಾದಿಸಿದ ಮಾಹಿತಿಯನ್ನು ಒಳಗೊಂಡ ಗಣಕಯಂತ್ರದ ಹೊರ ಉತ್ಪನ್ನ;

(ಬಿ) ಸದರಿ ಅವಧಿಯಲ್ಲಿ ವಿದ್ಯುನ್ಮಾನ ದಾಖಲೆಯಲ್ಲಿ ಒಳಗೊಂಡ ಮಾಹಿತಿಯ ವಿಧವು ಅಥವಾ ಹಾಗೆ ಒಳಗೊಂಡ ಮಾಹಿತಿಯ ವಿಧದಲ್ಲಿ ಕ್ರಮಬದ್ಧವಾಗಿ ಸದರಿ ಚಟುವಟಿಕೆಗಳ ಸಾಮಾನ್ಯ ಕ್ರಮದಲ್ಲಿ ಗಣಕಯಂತ್ರದೊಳಕ್ಕೆ ಒಳ ಸೇರಿಕೆ;

(ಸಿ) ಸದರಿ ಅವಧಿಯ ಪ್ರಮುಖ ಭಾಗದುದ್ದಕ್ಕೂ ಗಣಕಯಂತ್ರವು ಸಮರ್ಪಕ ಕಾರ್ಯ ನಿರ್ವಹಿಸಿದ್ದರೆ ಅಥವಾ ನಿರ್ವಹಿಸಿರದಿದ್ದರೆ, ಸರಿಯಾಗಿ ಕಾರ್ಯ ನಿರ್ವಹಿಸಿರುವ ಅವಧಿಯಲ್ಲಿ ಅಥವಾ ಕಾರ್ಯನಿರ್ವಹಿಸದೆ ಇದ್ದಂಥ ಯಾವುದೇ ಅವಧಿಯಲ್ಲಿ ವಿದ್ಯುನ್ಮಾನ ದಾಖಲೆಗಳಿಗೆ ಅಥವಾ ಅದರ ಒಳಾಂಶಗಳ ನಿಷ್ಕೃಷ್ಟತೆಗೆ ಯಾವುದೇ ರೀತಿಯ ಪರಿಣಾಮ ಉಂಟಾಗದಿರುವಿಕೆ; ಮತ್ತು

(ಡಿ) ವಿದ್ಯುನ್ಮಾನ ದಾಖಲೆಯಲ್ಲಿರುವ ಮಾಹಿತಿಯ ಪುನರುತ್ಪತ್ತಿಯಾಗುತ್ತಿರುವಿಕೆ ಅಥವಾ ಸದರಿ ಚಟುವಟಿಕೆಗಳ ಸಾಮಾನ್ಯ ಸಂದರ್ಭದಲ್ಲಿ ಗಣಕಯಂತ್ರದಲ್ಲಿ ಒಳಸೇರಿರುವ ಮಾಹಿತಿಯಿಂದ ಪಡೆದಿರುವಿಕೆ.

(3) (2)ನೇ ಉಪಪ್ರಕರಣದ (ಎ) ಖಂಡದಲ್ಲಿ ವಿವರಿಸಿರುವಂತೆ ಆ ಅವಧಿಯಲ್ಲಿ ನಿಯತವಾಗಿ ನಿರ್ವಹಿಸಿದ ಯಾವುದೇ ಚಟುವಟಿಕೆಗಳ ಉದ್ದೇಶಗಳಿಗಾಗಿ ಮಾಹಿತಿಯನ್ನು ಶೇಖರಿಸುವ ಅಥವಾ ಸಂಸ್ಕರಿಸುವ ಕಾರ್ಯವನ್ನು ಯಾವುದೇ ಅವಧಿಯಲ್ಲಿ ಗಣಕಯಂತ್ರಗಳಿಂದ ನಿಯತವಾಗಿ, ಅಂದರೆ:–

(ಎ) ಆ ಅವಧಿಯಲ್ಲಿ ಕಾರ್ಯ ನಿರ್ವಹಿಸುವ ಗಣಕಯಂತ್ರಗಳ ಸಂಯೋಜನೆಯಿಂದ; ಅಥವಾ

(ಬಿ) ಆ ಅವಧಿಯಲ್ಲಿ ಅನುಕ್ರಮವಾಗಿ ಕಾರ್ಯ ನಿರ್ವಹಿಸುವ ವಿವಿಧ ಗಣಕಯಂತ್ರಗಳಿಂದ; ಅಥವಾ

(ಸಿ) ಆ ಅವಧಿಯಲ್ಲಿ ಅನುಕ್ರಮವಾಗಿ ಕಾರ್ಯನಿರ್ವಹಿಸುವ ಗಣಕಯಂತ್ರಗಳ ವಿವಿಧ ಸಂಯೋಜನೆಗಳಿಂದ; ಅಥವಾ

(ಡಿ) ಆ ಅವಧಿಯಲ್ಲಿ ಯಾವುದೇ ಕ್ರಮದಲ್ಲಿ ಒಂದು ಅಥವಾ ಹೆಚ್ಚು ಗಣಕ ಯಂತ್ರಗಳು ಅಥವಾ ಗಣಕಯಂತ್ರಗಳ ಒಂದು ಅಥವಾ ಹೆಚ್ಚಿನ ಸಂಯೋಜನೆಗಳ ಅನುಕ್ರಮ ಕಾರ್ಯಾಚರಣೆ ಒಳಗೊಳ್ಳುವ ಯಾವುದೇ ಇತರ ರೀತಿಗಳಿಂದ

– ನಿರ್ವಹಿಸಿರುವಲ್ಲಿ ಆ ಅವಧಿಯಲ್ಲಿ ಆ ಉದ್ದೇಶಕ್ಕಾಗಿ ಬಳಸಲಾದ ಎಲ್ಲ ಗಣಕಯಂತ್ರಗಳನ್ನು ಈ ಪ್ರಕರಣದ ಉದ್ದೇಶಗಳಿಗಾಗಿ ಒಂದೇ ಗಣಕಯಂತ್ರವೆಂದು ಪರಿಗಣಿಸತಕ್ಕದ್ದು ಮತ್ತು ಈ ಪ್ರಕರಣದಲ್ಲಿ ಗಣಕಯಂತ್ರಕ್ಕೆ ಮಾಡಲಾದ ಉಲ್ಲೇಖಗಳನ್ನು ಅದಕ್ಕನುಗುಣವಾಗಿ ಅರ್ಥೈಸತಕ್ಕದ್ದು.

(4) ಯಾವುವೇ ವ್ಯವಹರಣೆಗಳಲ್ಲಿ ಈ ಪ್ರಕರಣದಿಂದಾಗಿ ಸಾಕ್ಷ್ಯದಲ್ಲಿ ಹೇಳಿಕೆಯೊಂದನ್ನು ನೀಡಲು ಅಪೇಕ್ಷಿಸಿದಾಗ ಈ ಮುಂದಿನ ಯಾವುವೇ ವಿಷಯಗಳ ಬಗ್ಗೆ, ಎಂದರೆ,–

(ಎ) ಹೇಳಿಕೆಯನ್ನೊಳಗೊಂಡ ವಿದ್ಯುನ್ಮಾನ ದಾಖಲೆಯನ್ನು ಗುರುತಿಸುವ ಮತ್ತು ಅದನ್ನು ಯಾವ ರೀತಿಯಲ್ಲಿ ಉತ್ಪಾದಿಸಲಾಯಿತೆಂದು ವಿವರಿಸುವ;

(ಬಿ) ವಿದ್ಯುನ್ಮಾನ ದಾಖಲೆಯನ್ನು ಗಣಕಯಂತ್ರದಿಂದ ಉತ್ಪಾದಿಸಲಾಯಿತೆಂದು ತೋರಿಸುವ ಉದ್ದೇಶಕ್ಕಾಗಿ ಯುಕ್ತವೆನಿಸಬಹುದಾದಂತೆ ಆ ವಿದ್ಯುನ್ಮಾನ ದಾಖಲೆಯ ತಯಾರಿಕೆಯಲ್ಲಿ ಒಳಗೊಂಡ ಯಾವುದೇ ಸಾಧನದ ವಿವರಗಳನ್ನು ನೀಡುವ;

(ಸಿ) (2)ನೇ ಪ್ರಕರಣದಲ್ಲಿ ನಮೂದಿಸಿದ ಷರತ್ತುಗಳಿಗೆ ಸಂಬಂಧಿಸುವ ಯಾವುವೇ ವಿಷಯಗಳೊಂದಿಗೆ ವ್ಯವಹರಿಸುವ, ವಿವರ ನೀಡುವ

– ಒಂದು ಪ್ರಮಾಣಪತ್ರ ಮತ್ತು ಸಂಬಂಧಪಟ್ಟ ಸಾಧನದ ಕಾರ್ಯಾಚರಣೆಗೆ ಅಥವಾ ಸಂಬಂಧಪಟ್ಟ ವ್ಯವಸ್ಥಾಪನೆಗೆ (ಯಾವುದು ಯುಕ್ತವೋ ಅದು) ಸಂಬಂಧಿಸಿದಂತೆ ಜವಾಬ್ದಾರಿಯುತ ಅಧಿಕೃತ ಸ್ಥಾನವನ್ನು ಹೊಂದಿರುವ ಒಬ್ಬ ವ್ಯಕ್ತಿಯು ಸಹಿ ಮಾಡಿರುವನೆಂದು ತಾತ್ಪರ್ಯವಾದುದು ಪ್ರಮಾಣಪತ್ರದಲ್ಲಿ ತಿಳಿಸಿರುವುದಕ್ಕೆ ಸಾಕ್ಷ್ಯವಾಗಿರತಕ್ಕದ್ದು ಮತ್ತು ಈ ಉಪ ಪ್ರಕರಣದ ಉದ್ದೇಶಗಳಿಗಾಗಿ ತಿಳಿಸತಕ್ಕ ವಿಷಯಕ್ಕಾಗಿ ಅದನ್ನು ತಿಳಿಸುವ ವ್ಯಕ್ತಿಯು ತಿಳಿದಿರುವಷ್ಟು ಮತ್ತು ನಂಬುವಷ್ಟರ ಮಟ್ಟಿಗೆ ಇದ್ದರೆ ಸಾಕು.

(5) ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) ಒಂದು ಗಣಕಯಂತ್ರಕ್ಕೆ ಸರಬರಾಜು ಮಾಡುವ ಮಾಹಿತಿಯನ್ನು, ಅದಕ್ಕೆ ಸೂಕ್ತ ವಿಧಾನದಲ್ಲಿ ಸರಬರಾಜು ಮಾಡಿದ್ದರೆ ಮತ್ತು ಹಾಗೆ ನೇರವಾಗಿ ಸರಬರಾಜು ಮಾಡಿದ್ದರೆ ಅಥವಾ ಮನುಷ್ಯನ ಮಧ್ಯಸ್ಥಿಕೆಯಿಂದ ಅಥವಾ ಮಧ್ಯಸ್ಥಿಕೆಯಿಲ್ಲದೆ ಯಾವುದೇ ಸೂಕ್ತ ಸಲಕರಣೆಯಿಂದ ಸರಬರಾಜು ಮಾಡಿದ್ದರೆ ಆ ಮಾಹಿತಿಯನ್ನು ಸರಬರಾಜು ಮಾಡಲಾಗಿದೆಯೆಂದು ಭಾವಿಸತಕ್ಕದ್ದು;

(ಬಿ) ಯಾರೇ ನೌಕರ ನಿರ್ವಹಿಸಿದ ಕಾರ್ಯ ಚಟುವಟಿಕೆಗಳ ಕ್ರಮದಲ್ಲಿ ಆ ಕಾರ್ಯ ಚಟುವಟಿಕೆಗಳ ಉದ್ದೇಶಕ್ಕಾಗಿ ಅನ್ಯಥಾ ಗಣಕಯಂತ್ರದ ಚಾಲನೆಯಿಂದ ಈ ಚಟುವಟಿಕೆಗಳ ಉದ್ದೇಶಗಳಿಗಾಗಿ ಸಂಗ್ರಹಿಸಲಾಗುತ್ತಿರುವ ಅಥವಾ ಸಂಸ್ಕರಿಸಲಾಗುತ್ತಿರುವ ದೃಷ್ಟಿಯಿಂದ ಮಾಹಿತಿ ಸರಬರಾಜು ಮಾಡಿರುವುದನ್ನು ಯುಕ್ತವಾಗಿ ಆ

ಗಣಕಯಂತ್ರಕ್ಕೆ ಸರಬರಾಜು ಮಾಡಿದ್ದರೆ ಆ ಕಾರ್ಯಚಟುವಟಿಕೆಗಳ ಕ್ರಮದಲ್ಲಿ ಅದಕ್ಕೆ ಸರಬರಾಜು ಮಾಡಲಾಗಿದೆಯೆಂದು ಭಾವಿಸತಕ್ಕದ್ದು;

(ಸಿ) ಗಣಕಯಂತ್ರದ ಉತ್ಪಾದನೆಯನ್ನು, ಗಣಕಯಂತ್ರವನ್ನು ನೇರವಾಗಿಯಾಗಲಿ ಅಥವಾ (ಮನುಷ್ಯನ ಮಧ್ಯಸ್ಥಿಕೆಯಿಂದ ಅಥವಾ ಮಧ್ಯಸ್ಥಿಕೆಯಿಲ್ಲದೆ ಆಗಲಿ) ಯಾವುದೇ ಸೂಕ್ತ ಸಲಕರಣೆಯ ಮೂಲಕ ಉತ್ಪಾದಿಸಿರುವಾಗ ಹಾಗೆ ಗಣಕಯಂತ್ರದಿಂದ ಉತ್ಪಾದಿಸಲಾಗಿದೆಯೆಂದು ಭಾವಿಸತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ ಇತರ ಮಾಹಿತಿಯಿಂದ ಪಡೆಯಲಾಗುತ್ತಿರುವ ಮಾಹಿತಿಗೆ ಮಾಡಲಾದ ಯಾವುದೇ ಉಲ್ಲೇಖವನ್ನು ಅದರಿಂದ ಲೆಕ್ಕಾಚಾರ, ಹೋಲಿಕೆ ಅಥವಾ ಯಾವುದೇ ಇತರ ಪ್ರಕ್ರಿಯೆಯ ಮೂಲಕ ಪಡೆಯಲಾಗುತ್ತಿದೆಯೆಂಬುದಕ್ಕೆ ಮಾಡಿದ ಉಲ್ಲೇಖವಾಗಿರತಕ್ಕದ್ದು."

**10**. 67ನೇ ಪ್ರಕರಣದ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"67ಎ. ಅಂಕಿ ಚಿಹ್ನೆಗೆ ಸಂಬಂಧಿಸಿದ ರುಜುವಾತು.**– ಸುರಕ್ಷಿತ ಅಂಕಿ ಚಿಹ್ನೆಯ ಸಂದರ್ಭದಲ್ಲಿಯ ಹೊರತು ಯಾರೇ ವಂತಿಗೆದಾರನ ಅಂಕಿ ಚಿಹ್ನೆಯನ್ನು ಒಂದು ವಿದ್ಯುನ್ಮಾನ ದಾಖಲೆಗೆ ಸೇರಿಸಲಾಗಿದೆಯೆಂದು ಆಪಾದಿಸಿರುವಾಗ ಅಂಥ ಅಂಕಿ ಚಿಹ್ನೆಯು ಆ ವಂತಿಗೆದಾರನ ಅಂಕಿ ಚಿಹ್ನೆಯೆಂದು ರುಜುವಾತುಪಡಿಸತಕ್ಕದ್ದು".

**11**. 73 ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"73ಎ. ಅಂಕಿ ಚಿಹ್ನೆಯ ಪರಿಶೀಲನೆಗೆ ಸಂಬಂಧಿಸಿದ ರುಜುವಾತು.**– ಒಂದು ಅಂಕಿ ಚಿಹ್ನೆಯನ್ನು ಯಾವ ವ್ಯಕ್ತಿಯು ಹಾಕಿರುವನೆಂದು ತಾತ್ಪರ್ಯವಾಗುವುದೋ ಅದು ಅವನದೆಂದು ಖಚಿತಪಡಿಸಿಕೊಳ್ಳುವುದಕ್ಕಾಗಿ, ನ್ಯಾಯಾಲಯವು,–

(ಎ) ಆ ವ್ಯಕ್ತಿಗೆ ಅಥವಾ ನಿಯಂತ್ರಕನಿಗೆ ಅಥವಾ ಪ್ರಮಾಣೀಕರಿಸುವ ಪ್ರಾಧಿಕಾರಕ್ಕೆ ಅಂಕಿಚಿಹ್ನೆ ಪ್ರಮಾಣ ಪತ್ರವನ್ನು ಹಾಜರುಪಡಿಸಬೇಕೆಂದು;

(ಬಿ) ಅಂಕಿ ಚಿಹ್ನೆ ಪ್ರಮಾಣ ಪತ್ರದಲ್ಲಿ ಪಟ್ಟಿ ಮಾಡಿದ ಸಾರ್ವಜನಿಕ ಕೀಲಿಯನ್ನು ಬಳಸಿ ಆ ವ್ಯಕ್ತಿಯು ಸೇರಿಸಿರುವುದಾಗಿ ತಾತ್ಪರ್ಯವಾಗುವ ಅಂಕಿಚಿಹ್ನೆಯನ್ನು ಪರಿಶೀಲಿಸುವಂತೆ ನಿರ್ದೇಶನ ನೀಡಬಹುದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ "ನಿಯಂತ್ರಕ" ಎಂದರೆ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 – ಇದರ ಪ್ರಕರಣ 17ರ (1)ನೇ ಉಪ ಪ್ರಕರಣದ ಮೇರೆಗೆ ನೇಮಿಸಲಾದ ನಿಯಂತ್ರಕ".

**12**. 81ನೇ ಪ್ರಕರಣದ ನಂತರ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"81ಎ. ವಿದ್ಯುನ್ಮಾನ ನಮೂನೆಗಳಲ್ಲಿರುವ ರಾಜಪತ್ರಗಳಿಗೆ ಸಂಬಂಧಪಟ್ಟ ಪೂರ್ವಭಾವನೆ.**– ಅಧಿಕೃತ ರಾಜಪತ್ರವೆಂಬುದಾಗಿ ತಾತ್ಪರ್ಯವಾಗುವ ಅಥವಾ ಯಾರೇ ವ್ಯಕ್ತಿಯು ಇಡಬೇಕೆಂದು ಯಾವುದೇ ಕಾನೂನಿನ ಮೂಲಕ ನಿರ್ದೇಶಿಸಲಾದ ವಿದ್ಯುನ್ಮಾನ ದಾಖಲೆಯೆಂದು ತಾತ್ಪರ್ಯವಾಗುವ ಪ್ರತಿಯೊಂದು ವಿದ್ಯುನ್ಮಾನ ದಾಖಲೆಯನ್ನು ಕಾನೂನಿನ ಅಗತ್ಯಪಡಿಸುವಂಥ ನಮೂನೆಯಲ್ಲಿ ಗಣನೀಯವಾಗಿ ಇಟ್ಟರೆ ಮತ್ತು ಸಮುಚಿತ ಅಭಿರಕ್ಷೆಯಿಂದ ಹಾಜರುಪಡಿಸಿದರೆ, ಅಂಥ ಪ್ರತಿಯೊಂದು ವಿದ್ಯುನ್ಮಾನ ದಾಖಲೆಯ ನೈಜತೆಯ ಬಗ್ಗೆ ನ್ಯಾಯಾಲಯವು ಪೂರ್ವಭಾವನೆಯನ್ನು ಮಾಡಿಕೊಳ್ಳತಕ್ಕದ್ದು".

**13**. 85ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:–

**"85ಎ. ವಿದ್ಯುನ್ಮಾನ ಒಪ್ಪಂದಗಳಿಗೆ ಸಂಬಂಧಿಸಿದ ಪೂರ್ವಭಾವನೆ.**– ನ್ಯಾಯಾಲಯವು, ಪಕ್ಷಕಾರರ ಅಂಕಿ ಚಿಹ್ನೆಗಳನ್ನು ಒಳಗೊಂಡ ಒಂದು ಒಪ್ಪಂದವೆಂಬುದಾಗಿ ತಾತ್ಪರ್ಯವಾಗುವ ಪ್ರತಿಯೊಂದು ವಿದ್ಯುನ್ಮಾನ ದಾಖಲೆಯನ್ನು ಆ ಪಕ್ಷಕಾರರ ಅಂಕಿ ಚಿಹ್ನೆಗಳನ್ನು ಸೇರಿಸುವ ಮೂಲಕ ಆಖೈರುಗೊಳಿಸಲಾಗಿದೆಯೆಂದು ಪೂರ್ವಭಾವನೆ ಮಾಡತಕ್ಕದ್ದು.

**85ಬಿ. ವಿದ್ಯುನ್ಮಾನ ದಾಖಲೆಗಳಿಗೆ ಮತ್ತು ಅಂಕಿ ಚಿಹ್ನೆಗಳಿಗೆ ಸಂಬಂಧಿಸಿದ ಪೂರ್ವಭಾವನೆ.**– (1) ಸುರಕ್ಷಿತ ವಿದ್ಯುನ್ಮಾನ ದಾಖಲೆಯನ್ನು ಒಳಗೊಳ್ಳುವ ಯಾವುವೇ ವ್ಯವಹರಣೆಗಳಲ್ಲಿ, ನ್ಯಾಯಾಲಯವು, ತದ್ವಿರುದ್ಧವಾದುದು ರುಜುವಾತಾದ ಹೊರತು, ಸುರಕ್ಷಿತ ಸ್ಥಾನಮಾನಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಸಮಯದ ತರುವಾಯ ಆ ಸುರಕ್ಷಿತ ವಿದ್ಯುನ್ಮಾನ ದಾಖಲೆಯನ್ನು ಯಾವುದೇ ವ್ಯತ್ಯಾಸ ಮಾಡಿಲ್ಲ ಎಂಬುದಾಗಿ ಪೂರ್ವ ಭಾವನೆ ಮಾಡತಕ್ಕದ್ದು.

(2) ಸುರಕ್ಷಿತ ಅಂಕಿ ಚಿಹ್ನೆಯನ್ನು ಒಳಗೊಂಡಿರುವ ಯಾವುವೇ ವ್ಯವಹರಣೆಗಳಲ್ಲಿ ನ್ಯಾಯಾಲಯವು, ತದ್ವಿರುದ್ಧವಾದುದನ್ನು ರುಜುವಾತು ಪಡಿಸದ ಹೊರತು,–

(ಎ) ವಿದ್ಯುನ್ಮಾನ ದಾಖಲೆಗೆ ಸಹಿ ಮಾಡುವ ಅಥವಾ ಅದನ್ನು ಅನುಮೋದಿಸುವ ಉದ್ದೇಶದಿಂದ ವಂತಿಗೆದಾರನು ಸುರಕ್ಷಿತ ಅಂಕಿ ಚಿಹ್ನೆಯನ್ನು ಸೇರಿಸಿದ್ದಾನೆಂದು;

(ಬಿ) ಸುರಕ್ಷಿತ ವಿದ್ಯುನ್ಮಾನ ದಾಖಲೆ ಅಥವಾ ಸುರಕ್ಷಿತ ಅಂಕಿ ಚಿಹ್ನೆಯ ಸಂದರ್ಭವನ್ನು ಹೊರತುಪಡಿಸಿ, ಈ ಪ್ರಕರಣದಲ್ಲಿರುವುದಾವುದೂ, ವಿದ್ಯುನ್ಮಾನ ದಾಖಲೆಯ ಅಥವಾ ಯಾವುದೇ ಅಂಕಿ ಚಿಹ್ನೆಯ ಅಧಿಪ್ರಮಾಣತೆ ಮತ್ತು ಅಖಂಡತೆಗೆ ಸಂಬಂಧಿಸಿ ಯಾವುದೇ ಪೂರ್ವಭಾವನೆಯನ್ನು ಸೃಜಿಸತಕ್ಕದ್ದಲ್ಲ

– ಎಂದು ಪೂರ್ವಭಾವನೆ ಮಾಡತಕ್ಕದ್ದು.

**85ಸಿ. ಅಂಕಿಚಿಹ್ನೆ ಪ್ರಮಾಣಪತ್ರಗಳಿಗೆ ಸಂಬಂಧಿಸಿದ ಪೂರ್ವಭಾವನೆ.–** ನ್ಯಾಯಾಲಯವು, ತದ್ವಿರುದ್ಧವಾದುದು ರುಜುವಾತಾದ ಹೊರತು, ಪ್ರಮಾಣಪತ್ರವನ್ನು ವಂತಿಗೆದಾರನು ಅಂಗೀಕರಿಸಿದ್ದರೆ, ವಂತಿಗೆದಾರ ಮಾಹಿತಿಯೆಂದು ನಿರ್ದಿಷ್ಟಪಡಿಸಲಾದ ಮತ್ತು ಪರಿಶೀಲಿಸದಿರುವ ಮಾಹಿತಿಯನ್ನು ಹೊರತುಪಡಿಸಿ, ಅಂಕಿಚಿಹ್ನೆ ಪ್ರಮಾಣಪತ್ರದಲ್ಲಿ ಪಟ್ಟಿ ಮಾಡಲಾದ ಮಾಹಿತಿ ಸರಿಯಾಗಿದೆಯೆಂದು ಪೂರ್ವಭಾವನೆ ಮಾಡತಕ್ಕದ್ದು."

**14.** 88ನೇ ಪ್ರಕರಣದ ನಂತರ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"88ಎ. ವಿದ್ಯುನ್ಮಾನ ಸಂದೇಶಗಳಿಗೆ ಸಂಬಂಧಿಸಿದ ಪೂರ್ವಭಾವನೆ.–** ನ್ಯಾಯಾಲಯವು, ಯಾವ ವಿಳಾಸದಾರನಿಗೆ ತಲುಪಿಸಬೇಕಾಗಿದೆಯೆಂದು ತಾತ್ಪರ್ಯವಾಗುವುದೋ ಆ ವ್ಯಕ್ತಿಗೆ ಮೂಲಕರ್ತನು ವಿದ್ಯುನ್ಮಾನ ಅಂಚೆ ರವಾನೆದಾರನ ಮೂಲಕ ಕಳುಹಿಸಿದ ವಿದ್ಯುನ್ಮಾನ ಸಂದೇಶವು ಅವನ ಗಣಕಯಂತ್ರದಲ್ಲಿ ಅಳವಡಿಸಿದ ಸಂದೇಶಕ್ಕೆ ಸಂವಾದಿಯಾದುದು ಎಂದು ಪೂರ್ವಭಾವನೆ ಮಾಡತಕ್ಕದ್ದು. ಆದರೆ ನ್ಯಾಯಾಲಯವು ಯಾರಿಂದ ಸಂದೇಶ ಕಳಿಸಲಾಗಿದೆಯೋ ಅಂಥ ವ್ಯಕ್ತಿಯ ಬಗ್ಗೆ ಯಾವುದೇ ಪೂರ್ವಭಾವನೆ ಮಾಡಿಕೊಳ್ಳತಕ್ಕದ್ದಲ್ಲ.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ವಿಳಾಸದಾರ" ಮತ್ತು "ಮೂಲಕರ್ತ" ಎಂಬ ಪದಾವಳಿಗಳು ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 – ಇದರ 2ನೇ ಪ್ರಕರಣದ (1)ನೇ ಉಪ ಪ್ರಕರಣದ (ಬಿ) ಮತ್ತು (ಜೆಡ್‌ಎ) ಖಂಡಗಳಲ್ಲಿ ಅವುಗಳಿಗೆ ಗೊತ್ತುಪಡಿಸಿದ ಅರ್ಥಗಳನ್ನೇ ಅನುಕ್ರಮವಾಗಿ ಹೊಂದಿರತಕ್ಕದ್ದು".

**15.** 90ನೇ ಪ್ರಕರಣದ ನಂತರ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"90ಎ ಐದು ವರ್ಷಗಳಷ್ಟು ಹಳೆಯ ವಿದ್ಯುನ್ಮಾನ ದಾಖಲೆಗಳಿಗೆ ಸಂಬಂಧಿಸಿದ ಪೂರ್ವಭಾವನೆ.–** ಐದು ವರ್ಷಗಳಷ್ಟು ಹಳೆಯದೆಂದು ತಾತ್ಪರ್ಯವಾಗುವ ಅಥವಾ ರುಜುವಾತಾದ ಯಾವುದೇ ವಿದ್ಯುನ್ಮಾನ ದಾಖಲೆಯನ್ನು ನ್ಯಾಯಾಲಯವು, ಆ ನಿರ್ದಿಷ್ಟ ಪ್ರಕರಣದಲ್ಲಿ ಸೂಕ್ತವೆಂದು ಭಾವಿಸುವ ಯಾವುದೇ ಅಭಿರಕ್ಷೆಯಿಂದ ಹಾಜರುಪಡಿಸಿದಾಗ, ನ್ಯಾಯಾಲಯವು ಯಾರೇ ನಿರ್ದಿಷ್ಟ ವ್ಯಕ್ತಿಯ ಅಂಕಿ ಚಿಹ್ನೆಯೆಂದು ತಾತ್ಪರ್ಯವಾಗುವ ಅಂಕಿ ಚಿಹ್ನೆಯನ್ನು ಅವನು ಅಥವಾ ಅವನಿಂದ ಈ ಸಂಬಂಧದಲ್ಲಿ ಅಧಿಕೃತನಾದ ಯಾರೇ ವ್ಯಕ್ತಿಯು ಸೇರಿಸಿರುವುದಾಗಿ ಪೂರ್ವಭಾವನೆ ಮಾಡಬಹುದು.

**ವಿವರಣೆ.–** ವಿದ್ಯುನ್ಮಾನ ದಾಖಲೆಗಳು ಸಹಜವಾಗಿ ಯಾವ ಸ್ಥಳದಲ್ಲಿರಬೇಕೋ ಅಲ್ಲಿದ್ದರೆ ಮತ್ತು ಯಾರ ರಕ್ಷಣೆಯಲ್ಲಿರಬೇಕೋ ಹಾಗೆ ಇದ್ದಾಗ ಮಾತ್ರ ಅವುಗಳು ಸರಿಯಾದ ಅಭಿರಕ್ಷೆಯಲ್ಲಿರುವವೆಂದು ಹೇಳಲಾಗುತ್ತದೆ. ಆದರೆ ಅದು ಕಾನೂನು ಸಮ್ಮತ ಮೂಲದಲ್ಲಿದೆಯೆಂದು ರುಜುವಾತಾದರೆ ಅಥವಾ ನಿರ್ದಿಷ್ಟ ಪ್ರಕರಣದ ಪರಿಸ್ಥಿತಿಗಳು ಅಂಥ ಮೂಲವನ್ನು ಸಂಭವನೀಯಗೊಳಿಸುವಂತಿದ್ದರೆ ಯಾವುದೇ ಅಭಿರಕ್ಷೆಯು ಅನುಚಿತವಲ್ಲ.

ಈ ವಿವರಣೆಯು 81ಎ ಪ್ರಕರಣಕ್ಕೆ ಸಹ ಅನ್ವಯಿಸುತ್ತದೆ".

**16.** 131ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"131. ಇನ್ನೊಬ್ಬ ವ್ಯಕ್ತಿಯ ಸ್ವಾಧೀನದಲ್ಲಿದ್ದು ಅವನು ಹಾಜರುಪಡಿಸಲು ನಿರಾಕರಿಸಬಹುದಾದ ದಸ್ತಾವೇಜುಗಳನ್ನು ಅಥವಾ ವಿದ್ಯುನ್ಮಾನ ದಾಖಲೆಗಳನ್ನು ಹಾಜರುಪಡಿಸುವುದು.–** ತನ್ನ ಸ್ವಾಧೀನದಲ್ಲಿದ್ದ ದಸ್ತಾವೇಜುಗಳನ್ನು ಅಥವಾ ತನ್ನ ನಿಯಂತ್ರಣದಲ್ಲಿರುವ ವಿದ್ಯುನ್ಮಾನ ದಾಖಲೆಗಳನ್ನು ಹಾಜರುಪಡಿಸಲು ನಿರಾಕರಿಸುವ ಹಕ್ಕು ಹೊಂದಿರುವ ಯಾರೇ ವ್ಯಕ್ತಿಯು,

ಹಾಜರುಪಡಿಸಲು ಸಮ್ಮತಿಸಿದ ಹೊರತು ಅಂಥ ಸ್ವಾಧೀನದಲ್ಲಿರುವುದನ್ನು ಮತ್ತು ನಿಯಂತ್ರಣದಲ್ಲಿರುವುದನ್ನು ಬೇರೊಬ್ಬ ವ್ಯಕ್ತಿಯು ತಾನಾಗಿಯೇ ಅವುಗಳನ್ನು ಹಾಜರುಪಡಿಸಲು ಸಮ್ಮತಿಸಿದ ಹೊರತು ಯಾರೇ ವ್ಯಕ್ತಿಯನ್ನು ಒತ್ತಾಯಪಡಿಸತಕ್ಕದ್ದಲ್ಲ."

**ಮೂರನೇ ಅನುಸೂಚಿ**

**(93ನೇ ಪ್ರಕರಣವನ್ನು ನೋಡಿ)**

**ಬ್ಯಾಂಕರ್ ಪುಸ್ತಕ ಸಾಕ್ಷ್ಯ ಅಧಿನಿಯಮ, 1891ಕ್ಕೆ ತಿದ್ದುಪಡಿಗಳು**

**(1891ರ 18)**

1. 2ನೇ ಪ್ರಕರಣದಲ್ಲಿ,–

(ಎ) (3)ನೇ ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

(3) "ಬ್ಯಾಂಕರ್ ಪುಸ್ತಕಗಳು" ಎಂಬುದರಲ್ಲಿ, ಲಿಖಿತ ರೂಪದಲ್ಲಿರುವ ಖಾತಾ ಪುಸ್ತಕಗಳು, ದಿನ ಪುಸ್ತಕಗಳು, ನಗದು ಪುಸ್ತಕಗಳು, ಲೆಕ್ಕ ಪುಸ್ತಕಗಳು ಮತ್ತು ಅಡಕ ತಟ್ಟೆ, ಮುದ್ರಿಕೆ, ಪಟ್ಟಿಗಳಲ್ಲಿ ಸಂಗ್ರಹಿಸಲಾದ ದತ್ತಾಂಶ ಮುದ್ರಿತ ಪ್ರತಿಗಳ ಅಥವಾ ವಿದ್ಯುನ್ಮಾನ ಕಾಂತೀಯ ದತ್ತಾಂಶ ಸಂಗ್ರಹಸಾಧನದ ಯಾವುದೇ ಇತರ ನಮೂನೆಯಲ್ಲಿರುವ ಬ್ಯಾಂಕಿನ ಸಾಮಾನ್ಯ ವ್ಯವಹಾರದಲ್ಲಿ ಬಳಸುವ ಎಲ್ಲಾ ಇತರ ಪುಸ್ತಕಗಳೂ ಒಳಗೊಳ್ಳುತ್ತವೆ."

(ಬಿ) 8ನೇ ಖಂಡಕ್ಕೆ ಬದಲಾಗಿ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(8) "ಪ್ರಮಾಣಿತ ಪ್ರತಿ " ಎಂದರೆ,–

(ಎ) ಒಂದು ಬ್ಯಾಂಕಿನ ಪುಸ್ತಕಗಳನ್ನು ಲಿಖಿತ ರೂಪದಲ್ಲಿ ನಿರ್ವಹಿಸಿದಾಗ, ಅಂಥ ಪುಸ್ತಕಗಳಲ್ಲಿ ಯಾವುದೇ ನಮೂದಿನ ಪ್ರತಿ ಹಾಗೂ ಅಂಥ ಪ್ರತಿಯ ಕೆಳಭಾಗದಲ್ಲಿ ಅಂಥ ನಮೂದಿನ ಯಥಾ ಪ್ರತಿಯೆಂದು ಬರೆದ ಲಿಖಿತ ಪ್ರಮಾಣಪತ್ರ, ಅಂಥ ನಮೂದು ಬ್ಯಾಂಕಿನ ಒಂದು ಸಾಮಾನ್ಯ ಪುಸ್ತಕದಲ್ಲಿ ಒಳಗೊಂಡಿದೆಯೆಂದು ಮತ್ತು ವ್ಯವಹಾರದ ವಾಡಿಕೆಯ ಅಥವಾ ಸಾಮಾನ್ಯ ಕ್ರಮದಲ್ಲಿ ಮಾಡಲಾಯಿತೆಂದು ಮತ್ತು ಅಂಥ ಪುಸ್ತಕವು ಇನ್ನೂ ಬ್ಯಾಂಕಿನ ಅಭಿರಕ್ಷೆಯಲ್ಲಿದೆಯೆಂದು ಮತ್ತು ಪ್ರತಿಯನ್ನು ಯಾಂತ್ರಿಕ ಅಥವಾ ಇತರ ವಿಧಾನದಿಂದ ಅದು ಪ್ರತಿಯ ನಿಖರತೆಯನ್ನು ಖಚಿತಪಡಿಸುವುದಾಗಿದ್ದರೆ ಆ ಬಗ್ಗೆ ಇನ್ನೂ ಹೆಚ್ಚಿನ ಪ್ರಮಾಣಪತ್ರ, ಆದರೆ ಯಾವ ಪುಸ್ತಕದಿಂದ ಅಂಥ ಪ್ರತಿಯನ್ನು ಸಿದ್ಧಪಡಿಸಿ ಹಾಗೆ ಪ್ರತಿಯನ್ನು ಸಿದ್ಧಪಡಿಸಿದ ದಿನಾಂಕದ ತರುವಾಯ ಬ್ಯಾಂಕ್ ವ್ಯವಹಾರದ ವಾಡಿಕೆಯ ಸಂದರ್ಭದಲ್ಲಿ ನಾಶಪಡಿಸಿದ್ದರೆ ಆ ಬಗ್ಗೆ ಇನ್ನೂ ಒಂದು ಪ್ರಮಾಣಪತ್ರ ಮತ್ತು ಇಂಥ ಪ್ರತಿಯೊಂದು ಪ್ರಮಾಣಪತ್ರಕ್ಕೆ ಬ್ಯಾಂಕಿನ ಪ್ರಧಾನ ಲೆಕ್ಕಿಗ ಅಥವಾ ವ್ಯವಸ್ಥಾಪಕನು ದಿನಾಂಕ ಹಾಕಿ ತಮ್ಮ ರುಜು, ಹೆಸರು ಮತ್ತು ಅಧಿಕೃತ ಪದನಾಮ ಹಾಕಬೇಕು.

(ಬಿ) ಕಾಂತೀಯ ತಟ್ಟೆಗಳು, ಅಡಕ ತಟ್ಟೆ, ಮುದ್ರಿಕೆ, ಪಟ್ಟಿ ಅಥವಾ ಯಾವುದೇ ಇತರ ವಿದ್ಯುನ್ಮಾನ ಕಾಂತೀಯ ದತ್ತಾಂಶ ಸಂಗ್ರಹ ಸಾಧನದಲ್ಲಿ ಸಂಗ್ರಹಿಸಲಾದ ದತ್ತಾಂಶ ಮುದ್ರಿತ ಪ್ರತಿಗಳು, 2ಎ ಪ್ರಕರಣದ ಉಪಬಂಧಗಳಿಗನುಸಾರವಾಗಿ ಪ್ರಮಾಣೀಕರಿಸಲಾದ ಹೇಳಿಕೆಗಳೊಂದಿಗೆ ಅಂತಹ ನಮೂದನೆಯ ಮುದ್ರಿತ ಪ್ರತಿ ಅಥವಾ ಅಂತಹ ಮುದ್ರಿತ ಪ್ರತಿಯ ನಕಲನ್ನು ಒಳಗೊಳ್ಳುತ್ತದೆ."

2. 2ನೇ ಪ್ರಕರಣದ ನಂತರ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:–

**"2ಎ. ಮುದ್ರಿತ ಪ್ರತಿಗಳಲ್ಲಿನ ಷರತ್ತುಗಳು.**– 2ನೇ ಪ್ರಕರಣದ (8)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ನಮೂನೆಯ ಮುದ್ರಿತ ಪ್ರತಿ ಅಥವಾ ಮುದ್ರಿತ ಪ್ರತಿಯ ನಕಲು–ಇವುಗಳೊಂದಿಗೆ ಈ ಮುಂದಿನವುಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(ಎ) ಅದು ಅಂತಹ ನಮೂದನೆಯ ಮುದ್ರಿತ ಪ್ರತಿ ಅಥವಾ ಅಂತಹ ಮುದ್ರಿತ ಪ್ರತಿಯ ಒಂದು ನಕಲು ಎಂಬುದಾಗಿ ಪ್ರಧಾನ ಲೆಕ್ಕಿಗ ಅಥವಾ ಶಾಖಾ ವ್ಯವಸ್ಥಾಪಕನು ಕೊಟ್ಟ ಒಂದು ಪ್ರಮಾಣ ಪತ್ರ; ಮತ್ತು

(ಬಿ) ಗಣಕಯಂತ್ರ ವ್ಯವಸ್ಥೆಯ ಪ್ರಭಾರ ಹೊಂದಿರುವ ವ್ಯಕ್ತಿಯು ಗಣಕಯಂತ್ರ ವ್ಯವಸ್ಥೆಯ ಸಂಕ್ಷಿಪ್ತ ವಿವರಣೆ ಮತ್ತು ಈ ಮುಂದಿನ ವಿವರಗಳನ್ನು ಒಳಗೊಂಡಂತೆ ನೀಡಿರುವ ಒಂದು ಪ್ರಮಾಣ ಪತ್ರ,–

(ಎ) ಅಧಿಕೃತ ವ್ಯಕ್ತಿಗಳು ಮಾತ್ರ ದತ್ತಾಂಶ ಸೇರಿಸುವುದನ್ನು ಅಥವಾ ಯಾವುದೇ ಇತರ ಕಾರ್ಯಾಚರಣೆಯ ನೆರವೇರಿಕೆಯನ್ನು ಖಚಿತಪಡಿಸಿಕೊಳ್ಳಲು ವ್ಯವಸ್ಥೆಯು ಅಂಗೀಕರಿಸಿದ ರಕ್ಷಣಾ ಕ್ರಮಗಳು;

(ಬಿ) ದತ್ತಾಂಶವನ್ನು ಅನಧಿಕೃತವಾಗಿ ಬದಲಾಯಿಸುವುದನ್ನು ತಡೆಯಲು ಮತ್ತು ಪತ್ತೆ ಹಚ್ಚಲು ಅಂಗೀಕರಿಸಿದ ರಕ್ಷಣಾ ಕ್ರಮಗಳು;

(ಸಿ) ವ್ಯವಸ್ಥೆಯ ವಿಫಲತೆಯ ಕಾರಣದಿಂದ ಅಥವಾ ಯಾವುದೇ ಇತರ ಕಾರಣಗಳಿಂದ ಕಳೆದುಕೊಂಡ ದತ್ತಾಂಶವನ್ನು ಪುನಃ ಸ್ವಾಧೀನಪಡಿಸಿಕೊಳ್ಳಲು ದೊರಕುವ ರಕ್ಷಣಾ ಕ್ರಮಗಳು;

(ಡಿ) ದತ್ತಾಂಶವನ್ನು ವ್ಯವಸ್ಥೆಯಿಂದ ಕಾಂತೀಯ ತಟ್ಟೆಗಳ, ಅಡಕತಟ್ಟೆಗಳ, ಮುದ್ರಿಕೆಗಳ ಪಟ್ಟಿಗಳ ಅಥವಾ ಇತರ ವಿದ್ಯುನ್ಮಾನ ಕಾಂತೀಯ ದತ್ತಾಂಶ ಸಂಗ್ರಹ ಸಾಧನಗಳಂತಹ ಹೊರತೆಗೆಯಬಹುದಾದ ಮಾಧ್ಯಮಕ್ಕೆ ವರ್ಗಾಯಿಸುವ ರೀತಿ;

(ಇ) ದತ್ತಾಂಶವನ್ನು ಅಂತಹ ಹೊರತೆಗೆಯಬಹುದಾದ ಮಾಧ್ಯಮಕ್ಕೆ ಸರಿಯಾಗಿ ವರ್ಗಾಯಿಸುವುದನ್ನು ಖಚಿತಪಡಿಸಿಕೊಳ್ಳಲು ಮಾಡುವ ಪರಿಶೀಲನೆಯ ವಿಧಾನ;

(ಎಫ್) ಅಂತಹ ದತ್ತಾಂಶ ಸಂಗ್ರಹ ಸಾಧನಗಳನ್ನು ಗುರುತಿಸುವ ರೀತಿ;

(ಜಿ) ಅಂತಹ ಶೇಖರಣಾ ಸಾಧನಗಳ ಸಂಗ್ರಹಣೆಗೆ ಮತ್ತು ಅಭಿರಕ್ಷೆಗೆ ಇರುವ ವ್ಯವಸ್ಥೆಗಳು;

(ಹೆಚ್) ಗಣಕಯಂತ್ರ ವ್ಯವಸ್ಥೆಯಲ್ಲಿ ಯಾವುದೇ ರೀತಿಯ ಹಸ್ತಕ್ಷೇಪವನ್ನು ತಡೆಯಲು ಮತ್ತು ಪತ್ತೆ ಹಚ್ಚಲು ರಕ್ಷಣಾ ಕ್ರಮಗಳು; ಮತ್ತು

(ಐ) ಗಣಕಯಂತ್ರ ವ್ಯವಸ್ಥೆಯ ಅಖಂಡತೆ ಮತ್ತು ನಿಖರತೆಯನ್ನು ಪ್ರಮಾಣೀಕರಿಸುವ ಯಾವುದೇ ಇತರ ಅಂಶ.

(ಸಿ) ಗಣಕಯಂತ್ರ ವ್ಯವಸ್ಥೆಯ ಪ್ರಭಾರದಲ್ಲಿರುವ ವ್ಯಕ್ತಿಯು, ತಿಳಿದಿರುವಷ್ಟು ಮತ್ತು ನಂಬುವಷ್ಟರ ಮಟ್ಟಿಗೆ ಅಂಥ ಗಣಕಯಂತ್ರ ವ್ಯವಸ್ಥೆಯು ಆ ಮುಖ್ಯ ಕಾಲದಲ್ಲಿ ಸರಿಯಾಗಿ ಕಾರ್ಯನಿರ್ವಹಿಸಿತೆಂದು, ಅವನಿಗೆ ಎಲ್ಲ ಸುಸಂಬದ್ಧ ದತ್ತಾಂಶ ಒದಗಿಸಲಾಯಿತೆಂದು ಮತ್ತು ಸಂಬಂಧಪಟ್ಟ ಮುದ್ರಿತ ಪ್ರತಿಯು ಸುಸಂಬದ್ಧ ದತ್ತಾಂಶದಿಂದ ಸರಿಯಾಗಿ ನಿರೂಪಿಸಬಹುದೆಂದು ಅಥವಾ ಅದರಿಂದ ಸೂಕ್ತವಾಗಿ ಪಡೆಯಲಾಯಿತೆಂದು ಅವನು ಕೊಡಬೇಕಾದ ಮತ್ತೂ ಹೆಚ್ಚಿನ ಪ್ರಮಾಣಪತ್ರ".

# ನಾಲ್ಕನೇ ಅನುಸೂಚಿ

**(94ನೇ ಪ್ರಕರಣ ನೋಡಿ)**

**ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ಕ್ಕೆ ತಿದ್ದುಪಡಿ**

**(1934ರ 2)**

ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934ರ 58ನೇ ಪ್ರಕರಣದ, (2)ನೇ ಉಪ ಪ್ರಕರಣದಲ್ಲಿ (ಪಿ) ಖಂಡದ ನಂತರ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:–

"(ಪಿಪಿ) 45–1ನೇ ಪ್ರಕರಣದ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಬ್ಯಾಂಕುಗಳ ನಡುವೆ ಅಥವಾ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳ ನಡುವೆ ವಿದ್ಯುನ್ಮಾನ ಸಾಧನಗಳ ಮೂಲಕ ನಿಧಿ ವರ್ಗಾವಣೆ, ಅಂಥ ನಿಧಿ ವರ್ಗಾವಣೆಗಳಲ್ಲಿ ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳು ಯಾವ ಷರತ್ತುಗಳಿಗೆ ಒಳಪಟ್ಟು ಪಾಲ್ಗೊಳ್ಳತಕ್ಕದ್ದೋ ಅವುಗಳನ್ನು ಗೊತ್ತುಪಡಿಸುವುದು, ಅಂಥ ನಿಧಿ ವರ್ಗಾವಣೆಗಳ ರೀತಿ ಮತ್ತು ಅಂಥ ನಿಧಿ ವರ್ಗಾವಣೆಗಳಲ್ಲಿ ಪಾಲ್ಗೊಳ್ಳುವವರ ಹಕ್ಕುಗಳು ಮತ್ತು ಬಾಧ್ಯತೆಗಳು – ಇವುಗಳ ವಿನಿಯಮನ".

*　*　*